ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 12 ಸೋಮವಾರ 2022

ಸಂಪುಟ: 43 | ಸಂಚಿಕೆ: 147 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಇಂದಿನಿಂದ ಮಳೆಗಾಲದ ಅಧಿವೇಶನ

● ಕಾಂಗ್ರೆಸ್ ವಿರುದ್ಧ ರೀಡೂ ಅಸ್ತ್ರಕ್ಕೆ ಬಿಜೆಪಿ ಸಿದ್ಧತೆ ● ಸರ್ಕಾರದ ವಿರುದ್ಧ ಮುಗಿಬೀಳಲು ವಿಪಕ್ಷ ಸಜ್ಜು



ಬೆಂಗಳೂರು, ಸೆ.11– ನಾಳೆಯಿಂದ (ಸೋಮವಾರ) ಮಳೆಗಾಲದ ಅಧಿವೇಶನ ಆರಂಭವಾಗಲಿದ್ದು, ಆರಂಭ ದಿಂದಲೇ ಕಲಾಪ ಕಾವೇರುವ ಸಾಧ್ಯತೆ ಇದೆ. ಮಾಜಿ ಸಿಎಂ ಸಿದ್ದರಾಮಯ್ಯ ವಿರುದ್ಧ ಹಳೇ ಕೇಸ್ ಮೂಲಕ ಬಿಜೆಪಿ ಸರ್ಕಾರ ಸೇಡು ತೀರಿಸಿಕೊಳ್ಳಲು ಸಿದ್ಧವಾಗಿದೆ.

ಕಾಂಗ್ರೆಸ್ ಅಸ್ತ್ರವೇನು?

40% ಕಮಿಷನ್ ಆರೋಪ, ನ್ಯಾಯಾಂಗ ತನಿಖೆಗೆ ಒತ್ತಾಯಿಸಲು ಕಾಂಗ್ರೆಸ್ ಸಿದ್ಧತೆ ನಡೆಸುತ್ತಿದೆ. ಲೋಕೋಪಯೋಗಿ, ಆರೋಗ್ಯ ಇಲಾಖೆ, ತೋಟಗಾರಿಕೆ ಇಲಾಖೆಗಳಲ್ಲಿ 40% ಭ್ರಷ್ಟಾಚಾರ ಆರೋಪ ಪ್ರಸ್ತಾಪ ಹಾಗೂ ಪಠ್ಯ ಪುಸ್ತಕ ಪರಿಷ್ಕರಣೆ, ಮಹ ನೀಯರು ಪಠ್ಯಕ್ಕೆ ಕೊಕ್ ಕೊಟ್ಟಿರೋ ವಿಚಾರ ಪ್ರಸ್ತಾಪಿಸುವ ಸಾಧ್ಯತೆ ಇದೆ. ಬೆಂಗಳೂರು ಮಳೆ ಅನಾಹುತ ವಿಚಾರದಲ್ಲಿ ವಾಗ್ದಾಳಿ ನಡೆಸಲು ಸಿದ್ಧತೆ ನಡೆಯುತ್ತಿದೆ. ಬೆಂಗಳೂರಿನ ನಿರ್ವಹಣೆ ಬಿಜೆಪಿ ಕಾಲದಲ್ಲಿ ಸರಿಯಾಗಿ ಆಗಿಲ್ಲ. ಇವತ್ತಿನ ಪರಿಸ್ಥಿತಿಗೆ ಬಿಜೆಪಿ ಕಾರಣ ಎಂದು ಸದನದಲ್ಲಿ ತರಾಟೆ ಹಾಗೂ ಪಿಎಸ್ಐ ನೇಮಕಾತಿ ಹಗರಣ ಪ್ರಸ್ತಾಪಿಸಿ ಸರ್ಕಾರದ ವಿರುದ್ಧ ಮುಗಿಬೀಳಲು ಪ್ಲಾನ್ ಮಾಡಿಕೊಳ್ಳಲಾಗಿದೆ.

ಸರ್ಕಾರದ ಪ್ರತ್ಯಾಸ್ತ್ರವೇನು?

ಸಿದ್ದರಾಮಯ್ಯ ಅವಧಿಯಲ್ಲಿ ಆಗಿರುವ ರೀಡೂ ಹಗರಣ ಪ್ರಸ್ತಾಪಕ್ಕೆ ಸಿದ್ಧತೆ ನಡೆಯುತ್ತಿದೆ. ಕೆಂಪಣ್ಣ ಆಯೋಗದ ವರದಿ ಸದನದಲ್ಲಿ ಮಂಡಿಸಿ ತನಿಖೆಗೆ ಒಪ್ಪಿಸುವ ಬಗ್ಗೆ ಚರ್ಚೆ, ಕಾಂಗ್ರೆಸ್ ಸರ್ಕಾರದ ಸೋಲಾರ್ ಹಗರಣ ಪ್ರಸ್ತಾಪಕ್ಕೂ ಸಿದ್ಧತೆ ನಡೆದಿದೆ. ಕೇವಲ 7 ಸೆಕೆಂಡ್‌ನಲ್ಲಿ ಟೆಂಡರ್ ಪ್ರಕ್ರಿಯೆ ಮುಗಿಸಿದ ಸೋಲಾರ್ ಹಗರಣ, ಕಾಂಗ್ರೆಸ್ ಅವಧಿಯ ವಿದ್ಯುತ್ ಖರೀದಿಯಲ್ಲಿ ಆಗಿರುವ ಅಕ್ರಮ, ಸಿದ್ದರಾಮಯ್ಯ ಕಾಲದಲ್ಲಿ ಇಂಧನ ಇಲಾಖೆಯಲ್ಲಿನ ವಿದ್ಯುತ್ ಹಗರಣ ಹಾಗೂ 2014–15ನೇ ಸಾಲಿನ ಶಿಕ್ಷಕರ ನೇಮಕಾತಿ ಅಕ್ರಮದ ಹಗರಣ ಪ್ರಸ್ತಾಪ ಮಾಡುವ ಸಾಧ್ಯತೆಗಳಿವೆ. ಈಗಾಗಲೇ ಸಿದ್ದು ಕಾಲದ ಶಿಕ್ಷಕರ ನೇಮಕಾತಿಯಲ್ಲಿ ಅಕ್ರಮದ ಬಗ್ಗೆ ಸಿಐಡಿ ತನಿಖೆಗೆ ಒತ್ತಾಯಿಸುವ ಸಾಧ್ಯತೆಗಳಿವೆ.

2015ರಲ್ಲಿ ಅರ್ಕಾವತಿ ಬಡಾವಣೆಯ 541 ಎಕರೆ ರೀಡು ಡಿನೋಟಿಫೈ ಆರೋಪಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಆಗಿನ ಕಾಂಗ್ರೆಸ್ ಸರ್ಕಾರವೇ ನ್ಯಾ.ಕೆಂಪಣ್ಣ ಆಯೋಗ ರಚಿಸಿತ್ತು. ಈ ಆಯೋಗ 2017ರ ಆಗಸ್ಟ್ 23ರಂದು ಸರ್ಕಾರಕ್ಕೆ 4 ಸಂಪುಟಗಳಲ್ಲಿ ಸುಮಾರು 9 ಸಾವಿರ ಪುಟಗಳ ಅಂತಿಮ ವರದಿ ಸಲ್ಲಿಸಿದೆ. ಆದರೆ 5 ವರ್ಷವಾದರೂ ಶಾಸನ ಸಭೆಯಲ್ಲಿ ಇಲ್ಲಿ ತನಕ ನ್ಯಾ.ಕೆಂಪಣ್ಣ ಆಯೋಗದ ವರದಿ ಮಂಡನೆ ಆಗಿಲ್ಲ.

ಈಗ ಇದನ್ನೇ ಅಸ್ತ್ರವನ್ನಾಗಿ ಮಾಡಿಕೊಂಡು ವರದಿ ಮಂಡನೆಗೆ ಹೈಕಮಾಂಡ್ ರಾಜ್ಯ ಸರ್ಕಾರಕ್ಕೆ ಸೂಚಿಸಿದೆ. ಜೊತೆಗೆ ನಿನ್ನೆಯ ಜನಸ್ಪಂದನ ಕಾರ್ಯಕ್ರಮದಲ್ಲಿ ಸಿ.ಟಿ.ರವಿ ರೀಡು ಬಗ್ಗೆ ನೇರವಾಗಿ ಪ್ರಸ್ತಾಪ ಮಾಡಿದ್ದರು. ಈ ಪ್ರಸ್ತಾಪದ ಬೆನ್ನಲ್ಲೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವರದಿ ಮಂಡನೆಗೆ ಕಾನೂನು ತಜ್ಞರ ಮೊರೆ ಹೋಗಿದ್ದಾರೆ.

ಈ ಅಧಿವೇಶನ ಬಿಜೆಪಿ ವರ್ಸಸ್ ಕಾಂಗ್ರೆಸ್ ಫೈಟ್‌ಗೆ ವೇದಿಕೆ ಆಗುವುದು ಖಚಿತವಾದಂತಿದೆ. ಈಗಾಗಲೇ ಅಧಿವೇಶನದಲ್ಲಿ ಸರ್ಕಾರದ ವಿರುದ್ಧ ಭ್ರಷ್ಟಾಚಾರದ ಅಸ್ತ್ರ ಪ್ರಯೋಗಕ್ಕೆ ಕಾಂಗ್ರೆಸ್ ಸಿದ್ಧವಾಗಿದ್ದು, ಸರ್ಕಾರವನ್ನು ಕಟ್ಟಿ ಹಾಕಲು ಕೈ ಪಡೆ ತಯಾರಿ ಮಾಡಿಕೊಂಡಿದೆ. ಇಷ್ಟಲ್ಲದೇ ಅಧಿವೇಶನ ದಿಂದಲೇ 2023ರ ಚುನಾವಣೆಗೆ ರಣಕಹಳೆ ಊದಲು ಕಾಂಗ್ರೆಸ್ ಸಿದ್ಧತೆ ಮಾಡಿಕೊಂಡಂತಿದೆ. ಆದರೆ ಕಾಂಗ್ರೆಸ್ ಅಸ್ತ್ರಕ್ಕೆ ಬಿಜೆಪಿಯಿಂದಲೂ ಪ್ರತ್ಯಾಸ್ತ್ರ ರೆಡಿ ಆಗುತ್ತಿದೆ. ಕಾಂಗ್ರೆಸ್ ಸರ್ಕಾರದ ಹಗರಣಗಳನ್ನು ಇಟ್ಟುಕೊಂಡು ತಿರುಗೇಟು ನೀಡಲು ಸರ್ಕಾರ ಪ್ಲ್ಯಾನ್ ಮಾಡಿದೆ. ಇದಕ್ಕಾಗಿ ಕಾಂಗ್ರೆಸ್ ಹಗರಣಗಳ ಪಟ್ಟಿಯನ್ನು ಬಸವರಾಜ ಬೊಮ್ಮಾಯಿ ಸರ್ಕಾರ ಸಿದ್ಧತೆ ಮಾಡಿಕೊಂಡಿದೆ.

ಸೆ.17ರಿಂದ ಪ್ರಧಾನಿ ಮೋದಿಗೆ ಲಭಿಸಿದ ಉಡುಗೊರೆಗಳ ಹರಾಜು



ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸಾರ್ವಜನಿಕರು, ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು, ಕ್ರೀಡಾಪಟುಗಳು ಹಾಗೂ ಇತರರು ನೀಡಿರುವ 1,200ಕ್ಕೂ ಅಧಿಕ ಉಡುಗೊರೆಗಳ ಹರಾಜು ಪ್ರಕ್ರಿಯೆ ಸೆ.17ರಿಂದ ಅಕ್ಟೋಬರ್ 2ರವರೆಗೆ ಆನ್‌ಲೈನ್‌ನಲ್ಲಿ ನಡೆಯಲಿದೆ. pmmementos.gov.in ವೆಬ್ ಪೋರ್ಟಲ್ ಮೂಲಕ ಹರಾಜು ಪ್ರಕ್ರಿಯೆ ನಡೆಸಲಾಗುತ್ತದೆ. ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ನೀಡಿರುವ ರಾಣಿ ಕಮಲಾಪತಿಯ ವಿಗ್ರಹ, ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಕೊಟ್ಟಿರುವ ಹನುಮಾನ್ ವಿಗ್ರಹ ಮತ್ತು ಸೂರ್ಯನ ಕಲಾಕೃತಿ, ಹಿಮಾಚಲ ಪ್ರದೇಶ ಸಿಎಂ ಜೈರಾಮ್ ಠಾಕೂರ್ ನೀಡಿರುವ ತ್ರಿಶೂಲ ಸೇರಿದಂತೆ 100ರಿಂದ 10 ಲಕ್ಷದವರೆಗಿನ ಮೂಲ ಬೆಲೆಯ ಹಲವು ಉಡುಗೊರೆಗಳನ್ನು ಹರಾಜಿನಲ್ಲಿಡಲಾಗಿದೆ. ಇದರಿಂದ ಸಂಗ್ರಹವಾದ ಹಣವನ್ನು ನಮಾಮಿ ಗಂಗಾ ಯೋಜನೆಗೆ ನೀಡಲಾಗುತ್ತದೆ ಎಂದು ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್‌ನ ಮಹಾನಿರ್ದೇಶಕ ಅದ್ವೈತ್ ಗಡನಾಯಕ್ ಮಾಹಿತಿ ನೀಡಿದ್ದಾರೆ.

ಜೆಇಇ ಅಡ್ವಾನ್ಸ್ಡ್ ಪರೀಕ್ಷೆ

ಕರ್ನಾಟಕದ ಶಿಶಿರ್ ಪ್ರಥಮ

ಸಿಎಂ ಬೊಮ್ಮಾಯಿ ಅಭಿನಂದನೆ

ಬೆಂಗಳೂರು: ಜೆಇಇ ಅಡ್ವಾನ್ಸ್ಡ್ 2022 ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು, ಬೆಂಗಳೂರಿನ ಆರ್.ಕೆ. ಶಿಶಿರ್ ಪ್ರಥಮ ಸ್ಥಾನ ಪಡೆದಿದ್ದಾರೆ.



ಇವರು ಐಐಟಿ ರ್ಝೋನ್‌ನಿಂದ ಪರೀಕ್ಷೆ ಬರೆದವರು. ಹಾಗೆಯೇ ಪೋಲು ಲಕ್ಷ್ಮೀ ಸಾಯಿ ಲೋಹಿತ್ ರೆಡ್ಡಿ 2ನೇ ಮತ್ತು ಥಾಮಸ್ ಬಿಜು ಚೀರಂ ವೇಲಿಲ್ ಮೂರನೇ ಶ್ರೇಯಾಂಕ ಪಡೆದಿದ್ದಾರೆ. ಕಳೆದ ತಿಂಗಳು ಆಗಸ್ಟ್ 28ರಂದು ಪರೀಕ್ಷೆ ನಡೆದಿತ್ತು, ಜೆಇಇ ಅಡ್ವಾನ್ಸ್ಡ್ 2022 ಫಲಿತಾಂಶ: jeeadv.ac.in ಅಧಿಕೃತ ವೆಬ್‌ಸೈಟ್‌ನಲ್ಲಿ ಲಭ್ಯವಿದೆ.

ಈ ಬಾರಿ ಟಾಪ್ 10ರಲ್ಲಿ ಹುಡುಗರೇ ಇರುವುದು ವಿಶೇಷ. ಹುಡುಗಿಯರಲ್ಲಿ 16ನೇ ರ್‍ಯಾಂಕ್ ಅನ್ನು ಐಐಟಿ ದೆಹಲಿ ರ್ಝೋನ್‌ನ ತನಿಷ್ಕಾ ಕಾಬ್ರಾ ಮೊದಲ ಸ್ಥಾನ ಪಡೆದಿದ್ದಾರೆ. ವಂಗಪಲ್ಲಿ ಸಾಯಿ ಸಿದ್ಧಾರ್ಥ್ 4ನೇ ಸ್ಥಾನ, ಮಯಾಂಕ್ ಮೋಟ್ವಾನಿ 5ನೇ ಸ್ಥಾನ, ಪೋಲಿಸೆಟ್ಟಿ ಕಾರ್ತಿಕೇಯ 6ನೇ ಸ್ಥಾನ, ಪ್ರತೀಕ್ ಸಾಹೂ 7ನೇ ಸ್ಥಾನ, ಧೀರಜ್ ಕುರುಕುಂದಾ 8ನೇ ಸ್ಥಾನ, ಮಹಿತ್ 9ನೇ ಸ್ಥಾನ ಹಾಗೂ ಮಹೇಶ್ 10ನೇ ಸ್ಥಾನ ಪಡೆದಿದ್ದಾರೆ. ಜೆ.ಇ.ಇ ಅಡ್ವಾನ್ಸ್ಡ್ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಗಳಿಸಿರುವ ಶಿಶಿರ್‌ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಭಿನಂದನೆ ಸಲ್ಲಿಸಿದ್ದಾರೆ.

ಇಂದು ದಸರಾ ಗಜಪಡೆಗೆ ಫಿರಂಗಿ ತಾಲೀಮು



ಫಿರಂಗಿ ಗಾಡಿಗಳನ್ನು ಸ್ವಚ್ಛಗೊಳಿಸಿ ಸಿದ್ಧತೆ

ಕೋಟೆ ಮಾರಮ್ಮ ದೇವಾಲಯದ ಆವರಣದಲ್ಲಿ ಮಧ್ಯಾಹ್ನ 12 ಗಂಟೆಗೆ ಮೂರು ಸುತ್ತಿನ ಕುಶಾಲತೋಪು ಸಿಡಿಸುವ ಮೂಲಕ ಆನೆ ಮತ್ತು ಕುದುರೆಗಳಿಗೆ ಸಿಡಿಮದ್ದಿನ ತಾಲೀಮು

ಮೈಸೂರು,ಸೆ.11(ಜಿಎ)–ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದಲ್ಲಿ ಭಾಗವಹಿಸಲು ಮೈಸೂರಿನ ಅರಮನೆಯಲ್ಲಿ ಬೀಡುಬಿಟ್ಟಿರುವ ಗಜಪಡೆಗೆ ಹಂತಹಂತವಾಗಿ ವಿವಿಧ ರೀತಿಯ ತಾಲೀಮು ನಡೆಯುತ್ತಿದ್ದು, ನಾಳೆ (ಸೆ.12) ಫಿರಂಗಿ ತಾಲೀಮು ನಡೆಯಲಿದೆ. ಅಕ್ಟೋಬರ್ 5ರಂದು ನಡೆಯಲಿರುವ ವಿಶ್ವವಿಖ್ಯಾತ ಜಂಬೂಸವಾರಿಯಲ್ಲಿ ಪಾಲ್ಗೊಳ್ಳಲಿರುವ ಗಜಪಡೆ ಮತ್ತು ಅಶ್ವಾರೋಹಿದಳದ ಕುದುರೆಗಳು ಭಾರೀ ಶಬ್ದಗಳಿಗೆ ಬೆಚ್ಚದಂತೆ ಅರಮನೆಯ ವರಹಾ ದ್ವಾರದ ಬಳಿಯಿರುವ ಕೋಟೆ ಮಾರಮ್ಮ ದೇವಾಲಯದ ಆವರಣದಲ್ಲಿ ಮೂರು ಸುತ್ತಿನ ಫಿರಂಗಿ ತಾಲೀಮು ನಡೆಯಲಿದ್ದು, ಇದಕ್ಕಾಗಿ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ಕಳೆದ ಆ.7ರಂದು ವೀರನಹೊಸಳ್ಳಿಯಿಂದ ಕ್ಯಾಪ್ಟನ್ ಅಭಿಮನ್ಯು ಜೊತೆಗೆ ಗೋಪಾಲಸ್ವಾಮಿ, ಮಹೇಂದ್ರ, ಅರ್ಜುನ, ಭೀಮ, ಧನಂಜಯ, ಕಾವೇರಿ, ಚೈತ್ರ ಹಾಗೂ ಲಕ್ಷ್ಮಿ ಒಳಗೊಂಡಂತೆ ಮೊದಲ ತಂಡ ಮೈಸೂರು ನಗರವನ್ನು ಪ್ರವೇಶಿಸಿ ಅಂದು ಮಧ್ಯಾಹ್ನ ಅಶೋಕಪುರಂನಲ್ಲಿರುವ ಅರಣ್ಯ ಭವನದಲ್ಲಿ ಮೂರು ಬೀಡು ಬಿಟ್ಟು ನಂತರ ಸಾಂಪ್ರದಾಯಿಕವಾಗಿ ▶ 8ನೇ ಪುಟಕ್ಕೆ

ಇಂದು ದ್ವಿತೀಯ ಪಿಯುಸಿ ಪೂರಕ ಫಲಿತಾಂಶ ಪ್ರಕಟ

ಬೆಂಗಳೂರು, ಸೆ.11– ದ್ವಿತೀಯ ಪಿಯುಸಿ ಪೂರಕ ಪರೀಕ್ಷೆ ಫಲಿತಾಂಶ ನಾಳೆ (ಸೋಮವಾರ) ಪ್ರಕಟವಾಗಲಿದೆ.

ಬೆಳಗ್ಗೆ 11 ಗಂಟೆ ನಂತರ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಫಲಿತಾಂಶ ಪರಿಶೀಲಿಸಬಹುದು. ರಾಜ್ಯ ಪದವಿ ಪೂರ್ವ ಶಿಕ್ಷಣ ಇಲಾಖೆ ಫಲಿತಾಂಶ ಪ್ರಕಟಿಸಲಿದ್ದು, ಇಲಾಖೆ ಅಧಿಕೃತ ವೆಬ್‌ಸೈಟ್ (karresu lts.nic.in) ನಲ್ಲಿ ವಿದ್ಯಾರ್ಥಿಗಳು ಫಲಿತಾಂಶ ನೋಡಬಹುದು ಎಂದು ರಾಜ್ಯ ಶಿಕ್ಷಣ ಸಚಿವ ಬಿ.ನಾಗೇಶ್ ತಿಳಿಸಿದ್ದಾರೆ.

ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ವಿಫಲರಾದ ಅಥವಾ ಯಾವುದೇ ವಿಷಯದಲ್ಲಿ ಅಂಕಗಳನ್ನು ಸುಧಾರಿಸಲು ಬಯಸುವ ವಿದ್ಯಾರ್ಥಿಗಳು ಪದವಿ ಪೂರ್ವ ಶಿಕ್ಷಣ ಇಲಾಖೆ ನಡೆಸುವ ಪೂರಕ ಪರೀಕ್ಷೆ ವೇಳೆ ಬರೆಯಬಹುದು. ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಯಲ್ಲಿ ಅರ್ಹತೆ ಪಡೆಯಲು ವಿದ್ಯಾರ್ಥಿಗಳು ಪ್ರತಿ ▶ 8ನೇ ಪುಟಕ್ಕೆ

ಹುತಾತ್ಮ ಅರಣ್ಯ ರಕ್ಷಕರ ಕುಟುಂಬಕ್ಕೆ ಪರಿಹಾರದ ಮೊತ್ತ 50 ಲಕ್ಷಕ್ಕೆ ಏರಿಕೆ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಣೆ

ಬೆಂಗಳೂರು, ಸೆ.11– ಹುತಾತ್ಮ ಅರಣ್ಯ ರಕ್ಷಕರ ಕುಟುಂಬಕ್ಕೆ ನೀಡುತ್ತಿದ್ದ ಪರಿಹಾರದ ಮೊತ್ತ 30 ಲಕ್ಷದಿಂದ 50 ಲಕ್ಷ ರೂ.ಗೆ ಏರಿಕೆ ಮಾಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದ್ದಾರೆ.




ಅರಣ್ಯ ಇಲಾಖೆ ಕಟ್ಟಡದಲ್ಲಿ ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನಾಚರಣೆಯ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿ ಹುತಾತ್ಮ ಅರಣ್ಯ ಇಲಾಖೆ ಸಿಬ್ಬಂದಿಗೆ ಗೌರವಾರ್ಪಣೆ ಸಲ್ಲಿಸಿದರು. ಬಳಿಕ ಮಾತನಾಡಿದ ಅವರು, ದಿವಂಗತ ಅರಣ್ಯ ಸಚಿವ ಉಮೇಶ್ ಕತ್ತಿ ಅವರನ್ನು ಸ್ಮರಿಸಿಕೊಂಡರು.

ಮನುಷ್ಯ–ಪ್ರಾಣಿ ಸಂಘರ್ಷ ಕಮ್ಮಿ ಮಾಡಬೇಕಿದೆ. ಮನುಷ್ಯ ಕಾಡಲ್ಲಿ ಹೆಚ್ಚು ಇದ್ದಷ್ಟೂ ಪ್ರಾಣಿಗಳು ಹೊರಗೆ ಬರುತ್ತವೆ. ಅರಣ್ಯ ಇಲಾಖೆ ಈ ಸಂಘರ್ಷ ಕಮ್ಮಿ ಮಾಡುವತ್ತ ಗಮನ ಕೊಡಬೇಕು. ಆನೆ–ಮಾನವ ಸಂಘರ್ಷ ಹೆಚ್ಚಿದೆ. ಇದನ್ನು ತಡೆಯಲು ಹೊಸ ವಿಧಾನಗಳ ಅಳವಡಿಕೆ ಅಗತ್ಯ ಇದೆ. ಆನೆಗಳು ಜಮೀನಿಗೆ ಬಾರದಂತೆ ತಡೆಯಲು ಹೊಸ ವಿಧಾನಗಳ ಅಳವಡಿಕೆಗೆ ನೂರು ಕೋಟಿ ರೂ. ಬಿಡುಗಡೆ ಮಾಡಿದ್ದೇವೆ. ಈ ನಿಟ್ಟಿನಲ್ಲಿ ಉಮೇಶ್ ಕತ್ತಿಯವರನ್ನು ಸ್ಮರಿಸಿಕೊಳ್ಳುತ್ತೇನೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಬಂಡೀಪುರದಲ್ಲಿ ಕತ್ತಿಯವರು ಹೊಸ ವಿಧಾನಕ್ಕೆ ಚಾಲನೆ ಕೊಟ್ಟಿದ್ದರು. ಇತ್ತೀಚಿನ ದಿನಗಳಲ್ಲಿ ಇಡೀ ಫಾರೆಸ್ಟ್ ರೇಂಜ್ ಓಡಾಡಿದ ಸಚಿವರು ಅಂದರೆ ಅದು ಉಮೇಶ್ ಕತ್ತಿ. ಕತ್ತಿಯವರು ಅರಣ್ಯಾಧಿಕಾರಿಗಳ ಮೇಲೆ ಯಾವುದೇ ಒತ್ತಡ ಹಾಕುತ್ತಿರಲಿಲ್ಲ. ಕತ್ತಿಯವರು ಇನ್ನಷ್ಟು ವರ್ಷ ನಮ್ಮ ▶ 8ನೇ ಪುಟಕ್ಕೆ

10 ದಿನದೊಳಗೆ ಹೊಸ ರಾಜಕೀಯ ಪಕ್ಷ ರಚನೆ

ಬಾರಮುಲ್ಲಾ, ಸೆ.11–ಇನ್ನು ಹತ್ತು ದಿನದೊಳಗೆ ನೂತನ ರಾಜಕೀಯ ಪಕ್ಷವನ್ನು ರಚಿಸಲಾಗುವುದು ಎಂದು ಇತ್ತೀಚೆಗಷ್ಟೇ ಕಾಂಗ್ರೆಸ್ ತೊರೆದ ಗುಲಾಂ ನಬಿ ಆಜಾದ್ ಭಾನುವಾರ ಹೇಳಿದ್ದಾರೆ ಮತ್ತು ನೂತನ ಪಕ್ಷದ ಸಿದ್ಧಾಂತವು 'ಸ್ವತಂತ್ರ'ವಾಗಿರುತ್ತದೆ ಎಂದು ಪ್ರತಿಪಾದಿಸಿದ್ದಾರೆ. ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯ ಸ್ಥಾನಮಾನವನ್ನು ಮರು ಪಡೆಯುವುದು ಹಾಗೂ ಜನರ ಉದ್ಯೋಗ, ಭೂಮಿಯ ಹಕ್ಕುಗಳಿಗಾಗಿ ಹೋರಾಡುವುದು ಹೊಸ ರಾಜಕೀಯ ಪಕ್ಷದ ಕಾರ್ಯಸೂಚಿಯಾಗಿದೆ ಎಂದು ಹೇಳಿದ್ದಾರೆ. ಕಾಶ್ಮೀರ ಕಣಿವೆ ಪ್ರದೇಶ ಬಾರಮುಲ್ಲಾದಲ್ಲಿ ತನ್ನ ಮೊದಲ ಸಾರ್ವಜನಿಕ ಸಮಾವೇಶವನ್ನುದ್ದೇಶಿಸಿ ಮಾತನಾಡಿದ ಗುಲಾಂ ನಬಿ ಆಜಾದ್, ನನ್ನೊಂದಿಗೆ ನಿಂತಿರುವ ನನ್ನ ಸಹೋದ್ಯೋಗಿಗಳಿಗೆ ಧನ್ಯವಾದ ಹೇಳುತ್ತೇನೆ. ಅವರು ನನ್ನ ಹೊಸ ಪಕ್ಷದ ಮೂಲವಾಗಿದ್ದಾರೆ. ಮುಂದಿನ 10 ದಿನಗಳಲ್ಲಿ ಹೊಸ ಪಕ್ಷವನ್ನು ಘೋಷಿಸಲಾಗುವುದು, ಅದರ ಸಿದ್ಧಾಂತ ಮತ್ತು ಚಿಂತನೆಗಳು ನನ್ನ ಹೆಸರಿನಂತೆ ಸ್ವತಂತ್ರವಾಗಿರುತ್ತವೆ ಎಂದು ಗುಲಾಂ ನಬಿ ಆಜಾದ್ ತಿಳಿಸಿದರು.



ಗುಲಾಂ ನಬಿ ಆಜಾದ್

ಬೆಂಗಳೂರು ರಾಜಕಾಲುವೆ ಒತ್ತುವರಿ ಹಿಂದೆ IT ಕಂಪನಿಗಳ ಕೈವಾಡ

ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಆರೋಪ

ಧಾರವಾಡ,ಸೆ.11–ಬೆಂಗಳೂರಿನ ರಾಜಕಾಲುವೆ ಒತ್ತುವರಿಯ ಹಿಂದೆ ಐಟಿ ಕಂಪನಿಗಳ ಕೈವಾಡವೂ ಇದೆ, ಆಗರ್ಭ ಶ್ರೀಮಂತರ ಕಟ್ಟಡದಿಂದಲೂ ಒತ್ತುವರಿಯಾಗಿದೆ ಎಂದು ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಆರೋಪ ಮಾಡಿದ್ದಾರೆ.



ಸಂತೋಷ್ ಹೆಗ್ಡೆ

ಬೆಂಗಳೂರಿನಲ್ಲಿ ರಾಜಕಾಲುವೆ ಒತ್ತುವರಿ ವಿಚಾರಕ್ಕೆ ಸಂಬಂಧಿಸಿದಂತೆ ಧಾರವಾಡದಲ್ಲಿ ಭಾನುವಾರ ಮಾತನಾಡಿದ ಅವರು, ಬೆಂಗಳೂರಿನಲ್ಲಿ ಜನಸಂಖ್ಯೆ ಜಾಸ್ತಿಯಾದಂತೆ ಬಡಾವಣೆಗಳೂ ಜಾಸ್ತಿಯಾಗ್ತಿವೆ. ಸುಭಾಷ್‌ನಗರ ಬಸ್ ನಿಲ್ದಾಣ ಕೆರೆಯಾಗಿತ್ತು, ಸಂಪಂಗಿ ಕೆರೆಯಲ್ಲಿ ಕ್ರೀಡಾಂಗಣ ಮಾಡಿದ್ದಾರೆ. ಅಕ್ಕಿ ತಿಮ್ಮನಹಳ್ಳಿಯಲ್ಲಿ ಹಾಕಿ ಕ್ರೀಡಾಂಗಣ ಮಾಡಿದ್ದಾರೆ. ಎಲ್ಲ ಕೆರೆಗಳನ್ನು ಬಿಡಿಎ ಮುಖಾಂತರ ಲಾಭಕ್ಕಾಗಿ ಬಳಕೆ ಮಾಡಿದ್ದಾರೆ. ಇದರಲ್ಲಿ ಜನರ ಹಾಗೂ ಅಧಿಕಾರದಲ್ಲಿ ಇದ್ದವರ, ಇಲ್ಲದವರ ದುರಾಸೆಯೂ ಇದೆ. ಐಟಿ ಕಂಪನಿಗಳ ಕೈವಾಡವೂ ಇದೆ. ಆಗರ್ಭ ಶ್ರೀಮಂತರ ಕಟ್ಟಡಗಳಿಂದಲೂ ಒತ್ತುವರಿಯಾಗಿದೆ ಎಂದು ದೂರಿದ್ದಾರೆ. ಬಹಳ ಹಿಂದೆಯೇ ನಾನು ರಾಜಕಾಲುವೆ ಒತ್ತುವರಿ ಬಗ್ಗೆ ಎರಡು ವರದಿ ಕೊಟ್ಟಿದ್ದೇನೆ. ಎನ್‌ಜಿಟಿ (ರಾಷ್ಟ್ರೀಯ ಹಸಿರು ನ್ಯಾಯಮಂಡಳಿ) ಹಾಗೂ ಸರ್ಕಾರಕ್ಕೆ ವರದಿ ಕೊಟ್ಟಿದ್ದೇನೆ. ಮಹಾರಾಜರು ಹಿಂದೆ ಮಳೆ ನೀರು ಸಂಗ್ರಹಿಸುವ ಉದ್ದೇಶದಿಂದ ನೂರಾರು ಕೆರೆ ಕಟ್ಟಿದ್ದರು. ಮಳೆ ಬಂದಾಗ ಅಲ್ಲಿಗೇ ನೀರು ಹರಿದು ಹೋಗುತ್ತಿತ್ತು ಎಂದು ಸಂತೋಷ್ ಹೆಗ್ಡೆ ಹೇಳಿದ್ದಾರೆ.



ಬೆಂಗಳೂರಲ್ಲಿ ಸುಮಾರು 200 ಕೆರೆಗಳಿದ್ದವು. ಭಾಷಾವಾರು ಪ್ರಾಂತ್ಯ ಆದಾಗ ಬೆಂಗಳೂರು ರಾಜಧಾನಿ ಆಯಿತು. ಆಗ ಇಲ್ಲಿ ದಿಢೀರ್ ಜನಸಂಖ್ಯೆ ಹೆಚ್ಚಾಯ್ತು. ಆದರೆ ಸರ್ಕಾರ ಯೋಜನೆ ಮಾಡಿ ಜಾಗ ಕೊಡೋದನ್ನು ಬಿಟ್ಟು ರಾಜಕಾಲುವೆ ಒತ್ತುವರಿ ಮಾಡಲು ಅವಕಾಶ ಮಾಡಿ ಕೊಡ್ತು. ನೀರು ಹೋಗುವ ರಾಜಕಾಲುವೆ ಈಗ ಅಲ್ಲಿ ಇಲ್ಲ. ಈಗ ಮಳೆ ಬಂದರೆ ನೀರು ಹೋಗಲೂ ಜಾಗ ಇಲ್ಲ. ಎಲ್ಲಾ ಒತ್ತುವರಿ ಮಾಡಿ ಮನೆ ಕಟ್ಟಿದ್ದಾರೆ. ಕೆಲವರು ತಮ್ಮ ಲಾಭಕ್ಕಾಗಿ ಒತ್ತುವರಿ ಮಾಡಿದ್ದೂ ಇದೆ ಎಂದು ಆರೋಪಿಸಿದ್ದಾರೆ.

ಮಂಡ್ಯ ಮೊರಾರ್ಜಿ ವಸತಿ ಶಾಲೆ ವಿದ್ಯಾರ್ಥಿ ನಿಗೂಢ ನಾಪತ್ತೆ

●19 ದಿನವಾದರೂ ವಿದ್ಯಾರ್ಥಿ ಕಣ್ಮರೆಯಾಗಿರುವುದು ವಾರ್ಡನ್ ಗಮನಕ್ಕೇ ಬಂದಿಲ್ಲ ●ಸತತವಾಗಿ ವಿದ್ಯಾರ್ಥಿ ಗೈರು ಹಾಜರಾದರೂ ಕಿಂಚಿತ್ತೂ ತಲೆಕೆಡಿಸಿಕೊಳ್ಳದ ಶಿಕ್ಷಕರು ●ವಿದ್ಯಾರ್ಥಿ ತಂದೆಯಿಂದ ಪೊಲೀಸರಿಗೆ ದೂರು ●ಅಪಹರಣ ಪ್ರಕರಣ ದಾಖಲಿಸಿಕೊಂಡಿರುವ ಕೆರಗೋಡು ಪೊಲೀಸರು



ಮಂಡ್ಯ, ಸೆ.11–ಮಂಡ್ಯ ತಾಲೂಕು ತಂಗಳಗೆರೆ ಗ್ರಾಮದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯಿಂದ ವಿದ್ಯಾರ್ಥಿಯೋರ್ವ ನಿಗೂಢವಾಗಿ ನಾಪತ್ತೆಯಾಗಿರುವ ಬಗ್ಗೆ ತಡವಾಗಿ ವರದಿಯಾಗಿದೆ. ವಿದ್ಯಾರ್ಥಿ ನಾಪತ್ತೆಯಾಗಿರುವ ವಿಚಾರ ಸುಮಾರು 20 ದಿನಗಳವರೆಗೂ ಹಾಸ್ಟೆಲ್‌ನ ವಾರ್ಡನ್ ಹಾಗೂ ಸಿಬ್ಬಂದಿ ಗಮನಕ್ಕೆ ಬಂದಿರಲಿಲ್ಲ ಎಂಬ ಆತಂಕಕಾರಿ ವಿಚಾರವೂ ಬಯಲಾಗಿದೆ. ವಿದ್ಯಾರ್ಥಿ ಹಾಸ್ಟೆಲ್ ಪ್ರವೇಶಿಸಿರುವುದು ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ.

ನಾಪತ್ತೆಯಾದ ವಿದ್ಯಾರ್ಥಿ ಕೊಠಡಿಯಲ್ಲಿ ಬಟ್ಟೆ ಹಾಗೂ ಪುಸ್ತಕಗಳು ಪತ್ತೆಯಾಗಿದ್ದು, ವಿದ್ಯಾರ್ಥಿ ಬರೆದಿದ್ದಾನೆ ಎನ್ನಲಾದ ಪತ್ರವೊಂದೂ ಕೂಡ ದೊರೆತಿದೆ. ಈ ಸಂಬಂಧ ಅಪಹರಣ ಪ್ರಕರಣ ದಾಖಲಿಸಿಕೊಂಡಿರುವ ▶ 8ನೇ ಪುಟಕ್ಕೆ

“ ವಿದ್ಯಾರ್ಥಿ ನಾಪತ್ತೆಯಾಗಿರುವ ಮಾಹಿತಿ ಬಂದ ತಕ್ಷಣ ಪೊಲೀಸರಿಗೆ ದೂರು ನೀಡಿ ಆತನನ್ನು ಹುಡುಕುವ ಪ್ರಯತ್ನ ಮಾಡಲಾಗುತ್ತಿದೆ. ವಿದ್ಯಾರ್ಥಿ ತರಗತಿಗೆ ಬಾರದೇ ಎಲ್ಲಿಗೋ ಹೋಗಿದ್ದಾನೆ. ಆತನೇ ಪತ್ರ ಬರೆದಿರುವುದನ್ನು ತರಗತಿಯ ಶಿಕ್ಷಕರು ಗುರುತಿಸಿದ್ದಾರೆ. ಹಾಸ್ಟೆಲ್ ವಾರ್ಡನ್ ಸೇರಿದಂತೆ ಸಂಬಂಧಪಟ್ಟವರಿಗೆ ನೋಟಿಸ್ ಜಾರಿ ಮಾಡಲಾಗಿದೆ. ಘಟನೆ ಸಂಬಂಧ ಎಲ್ಲಾ ಆಯಾಮಗಳನ್ನು ಪೊಲೀಸರು ತನಿಖೆ ನಡೆಸುತ್ತಿದ್ದು, ವಾರದೊಳಗೆ ಮಾಹಿತಿ ಲಭ್ಯವಾಗುವ ನಿರೀಕ್ಷೆ ಇದೆ.
–ಲೋಕೇಶ್, ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲ.



ಹೆಚ್.ಜಿ.ಕಿಶೋರ್

“ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ವಿದ್ಯಾರ್ಥಿ ನಾಪತ್ತೆಯಾಗಿರುವ ಬಗ್ಗೆ ಎರಡು ದಿನದ ಹಿಂದೆಯಷ್ಟೇ ಅಧಿಕಾರಿಗಳು ನನಗೆ ತಿಳಿಸಿದ್ದಾರೆ. ಮೊದಲನೆಯದಾಗಿ ಬಾಲಕನ ಪತ್ತೆಗೆ ಪ್ರಯತ್ನಿಸಲಾಗುತ್ತಿದೆ. ಈ ಸಂಬಂಧ ಪೊಲೀಸರಿಗೆ ಸೂಚನೆ ನೀಡಲಾಗಿದೆ. 19 ದಿನವಾದರೂ ಬಾಲಕ ನಾಪತ್ತೆಯಾಗಿರುವುದು ಹಾಸ್ಟೆಲ್‌ನ ವಾರ್ಡನ್ ಹಾಗೂ ಸಿಬ್ಬಂದಿ ಗಮನಕ್ಕೇ ಬಂದಿಲ್ಲ. ಪೋಷಕರು ಹೋಗಿ ಕೇಳಿದಾಗಲೇ ಅವರಿಗೆ ಗೊತ್ತಾಗಿದೆ. ಇದು ಹಾಸ್ಟೆಲ್ ವಾರ್ಡನ್, ಸಿಬ್ಬಂದಿ, ಶಾಲೆಯ ಪ್ರಾಂಶುಪಾಲರು ಹಾಗೂ ಶಿಕ್ಷಕರ ನಿರ್ಲಕ್ಷ್ಯ ಎಂಬುದು ಕಂಡುಬಂದಿದೆ. ಈಗಾಗಲೇ ಶಿಕ್ಷಣ ಇಲಾಖೆ ಉಪ ನಿರ್ದೇಶಕರಿಗೆ ಸೂಚನೆ ನೀಡಿದ್ದು, ಈ ವಿಚಾರದಲ್ಲಿ ಯಾರಿಂದ ಲೋಪದೋಷವಾಗಿದೆ ಎಂಬುದರ ಬಗ್ಗೆ ವರದಿ ಬಂದ ನಂತರ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. **–ಎಸ್.ಅಶ್ವತಿ, ಮಂಡ್ಯ ಜಿಲ್ಲಾಧಿಕಾರಿ**

“ ನನ್ನ ಮಗ ನಾಪತ್ತೆಯಾಗಿ ತಿಂಗಳೇ ಕಳೆಯುತ್ತಿದೆ. ಇದುವರೆಗೂ ಯಾವುದೇ ಸುಳಿವು ಸಿಕ್ಕಿಲ್ಲ. ಪೊಲೀಸರನ್ನು ಕೇಳಿದರೆ ಹುಡುಕುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಹಾಸ್ಟೆಲ್‌ನಲ್ಲಿ ಮಗನ ಬಟ್ಟೆ, ಪುಸ್ತಕ ಎಲ್ಲವೂ ಸಿಕ್ಕಿದೆ. ಅವನು ಪತ್ರ ಬರೆದಿದ್ದಾನೆ ಎಂದು ಹೇಳುತ್ತಿದ್ದಾರೆ. ಆದರೆ ಅದು ನನ್ನ ಮಗ ಬರೆದಿರುವ ಪತ್ರ ಅಲ್ಲ. **–ಈರೇಗೌಡ, ನಾಪತ್ತೆಯಾದ ವಿದ್ಯಾರ್ಥಿ ತಂದೆ**

ವಿಶ್ವಕರ್ಮ ಸಮುದಾಯದ ಏಳಿಗೆ, ಆಧ್ಯಾತ್ಮ ಉಳಿವಿಗಾಗಿ ಶಿವಸುಜ್ಞಾನ ತೀರ್ಥ ಸ್ವಾಮೀಜಿಗಳ ಮಾರ್ಗದರ್ಶನ ಅಗತ್ಯ

ಮೈಸೂರಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ಪ್ರತಿಪಾದನೆ





ಮೈಸೂರು, ಸೆ.11(ಎಸ್‌ಪಿಎನ್)– ವಿಶ್ವಕರ್ಮ ಸಮುದಾಯದ ಏಳಿಗೆ ಹಾಗೂ ಭಾರತೀಯ ಆಧ್ಯಾತ್ಮ ಉಳಿವಿಗಾಗಿ ಶ್ರೀ ಶಿವಸುಜ್ಞಾನ ತೀರ್ಥ ಸ್ವಾಮೀಜಿ ಅವರ ಸೂಕ್ತ ಮಾರ್ಗದರ್ಶನ ಅಗತ್ಯವಿದೆ ಎಂದು ಶಾಸಕ ಜಿ.ಟಿ.ದೇವೇಗೌಡರು ಪ್ರತಿಪಾದಿಸಿದ್ದಾರೆ.

ಮೈಸೂರು ಉತ್ತರಾಧಿಮಠದ ರಸ್ತೆಯಲ್ಲಿರುವ ವಿದ್ಯಾಭಾರತಿ ಕಲ್ಯಾಣ ಮಂಟಪದಲ್ಲಿ ಶ್ರೀ ಅನಂತಶ್ರೀ ವಿಭೂಷಿತ ಶಿವಸುಜ್ಞಾನ ತೀರ್ಥ ಸ್ವಾಮೀಜಿ ಅವರ 40ನೇ ಚಾತುರ್ಮಾಸ್ಯ ಸೀಮೋಲ್ಲಂಘನ ಸ್ವಾಗತ ಸಮಿತಿ ವತಿಯಿಂದ ಆಯೋಜಿಸಿದ್ದ ಶ್ರೀಗಳ 40ನೇ ಚಾತುರ್ಮಾಸ್ಯ ಸೀಮೋಲ್ಲಂಘನ ಸ್ವಾಗತ ಮತ್ತು ಪಾದುಕಾ ಪೂಜಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಹಾಸನ ಜಿಲ್ಲೆ ಅರಕಲಗೂಡು ತಾಲೂಕಿನ ಅರೇಮಾದನಹಳ್ಳಿ ವಿಶ್ವಕರ್ಮ ಜಗದ್ಗುರು ಪೀಠ, ವಿಶ್ವಬ್ರಾಹ್ಮಣ ಮಠದ ಶ್ರೀ ಶಿವಸುಜ್ಞಾನ ತೀರ್ಥ ಸ್ವಾಮೀಜಿಯವರು ಮೈಸೂರಲ್ಲಿ 40ನೇ ಚಾತುರ್ಮಾಸ್ಯ ಸೀಮೋಲ್ಲಂಘನ ಮತ್ತು ಪಾದುಕಾ ಪೂಜಾ ಕಾರ್ಯಕ್ರಮ ಹಮ್ಮಿಕೊಂಡಿರುವುದು ಉತ್ತಮ ಸಂಗತಿ. ಇದರ ಶಾಖಾ ಮಠದ ಧಾರ್ಮಿಕ ಕಾರ್ಯಗಳಿಗಾಗಿ ಮೈಸೂರಿನ ಹಿನಕಲ್ ಬಳಿ ಮುಡಾ ಸಿಎ ನಿವೇಶನ ಮಂಜೂರು ಮಾಡಿಸಲಾಗಿದೆ. ಇದರ ಅಭಿವೃದ್ಧಿಗೆ ಅನುದಾನ ನೀಡಲು ಕ್ರಮ ವಹಿಸುತ್ತೇನೆ ಎಂದು ಭರವಸೆ ನೀಡಿದರು.

ಶಾಸಕ ಎಸ್.ಎ.ರಾಮದಾಸ್ ಮಾತನಾಡಿ, ವಿಶ್ವಕರ್ಮ ಸಮುದಾಯ ನಮ್ಮ ದೇಶದ ಸಂಸ್ಕೃತಿ, ಪರಂಪರೆಯ ಬೆನ್ನೆಲುಬು, ಇದಕ್ಕೆ ಹಲವಾರು ಉದಾಹರಣೆಗಳನ್ನು ನೀಡಬಹುದು. ವಿಶ್ವಕರ್ಮ ಸಮುದಾಯ ಏಳಿಗೆಗಾಗಿ, ಭಾರತೀಯ ಆಧ್ಯಾತ್ಮ ಪರಂಪರೆ ಉಳಿವಿಗಾಗಿ ಶ್ರೀ ಶಿವಸುಜ್ಞಾನ ತೀರ್ಥ ಸ್ವಾಮೀಜಿ ಅವರು ಹಲವು ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಶ್ರಮಿಸುತ್ತಿದ್ದಾರೆ. ಅಲ್ಲದೆ, ಶ್ರೀ ಮಠದ ಅಭಿವೃದ್ಧಿಗೆ ಶ್ರಮಿಸುವುದಾಗಿ ತಿಳಿಸಿದರು.

ಇದಕ್ಕೂ ಮುನ್ನ ಅನಂತಶ್ರೀ ವಿಭೂಷಿತ ಶಿವಸುಜ್ಞಾನ ತೀರ್ಥ ಸ್ವಾಮೀಜಿಯವರನ್ನು ಬಸವೇಶ್ವರ ವೃತ್ತದಲ್ಲಿ ಸ್ವಾಗತಿಸಿ, ನಂತರ ವೇದಘೋಷ ಮಂತ್ರ, ಪುರೋಹಿತ ವೃಂದ, ಮಹಿಳೆಯರಿಂದ ಪೂರ್ಣಕುಂಭ, ಚಂಡೆವಾದ್ಯದ ಮೂಲಕ ಮೆರವಣಿಗೆಯಲ್ಲಿ ಸಾಗಿ, ಉತ್ತರಾಧಿ ಮಠದ ರಸ್ತೆ ಮೂಲಕ ಪಾತಾಳ ಆಂಜನೇಯ ಸ್ವಾಮಿ ದೇವಸ್ಥಾನ ಮೂಲಕ ವಿದ್ಯಾಭಾರತಿ ಕಲ್ಯಾಣ ಮಂಟಪ ತಲುಪಿತು.

ಈ ವೇಳೆ ಶಾಸಕ ಎಲ್.ನಾಗೇಂದ್ರ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಎಎಸ್‌ಪಿ ನಂದಿನಿ, ಚಿಕ್ಕಳ್ಳಿ ಶಾಖಾ ಮಠದ ಕಾರ್ಯಾಧ್ಯಕ್ಷ ಎಂ.ಸಿ.ಮರಿಸ್ವಾಮಿ, ಮುಖಂಡರಾದ ಮಂಟೇಲಿಂಗಾಚಾರ್, ಎ.ಎನ್.ಸ್ವಾಮಿ, ಛಾಯಾದೇವಿ, ಎಂ.ಕೆ.ವೆಂಕಟೇಶ್, ಟಿ.ನಾಗರಾಜು, ಸ್ವಾಗತ ಸಮಿತಿ ಸದಸ್ಯರಾದ ಆರ್.ಎನ್.ಜಯತೀರ್ಥ, ಹುಚ್ಚಪ್ಪಾಚಾರ್, ಮುರಳೀಧರ್, ಎ.ಆರ್. ದಿವಾಕರಸ್ವಾಮಿ, ವೈ.ಈ.ಮಂಜುನಾಥ, ಲೋಕೇಶ್, ಹೆಚ್.ಎಸ್.ದಯಾನಂದ ಶರ್ಮ, ರಮೇಶ್, ಕೆಂಡಗಣ್ಣಸ್ವಾಮಿ, ಡಾ.ಎನ್.ವಿಜಯೇಂದ್ರ ಕುಮಾರ್, ಬಿ.ಟಿ.ಸುರೇಶ್ ಆಚಾರ್ಯ, ಯೋಗೇಶ್, ಮಹಿಳಾ ಸಮಿತಿ ಸದಸ್ಯರಾದ ದಿನಮಣಿ, ಸವಿತಾಶಾಸ್ತ್ರಿ, ಡಾ.ಶುಭಶ್ರೀ, ರೇಖಾ ಜಗದೀಶ್, ಶೀಲಾ, ಭಾರತಿ ಜಯಶಂಕರ್, ಕೆ.ಸಿ.ಪುಷ್ಪಲತಾ, ಕೆ.ಎನ್.ಶಾಂತಮ್ಮ ನಾಗರಾಜು, ಶಿಲ್ಪಶ್ರೀ ಅನಿಲ್ ಸಾಗರ್, ವೀಣಾ ಸುಂದರ್, ದ್ರಾಕ್ಷಾಯಿಣಿ ರಮೇಶ್, ಮಣಿ ಪ್ರಸನ್ನ ಉಪಸ್ಥಿತರಿದ್ದರು.

ಸಾಮಾಜಿಕ ಸಂದೇಶ ಸಾರುವ 101ನೇ ಪಾದಯಾತ್ರೆ



ಮೈಸೂರು, ಸೆ.11(ಆರ್‌ಕೆಬಿ)– ಕಳೆದ ನೂರು ವಾರಗಳಿಂದ ಪ್ರತೀ ಭಾನುವಾರ ಸಾಮಾಜಿಕ ಸಂದೇಶ ಸಾರಲು ಮೈಸೂರಿನಿಂದ ಶ್ರೀರಂಗಪಟ್ಟಣದವರೆಗೆ ಪಾದಯಾತ್ರೆ ನಡೆಸುತ್ತಾ ಬಂದಿರುವ ಮೈಸೂರು ಪಾದಯಾತ್ರೆ ತಂಡದ 101ನೇ ಪಾದಯಾತ್ರೆ ಭಾನುವಾರ ಮೈಸೂರಿನ ಕಬೀರ್ ರಸ್ತೆ ಪಾಂಡುರಂಗ ವಿಠಲ ದೇವಸ್ಥಾನದಿಂದ ಕೆಆರ್‌ಎಸ್ ರಸ್ತೆಯಲ್ಲಿರುವ ದಕ್ಷಿಣ ಕಾನಡ ವಿಠಲ ಧ್ಯಾನ ಮಂದಿರದವರೆಗೆ ನಡೆಸಲಾಯಿತು.

ಪಾದಯಾತ್ರೆ ಕಬೀರ್ ರಸ್ತೆ, ಹೈವೇ ವೃತ್ತ, ಕೆಆರ್‌ಎಸ್ ವೃತ್ತದ ಮೂಲಕ ಮಂಟಿಯಲ್ಲಿರುವ ದಕ್ಷಿಣ ಕಾನಡ ವಿಠಲ ಧ್ಯಾನ ಮಂದಿರ ತಲುಪಿತು. ಬಳಿಕ ಅಲ್ಲಿ ಮಹಿಳೆಯರಿಂದ ಸಂಗೀತ, ಕೊಪ್ಪಳದ ವಿಠಲ ಬೆಳಂಕರ್ ಅವರಿಂದ ಪ್ರವಚನ, ವಿಠಲ ಭಜನೆ, ನಡೆಯಿತು. ಕಾರ್ಯಕ್ರಮದಲ್ಲಿ ದಕ್ಷಿಣ ಕಾನಡ ವಿಠಲ ಧ್ಯಾನ ಮಂದಿರದ ಹೆಚ್.ಬಿ. ಸುಬ್ಬರಾವ್ ದಾಸರು, ಭಾವಸಾರ ಕ್ಷತ್ರಿಯ ಮಂಡಳಿಯ ಕಾರ್ಯದರ್ಶಿ ರಾಕೇಶ್ ನಾಯಕ್, ಭಜನಾ ಮಂಡಳಿ ಅಧ್ಯಕ್ಷ ವೆಂಕಟೇಶ್‌ರಾವ್ ಪತಂಗೆ, ಸಮಾಜದ ಮುಖಂಡರಾದ ಬಾಲಾಜಿರಾವ್ ನಾಯಕ್, ನಾಗರಾಜ ಪತಂಗೆ, ಪಾದಯಾತ್ರೆ ತಂಡದ ಮುಖಂಡರಾದ ಸಂತೋಷ್ ಪತಂಗೆ, ದೀಪಕ್ ಉತ್ತರ್‌ಕರ್, ಉಮಾ ನಾಗರಾಜ್ ಪತಂಗೆ, ಜೀವಿತಾ ಹರೀಶ್, ಗೀತಾ ಶೇಖರ್ ಇನ್ನಿತರರು ಭಾಗವಹಿಸಿದ್ದರು.



ಮೈಸೂರು ಯರಗನಹಳ್ಳಿ ವಾರ್ಡ್ ನಂ.36ರ ಶಿಕ್ಷಕರ ಬಡಾವಣೆಯಲ್ಲಿ ರಸ್ತೆ ಡಾಂಬರೀಕರಣ ಕಾಮಗಾರಿಗೆ ನಗರಪಾಲಿಕೆ ಸದಸ್ಯೆ ಶ್ರೀಮತಿ ರಜನಿ ಅಣ್ಣಯ್ಯ ಚಾಲನೆ ನೀಡಿದರು. ಈ ವೇಳೆ ಡಿಸಿಸಿ ಸದಸ್ಯ ಹಾಗೂ ಟಿಎಪಿಸಿಎಂಎಸ್ ನಿರ್ದೇಶಕ ಅಣ್ಣಯ್ಯ, ಶಿಕ್ಷಕರ ಬಡಾವಣೆ ಅಧ್ಯಕ್ಷ ಚಿಕ್ಕೇಗೌಡ, ಮುಖಂಡರಾದ ಸೋಮಶೇಖರ್, ಈರಣ್ಣ, ಅನಿಲ್‌ರಾಜ್, ಮಹೇಂದ್ರ ಹಾಗೂ ಬಡಾವಣೆಯ ನಿವಾಸಿಗಳು ಉಪಸ್ಥಿತರಿದ್ದರು.

ನಾಳೆ ಹಲವು ಪ್ರಮುಖರಿಗೆ ಸನ್ಮಾನ



ಮೈಸೂರು,ಸೆ.11(ಆರ್‌ಕೆಬಿ)–ಮೈಸೂರಿನ ನಟರಾಜ ಪ್ರತಿಷ್ಠಾನ ಹಾಗೂ ವೆಂಕಟಗಿರಿ ಪ್ರಕಾಶನದಿಂದ ಸೆ.13ರಂದು ಬೆಳಗ್ಗೆ 10.30 ಗಂಟೆಗೆ ಸಂಸ್ಥೆಯ ಸಭಾಂಗಣದಲ್ಲಿ ಹಲವು ಪ್ರಮುಖರನ್ನು ಸನ್ಮಾನಿಸಲಾಗುತ್ತಿದೆ ಎಂದು ನಿವೃತ್ತ ಪ್ರಾಧ್ಯಾಪಕ ನೀ.ಗಿರೀಗೌಡ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ ಪ್ರಾಚಾರ್ಯರಾದ ಡಾ.ಕೆ.ಎಂ.ಮಹದೇವಯ್ಯ, ಚಿಂತಕ ಕೆ.ರಘುರಾಂ ವಾಜಪೇಯಿ, ಡಾ.ಕೆಜಿ. ಪುಟ್ಟಹೊನ್ನಯ್ಯ, ಡಾ.ವೈ.ಸಿ.ನಂಜುಂಡಯ್ಯ, ನಾಗರತ್ನ ಹೆಮ್ಮಿಗೆ, ಕೇಬಲ್ ವೆಂಕಟೇಶ್, ಡಾ.ಬಿ.ಅನಸೂಯ, ಮಲ್ಲಣ್ಣ, ಎಸ್. ಕೃಷ್ಣಮೂರ್ತಿ, ರಾಘವೇಂದ್ರ, ಡಾ.ಸುನಂದ, ಚಂದ್ರಶೇಖರಯ್ಯ ಅವರಿಗೆ ಅವರ ಸಾಧನೆಯನ್ನು ಗುರುತಿಸಿ 'ಮೇರುಗಿರಿ' ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದರು. ಹೊಸಮಠದ ಚಿದಾನಂದ ಸ್ವಾಮೀಜಿ, ಪ್ರೊ.ಭಾಷ್ಯಂ ಸ್ವಾಮೀಜಿ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಶಾಸಕ ಎಸ್.ಎ.ರಾಮದಾಸ್, ಸಂಸದ ಪ್ರತಾಪ್ ಸಿಂಹ, ಮೇಯರ್ ಶಿವಕುಮಾರ್ ಇನ್ನಿತರರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಇಳೈ ಆಳ್ವಾರ್ ಸ್ವಾಮೀಜಿ, ರಘುರಾಂ ವಾಜಪೇಯಿ, ಬೋಗಾದಿ ಸಿದ್ದೇಗೌಡ, ಕೃಷ್ಣಮೂರ್ತಿ ಉಪಸ್ಥಿತರಿದ್ದರು.

ತೆಂಗು ಆಧಾರಿತ ಬೆಳೆ ಪದ್ಧತಿ ಕುರಿತು ತರಬೇತಿ

ಮೈಸೂರು,ಸೆ.11–ಇಲವಾಲದ ಸಮೀಪದ ಯಲಚಹಳ್ಳಿಯಲ್ಲಿರುವ ತೋಟಗಾರಿಕೆ ಮಹಾವಿದ್ಯಾಲಯದಲ್ಲಿ ಸೆ.16ರಂದು ಬೆಳಗ್ಗೆ 10.30 ಗಂಟೆಗೆ ಸುಸ್ಥಿರ ಆದಾಯಕ್ಕಾಗಿ ತೆಂಗು ಆಧಾರಿತ ಬೆಳೆ ಪದ್ಧತಿಗಳ ಕುರಿತ ತರಬೇತಿ ಕಾರ್ಯಕ್ರಮವನ್ನು ರೈತರಿಗೆ ಆಯೋಜಿಸಿದೆ. ನುರಿತ ವಿಜ್ಞಾನಿಗಳು ಹಾಗೂ ಅನುಭವಿ ಕೃಷಿಕರು, ಗುಣಮಟ್ಟದ ಉತ್ಪಾದನೆ, ಸಂಸ್ಕರಣೆ ಮತ್ತು ಮಾರಾಟದಲ್ಲಿ ಎದುರಿಸುವ ಹಲವಾರು ಸಮಸ್ಯೆ ಮತ್ತು ಅದರ ಪರಿಹಾರದ ಕುರಿತು ರೈತರಿಗೆ ಮಾಹಿತಿ ನೀಡಲಿದ್ದಾರೆ. ಮೈಸೂರು, ಚಾಮರಾಜನಗರ, ಹಾಸನ, ಮಂಡ್ಯ ಮತ್ತು ಇತರೆ ಜಿಲ್ಲೆಗಳಿಗೆ ಸೇರಿದ ರೈತರು ಭಾಗವಹಿಸಲು ಪೂರ್ವ ನೋಂದಣಿ ಮಾಡಿಸಬಹುದಾಗಿದೆ. ನೋಂದಣಿಗಾಗಿ 8147959226 / 9341997297 ಮೊಬೈಲ್ ಸಂಖ್ಯೆಗಳನ್ನು ಸಂಪರ್ಕಿಸಬಹುದಾಗಿದೆ.



ಮೈಸೂರಿನ ವೀಣೆ ಶೇಷಣ್ಣ ಭವನದಲ್ಲಿ ತಬಲ ವಾದಕ ಡಾ.ಪಂ.ರಾಜಗೋಪಾಲ ಕಲ್ಲೂರಕರ್ ಅವರಿಗೆ ಪಂ. ಕೆ.ಎಸ್.ಹಡಪದ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ವೇಳೆ ಗುರುರಾಜ ಹಸರಗುಂಡಗಿ, ಪಾಲಿಕೆ ಸದಸ್ಯ ಮಾ.ವಿ.ರಾಮಪ್ರಸಾದ್, ಸಂಗೀತ ನಿರ್ದೇಶಕ ಪ್ರಸನ್ನಕುಮಾರ್ ಇದ್ದರು.

ಬೈಕ್‌ಗೆ ನಕಲಿ ನಂಬರ್ ಪ್ಲೇಟ್ ಅಳವಡಿಸಿದ್ದ ರೈತನ ವಿರುದ್ಧ ಪ್ರಕರಣ ದಾಖಲು

ಕುಶಾಲನಗರ,ಸೆ.11–ಬೈಕ್‌ಗೆ ನಕಲಿ ನಂಬರ್ ಪ್ಲೇಟ್ ಅಳವಡಿಸಿಕೊಂಡಿದ್ದ ರೈತನ ವಿರುದ್ಧ ಕುಶಾಲನಗರ ಟೌನ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಕುಶಾಲನಗರ ಸಮೀಪ ಮುಳ್ಳುಸೋಗೆ ಗ್ರಾಮದ ರೈತ ಇಂದ್ರೇಶ್ ಆರೋಪಿತನಾಗಿದ್ದು, ಈತನ ಅಜ್ಜಿ ಪುಟ್ಟಲಕ್ಷ್ಮಮ್ಮ ಅವರ ಹೆಸರಿನಲ್ಲಿ 2011ರ ಮಾ.12ರಂದು ಹೀರೊಹೊಂಡಾ ಸ್ಪ್ಲೆಂಡರ್ ಬೈಕ್ ಖರೀದಿಸಲಾಗಿದೆ. ಆದರೆ ಈ ಬೈಕ್ ಅನ್ನು ಆರ್‌ಟಿಓ ಕಚೇರಿಯಲ್ಲಿ ನೋಂದಣಿ ಮಾಡಿಸದೇ ನಯೀಂ ಪಾಷಾ ಎಂಬುವರಿಗೆ ಸೇರಿದ ಬೈಕ್ ನಂ.ಕೆ.ಎ.12 ಹೆಚ್. 2428 ಅನ್ನು ಈ ಬೈಕ್‌ಗೆ ಅಳವಡಿಸಿಕೊಂಡು ಓಡಿಸುತ್ತಿದ್ದಾಗ ಕುಶಾಲನಗರ ಠಾಣೆ ಪೊಲೀಸರು ಈತನನ್ನು ಬಂಧಿಸಿ, ಪ್ರಕರಣ ದಾಖಲಿಸಿಕೊಂಡು ಬೈಕ್ ಅನ್ನು ವಶಕ್ಕೆ ಪಡೆದಿದ್ದಾರೆ.

ವ್ಯಕ್ತಿ ನಾಪತ್ತೆ



ಎಂ.ದೇವರಾಜು

ಮೈಸೂರು, ಸೆ.11–ಮೈಸೂರಿನ ಕುಂಬಾರಕೊಪ್ಪಲು ಪಿ–ಬ್ಲಾಕ್ ಹೊಸ ಬಡಾವಣೆ ನಿವಾಸಿ ಎಂ.ದೇವರಾಜು ಎಂಬುವರು ಆ.21ರ ರಾತ್ರಿ 10 ಗಂಟೆಯಿಂದ ಕಣ್ಮರೆಯಾಗಿದ್ದಾರೆ. 60 ವರ್ಷದ ನಿವೃತ್ತ ಜೆ.ಕೆ.ಟೈರ್ಸ್ ನೌಕರನಾದ ಅವರ ಬಲಗಣ್ಣಿನಲ್ಲಿ ಹಳೇ ಗಾಯದ ಗುರುತಿದೆ. ಅವರ ಸುಳಿವು ಪತ್ತೆಯಾದಲ್ಲಿ ಮೇಟಗಳ್ಳಿ ಪೊಲೀಸ್ ಠಾಣೆ (0821–2418315), ನಗರ ಪೊಲೀಸ್ ಕಂಟ್ರೋಲ್ ರೂಂ (0821–2418339), ದೇವರಾಜು ಅವರ ಮಗ ಸುಪ್ರಿತ್ (6362593377))ಗೆ ಮಾಹಿತಿ ನೀಡುವಂತೆ ಕೋರಲಾಗಿದೆ.

ದಿನೇದಿನೆ ಸ್ಮಾರ್ಟ್ ಇಂಜಿನಿಯರಿಂಗ್ ಮಹತ್ವ ಅರಿವಾಗುತ್ತಿದೆ: ಪ್ರೊ.ಲೋಕೇಶ್

ಇಂಜಿನಿಯರುಗಳ ಸಂಸ್ಥೆಯಿಂದ 55ನೇ ಇಂಜಿನಿಯರ್ಸ್ ದಿನಾಚರಣೆ



ಪ್ರೊ.ಲೋಕೇಶ್

ಮೈಸೂರು, ಸೆ.11(ಆರ್‌ಕೆಬಿ)– ದಿನದಿಂದ ದಿನಕ್ಕೆ ಸ್ಮಾರ್ಟ್ ಇಂಜಿನಿಯರಿಂಗ್ ಮಹತ್ವ ಅರಿವಾಗುತ್ತಿದೆ. ಎಲ್ಲಾ ಮೂಲ ಸೌಕರ್ಯಗಳಿಗೂ ಸ್ಮಾರ್ಟ್ ಇಂಜಿನಿಯರಿಂಗ್‌ನ ಅಗತ್ಯತೆ ತಿಳಿಯುತ್ತಿದೆ. ಹಾಗೆಯೇ ಬುದ್ಧಿವಂತಿಕೆ ಅಳವಡಿಸಿಕೊಳ್ಳಬೇಕು ಎಂದು ಮೈಸೂರಿನ ಜೆಎಸ್‌ಎಸ್ ವಿಜ್ಞಾನ ಮತ್ತ ತಾಂತ್ರಿಕ ವಿದ್ಯಾಲಯದ ನಿವೃತ್ತ ರಿಜಿಸ್ಟ್ರಾರ್ ಪ್ರೊ.ಕೆ.ಎಸ್.ಲೋಕೇಶ್ ಅಭಿಪ್ರಾಯಪಟ್ಟರು.

ಡಾ.ಸರ್ ಎಂ.ವಿಶ್ವೇಶ್ವರಯ್ಯ ಜನ್ಮದಿನದ ಪ್ರಯುಕ್ತ 55ನೇ ಇಂಜಿನಿಯರುಗಳ ದಿನದ ಅಂಗವಾಗಿ ಮೈಸೂರಿನ ಇಂಜಿನಿಯರುಗಳ ಸಂಸ್ಥೆ ಸಭಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ 'ಉತ್ತಮ ಜಗತ್ತಿಗಾಗಿ ಸ್ಮಾರ್ಟ್ ಇಂಜಿನಿಯರಿಂಗ್' ಕುರಿತ ತಾಂತ್ರಿಕ ಸಮ್ಮೇಳನದಲ್ಲಿ ಅವರು ಮಾತನಾಡಿದರು. ಜನಸಂಖ್ಯಾ ಸ್ಫೋಟದಿಂದ ಶೇ.72ರಷ್ಟು ಅಭಿವೃದ್ಧಿ ಕೆಲಸ ಮಾಡಲು ಕಷ್ಟವಾಗುತ್ತಿದೆ. ಹೀಗಾಗಿ ಹೆಚ್ಚಾಗಿ ಸ್ಮಾರ್ಟ್ ತಂತ್ರಜ್ಞಾನ ಅಳವಡಿಸಿಕೊಳ್ಳಬಹುದು. ಸ್ಮಾರ್ಟ್ ತಂತ್ರಜ್ಞಾನವನ್ನು ಪರಿಚಯಿಸುವ ಮೂಲಕ ರಸ್ತೆ ಮತ್ತು ರೈಲು ಸಂಪರ್ಕ, ಕುಡಿಯುವ ನೀರು, ಕೃಷಿ, ಆರೋಗ್ಯ ಮತ್ತು ಪೋಷಣೆ, ವಸತಿ ಮತ್ತು ಉತ್ತಮ ಆಡಳಿತದಂತಹ ನಿರ್ಣಾಯಕ ಕ್ಷೇತ್ರಗಳಲ್ಲಿ ಕೈಗೊಂಡಿರುವ ವಿವಿಧ ಸಾಮರ್ಥ್ಯ ನಿರ್ಮಾಣದ ಉಪಕ್ರಮಗಳು ಹಂತ ಹಂತವಾಗಿ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಸಹಾಯಕವಾಗುತ್ತದೆ ಎಂದು ತಿಳಿಸಿದರು.

ಉತ್ತಮ ಜಗತ್ತನ್ನು ಸೃಷ್ಟಿಸಲು ನಾವು ಸ್ಮಾರ್ಟ್ ಇಂಜಿನಿಯರಿಂಗ್ ಅನ್ನು ಅಳವಡಿಸಿಕೊಳ್ಳುವುದು ಇಂಜಿನಿಯರುಗಳ ವಿವೇಕಯುತವಾಗಿದೆ ಎಂದರು. ಡಾ.ವಿ.ರವಿಕುಮಾರ್ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಮೈಸೂರು ಇಂಜಿನಿಯರುಗಳ ಸಂಸ್ಥೆ ಅಧ್ಯಕ್ಷ ಬಿ.ಎಸ್.ಪ್ರಭಾಕರ್ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಕಾರ್ಯದರ್ಶಿ ಹೆಚ್.ಎಸ್.ಸುರೇಶ್‌ಬಾಬು, ಇಂಜಿನಿಯರುಗಳ ದಿನಾಚರಣೆಯ ಸಂಚಾಲಕ ಕೆ.ಬಿ.ಭಾಸ್ಕರ್ ಉಪಸ್ಥಿತರಿದ್ದರು.

ಕೊರೊನಾದಿಂದ ಕಲಾಮಂದಿರದಲ್ಲಿ ಸಂಪನ್ಮೂಲ ಕ್ರೋಢೀಕರಣ ಸಾಧ್ಯವಾಗಲಿಲ್ಲ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿಕಟಪೂರ್ವ ಸಹಾಯಕ ನಿರ್ದೇಶಕ ಚನ್ನಪ್ಪ ಸ್ಪಷ್ಟನೆ



ಹನೂರು ಚೆನ್ನಪ್ಪ

ಮೈಸೂರು, ಸೆ.11(ಎಸ್‌ಪಿಎನ್)–ಕೊರೊನಾದಿಂದಾಗಿ ಕಲಾಮಂದಿರದಲ್ಲಿ ಕಳೆದ ಎರಡು ವರ್ಷಗಳಿಂದ ಕಾರ್ಯಕ್ರಮಗಳು ನಡೆಯದ ಕಾರಣ ಸಂಪನ್ಮೂಲ ಕ್ರೋಢೀಕರಿಸಲು ಸಾಧ್ಯವಾಗಲಿಲ್ಲ, ಕೊರತೆಯಿತ್ತು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿಕಟಪೂರ್ವ ಸಹಾಯಕ ನಿರ್ದೇಶಕ ಹನೂರು ಚೆನ್ನಪ್ಪ ಸ್ಪಷ್ಟಪಡಿಸಿದ್ದಾರೆ. 'ಮೈಸೂರು ಮಿತ್ರ'ದೊಂದಿಗೆ ಮಾತನಾಡಿದ ಅವರು, ಕಲಾಮಂದಿರದ ಧ್ವನಿ ಮತ್ತು ಬೆಳಕು ಸರಿ ಸಮಸ್ಯೆ ಸರಿಪಡಿಸಲು ಹಾಗೂ ಸೋರುತ್ತಿದ್ದ ಕಲಾಮಂದಿರದ ಮೇಲ್ಛಾವಣಿ ಸೇರಿದಂತೆ ಇತರೆ ಸಿವಿಲ್ ಕಾಮಗಾರಿ ಹಮ್ಮಿಕೊಳ್ಳಲು ನನ್ನ ಅಧಿಕಾರಾವಧಿಯಲ್ಲಿ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ಪತ್ರ ವ್ಯವಹಾರ ನಡೆಸಲಾಗಿತ್ತು. ಅಷ್ಟರಲ್ಲಿ ನನ್ನ ವರ್ಗಾವಣೆ ಆಗಿದೆ. ಈಗ ಅನುದಾನ ಬಿಡುಗಡೆಗೊಂಡಿದೆ ಎಂದು ಹೇಳಿದರು.

ಅಲ್ಲದೆ, ನನ್ನ ಅಧಿಕಾರಾವಧಿಯಲ್ಲಿ ಸರ್ಕಾರಿ ಕಾರ್ಯಕ್ರಮಗಳನ್ನು ಹೊರತುಪಡಿಸಿ ಬೇರೆ ಕಾರ್ಯಕ್ರಮಗಳಿಗೆ ಕಲಾಮಂದಿರ ಅಥವಾ ಕಿರು ಕಲಾ ರಂಗಮಂದಿರವನ್ನು ಉಚಿತವಾಗಿ ನೀಡಿಲ್ಲ. ಕೋವಿಡ್–19 ಕಾರಣಕ್ಕೆ ಕಳೆದ ಎರಡು ವರ್ಷಗಳಿಂದ ಕಲಾಮಂದಿರವನ್ನು ಬಾಡಿಗೆ ನೀಡದಂತೆ ರಾಜ್ಯ ಸರ್ಕಾರವೇ ಆದೇಶಿಸಿತ್ತು. ಹಾಗಾಗಿ ಆ ಕಾಲಘಟ್ಟದಲ್ಲಿ ಕಲಾಮಂದಿರ ವಿದ್ಯುತ್ ಬಿಲ್‌ನ ನಿಗದಿತ(ಮಿನಿಮಮ್ ಚಾರ್ಜ್) ದರ ಕಟ್ಟಲೇ ಬೇಕಾಗಿತ್ತು. ಆ ಸಂದರ್ಭದಲ್ಲಿ ಬೇರೆ ಸಂಪನ್ಮೂಲ ಒದಗಿಸಿ, ಸ್ವಲ್ಪ ತಡವಾಗಿ ವಿದ್ಯುತ್ ಬಿಲ್ ಕಟ್ಟಲಾಗಿತ್ತು. ಇದು ಎಲ್ಲರಿಗೂ ತಿಳಿದ ವಿಚಾರ ಎಂದು ತಿಳಿಸಿದರು. ಅಲ್ಲದೆ, ಕೋವಿಡ್ ಸಂದರ್ಭದಲ್ಲಿ ಯಾವುದೇ ಉದ್ಯೋಗಿಗಳನ್ನು ಕೈಬಿಡದಂತೆ ಸರ್ಕಾರವೇ ನಿರ್ದೇಶನ ನೀಡಿತ್ತು. ಆ ಸಂದರ್ಭದಲ್ಲಿ ಅವರಿಗೂ ವೇತನ ನೀಡಲಾಗಿದೆ. ನನ್ನ ಅಧಿಕಾರಾವಧಿಯಲ್ಲಿ ಕಲಾಮಂದಿರಕ್ಕೆ ಅಗತ್ಯ ಸಿಬ್ಬಂದಿ ಗುತ್ತಿಗೆ ಆಧಾರ ಮೇಲೆ ಕೆಲಸ ಮಾಡುತ್ತಿದ್ದರು. ಅವರನ್ನೇ ಮುಂದುವರೆಸಲಾಗಿದೆ ಎಂದು ತಿಳಿಸಿದರು.

ಕಲಾ ಪ್ರದರ್ಶನಕ್ಕೆ ಅರ್ಜಿ ಆಹ್ವಾನ

ಮೈಸೂರು,ಸೆ.11–ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಲಲಿತಕಲೆ ಮತ್ತು ಕರಕುಶಲ ಉಪಸಮಿತಿ ವತಿಯಿಂದ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಕಲಾಮಂದಿರದ ಸುಚಿತ್ರಾ ಕಲಾ ಗ್ಯಾಲರಿಯಲ್ಲಿ ಸೆ.26ರಿಂದ ಅ.3ರವರೆಗೆ ನಡೆಯುವ ದಸರಾ ಕಲಾ ಪ್ರದರ್ಶನಕ್ಕೆ ಕಲಾಕೃತಿಗಳನ್ನು ಆಹ್ವಾನಿಸಲಾಗಿದೆ. ಕಲಾ ಪ್ರದರ್ಶನದಲ್ಲಿ ಚಿತ್ರಕಲೆ, ಶಿಲ್ಪಕಲೆ, ಗ್ರಾಫಿಕ್ಸ್ ಕಲೆ, ಅನ್ವಯಿಕ ಕಲೆ, ಛಾಯಾಚಿತ್ರಕಲೆ ವಿಭಾಗಗಳಲ್ಲಿ ವೃತ್ತಿಪರ ಹಾಗೂ ಹವ್ಯಾಸಿ ವಿಭಾಗಗಳಿರುತ್ತದೆ. ಸಾಂಪ್ರದಾಯಕ ಚಿತ್ರಕಲೆ, ಸಾಂಪ್ರದಾಯಿಕ ಶಿಲ್ಪಕಲೆ, ಕರಕುಶಲ ಕಲೆ ವಿಭಾಗಗಳಲ್ಲಿ ಹವ್ಯಾಸಿ ವಿಭಾಗಗಳಿರುತ್ತವೆ. ಎಲ್ಲಾ ವಿಭಾಗಗಳಲ್ಲಿಯೂ ಪ್ರಥಮ, ದ್ವಿತೀಯ ಮತ್ತು ತೃತೀಯ ಎಂದು 3 ಬಹುಮಾನಗಳನ್ನು ನೀಡಲಾಗುವುದು.

ಕಲಾಕೃತಿಗಳನ್ನು ಸೆ.16ರಿಂದ 22ರವರೆಗೆ ಸುಚಿತ್ರಾ ಕಲಾ ಗ್ಯಾಲರಿ, ಕಲಾಮಂದಿರ, ವಿನೋಬಾ ರಸ್ತೆ, ಮೈಸೂರು–570005 ಇಲ್ಲಿಗೆ ಸಲ್ಲಿಸಬಹುದು. ಈ ಕಲಾಪ್ರದರ್ಶನಕ್ಕೆ ತಮ್ಮ ಕಲಾಕೃತಿಗಳನ್ನು ಸಲ್ಲಿಸಲು ಬಯಸುವ ಕಲಾವಿದರು ತಮ್ಮ ಇತ್ತೀಚಿನ (ಜನವರಿ 2020ರಿಂದೀಚೆಗೆ ರಚಿಸಿರುವ) ಕಲಾಕೃತಿಯನ್ನು ತಮ್ಮ ಸ್ವಂತ ಜವಾಬ್ದಾರಿಯಿಂದ ಸ್ವಯಂ ದೃಢೀಕರಣ ಪತ್ರದೊಂದಿಗೆ ಸಮಿತಿಗೆ ತಲುಪಿಸಬೇಕು. ಹೆಚ್ಚಿನ ವಿವರಗಳಿಗಾಗಿ ಕಾರ್ಯದರ್ಶಿಗಳು, ಲಲಿತಕಲೆ ಮತ್ತು ಕರಕುಶಲ ಉಪಸಮಿತಿ, ಮೊ.ಸಂ. 9449176407 ಸಂಪರ್ಕಿಸಬಹುದು ಎಂದು ಲಲಿತ ಕಲೆ ಮತ್ತು ಕರಕುಶಲ ಉಪ ಸಮಿತಿ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಿನೇ ದಿನೆ ಮರೆಗುಳಿತನ ಸಮಸ್ಯೆ ಉಲ್ಬಣ

ಸೆಪ್ಟೆಂಬರ್ ತಿಂಗಳು ವಿಶ್ವ ಮರೆಗುಳಿತನ ಮಾಸವಾಗಿ ಆಚರಣೆ



ಮೈಸೂರು, ಸೆ.11(ಆರ್‌ಕೆಬಿ)–ಮರೆಗುಳಿತನ ಮತ್ತು ಸಂಬಂಧಿತ ಕಾಯಿಲೆಗಳ ಸಂಸ್ಥೆ ವತಿಯಿಂದ ಸೆಪ್ಟೆಂಬರ್ ಮಾಸವನ್ನು ವಿಶ್ವ ಮರೆಗುಳಿತನ ಕಾಯಿಲೆ ಮಾಸವನ್ನಾಗಿ ಆಚರಿಸಲಾಗುತ್ತಿದೆ. ಈ ವೇಳೆ ಜನರಲ್ಲಿ ಸದರಿ ಕಾಯಿಲೆ ಬಗ್ಗೆ ಅರಿವು ಮೂಡಿಸುವ ಕೆಲಸ ಮಾಡಲಾಗುತ್ತಿದೆ ಎಂದು ರೋಟರಿ ಮೈಸೂರು ವಲಯ 7ರ ಅಧ್ಯಕ್ಷ ಕೆ.ಸುಬ್ರಹ್ಮಣ್ಯರಾವ್ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ವಿಶ್ವ ಮರೆಗುಳಿತನ ಮಾಸಾಚರಣೆಗೆ ಚಾಲನೆ ನೀಡಿ ಮಾತನಾಡಿದ ಅವರು, ಮೈಸೂರು ಪೀಪಲ್ಸ್ ಅಸೋಸಿಯೇಷನ್ ಫಾರ್ ಜೆರಿಯಾಟ್ರಿಕ್ ಎಂಪವರ್‌ಮೆಂಟ್, ಶಾರದಾವಿಲಾಸ ಫಾರ್ಮಸಿ ಕಾಲೇಜು, ರೋಟರಿ ಮೈಸೂರು ಜಂಟಿ ಆಶ್ರಯದಲ್ಲಿ ಈ ಮಾಸಾಚರಣೆ ನಡೆಯಲಿದೆ. ಸೆ.13ರಂದು ಬೆಳಗ್ಗೆ 11ಕ್ಕೆ 'ನಮ್ಮ ನಡಿಗೆ ಆರೋಗ್ಯದೆಡೆಗೆ' ಶೀರ್ಷಿಕೆಯಡಿ ಚಾಮುಂಡಿಬೆಟ್ಟಕ್ಕೆ ಟ್ರೆಕ್ಕಿಂಗ್, ಸೆ.15ರಂದು ಬೆಳಗ್ಗೆ 10ಕ್ಕೆ ರೋಟರಿ ಸಭಾಂಗಣದಲ್ಲಿ 'ನಾವು ನಮ್ಮ ನೆನಪುಗಳು' ವಯಸ್ಸಾದವರಿಗೆ ನೆನಪಿನ ಶಕ್ತಿ ತಪಾಸಣೆ' ಸೆ.19ರಂದು ಸೆಲಬ್ರಿಟಿಗಳೊಂದಿಗೆ ಸಂವಾದ, 21ರಂದು ಬೆಳಗ್ಗೆ 9ಕ್ಕೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಮೆಮೋರಿ ವಾಕ್, 27ರಂದು ಬೆಳಗ್ಗೆ 9ಕ್ಕೆ ಜೆಎಸ್‌ಎಸ್ ಆಸ್ಪತ್ರೆಯಲ್ಲಿ 'ಆರೈಕೆ, ಸವಾಲುಗಳು ಮತ್ತು ಯಶಸ್ಸು' ಕಾರ್ಯಕ್ರಮ, ಸೆ.28ರಂದು ಬೆಳಗ್ಗೆ 11ಕ್ಕೆ ಮೈಸೂರಿನ ಸರ್ಕಾರಿ ಯೋಗ ಮತ್ತು ನ್ಯಾಚುರೋಪತಿ ಕಾಲೇಜಿನಲ್ಲಿ 'ನೆನಪಿಗಾಗಿ ಯೋಗ ಮೆಮೊರಿ ಸುಧಾರಣೆಗಾಗಿ ಮೂಲ ಯೋಗಾಸನಗಳನ್ನು ಕಲಿಯುವುದು' ಕಾರ್ಯಕ್ರಮದ ಮೂಲಕ ಸಮಾರೋಪಗೊಳಿಸಲಾಗುವುದು ಎಂದು ತಿಳಿಸಿದರು.

ಇತ್ತೀಚಿನ ದಿನಗಳಲ್ಲಿ 30 ವರ್ಷ ವಯಸ್ಸಿನವರಲ್ಲಿಯೂ ಕಾಣಿಸಿಕೊಳ್ಳುತ್ತಿದೆ. ಈ ಹಿಂದೆಲ್ಲ ಇದು ಕೇವಲ ವೃದ್ಧರಲ್ಲಷ್ಟೇ ಕಂಡು ಬರುತ್ತಿತ್ತು. ಹೀಗಾಗಿ ಇತ್ತೀಚಿನ ಬೆಳವಣಿಗೆ ಆತಂಕಕಾರಿಯಾಗಿದೆ ಎಂದರು.

ಇದು ಮಿದುಳಿನ ಕಾಯಿಲೆಯಾಗಿದ್ದು, ಈ ಸಮಸ್ಯೆಗಳಿಂದ ಬಳಲುತ್ತಿರುವವರನ್ನು ಹೇಗೆ ನೋಡಿಕೊಳ್ಳಬೇಕು, ಯಾವ ರೀತಿಯಲ್ಲಿ ಅವರಿಗೆ ಔಷಧಿ ನೀಡಬೇಕು. ಅವರೊಡನೆ ಹೇಗೆ ವರ್ತಿಸಬೇಕೆಂಬ ಬಗ್ಗೆ ತಿಳಿವಳಿಕೆ ಮೂಡಿಸಲಾಗುವುದು ಎಂದರು.

ಇತ್ತೀಚಿನ ದಿನಗಳಲ್ಲಿ ಎಲ್ಲರೂ ವಾಟ್ಸಾಪ್, ಇಂಟರ್‌ನೆಟ್, ಕಂಪ್ಯೂಟರ್ ಮೊದಲಾದವುಗಳಲ್ಲಿ ಮುಳುಗಿರುತ್ತಾರೆ. ಹೀಗಾಗಿ ಮರೆಗುಳಿತನ ಸಮಸ್ಯೆಯಿಂದ ಬಳಲುತ್ತಿರುವವರ ಬಗ್ಗೆ ಕಾಳಜಿ ಕಡಿಮೆ ಆಗುತ್ತಿದೆ. ಇದು ತಪ್ಪಬೇಕೆಂದು ಸಲಹೆ ನೀಡಿದರು. ಗೋಷ್ಠಿಯಲ್ಲಿ ಶಾರದಾವಿಲಾಸ ಫಾರ್ಮಸಿ ಕಾಲೇಜಿನ ಪ್ರಾಚಾರ್ಯ ಡಾ.ಹನುಮಂತಾಚಾರ್ ಜೋಷಿ, ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಜೆರಿಯಾಟ್ರಿಕ್ಸ್ ವಿಭಾಗದ ಮುಖ್ಯಸ್ಥೆ ಡಾ.ಪ್ರತಿಭಾ ಫೆರೇರಾ, ಸ್ಟ್ರಾಟಜಿಕ್ ಮತ್ತು ಲೀನ್ ಮೇನೇಜ್‌ಮೆಂಟ್ ಕನ್ಸಲ್ಟೆಂಟ್ ರವಿ ಶಿರಹಟ್ಟಿ, ಶಾರದಾವಿಲಾಸ ವಿದ್ಯಾಸಂಸ್ಥೆಗಳ ಗೌರವ ಕಾರ್ಯದರ್ಶಿ ಎನ್.ಚಂದ್ರಶೇಖರ್, ಸಂಸ್ಥೆ ಉಪಾಧ್ಯಕ್ಷ ಜಿ.ಎಸ್.ಗಣೇಶ್, ಗಣೇಶ್‌ರಾವ್ ಉಪಸ್ಥಿತರಿದ್ದರು.

ಮೈಸೂರಿಗೆ ಭಾರತ್ ಜೋಡೋ ಐಕ್ಯತಾ ಯಾತ್ರೆ

ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಭಾಗವಹಿಸಲು ಎಂಕೆಎಸ್ ಕರೆ

ಮೈಸೂರು,ಸೆ.11–ಎಐಸಿಸಿ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೂ ನಡೆಯುತ್ತಿರುವ "ಭಾರತ್ ಜೋಡೋ" ಕಾರ್ಯಕ್ರಮದ ನಿಮಿತ್ತ ರಾಹುಲ್ ಗಾಂಧಿ ಅವರು ಮೈಸೂರಿಗೆ ಆಗಮಿಸುತ್ತಿರುವ ಹಿನ್ನೆಲೆ ನಗರದ ಕಾಂಗ್ರೆಸ್ ಭವನದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಪೂರ್ವಭಾವಿ ಸಭೆಯನ್ನು ಆಯೋಜಿಸಲಾಗಿತ್ತು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಭಾರತ ದೇಶದ ಸ್ವಾತಂತ್ರ್ಯಕ್ಕಾಗಿ ಹಲವಾರು ತ್ಯಾಗ, ಬಲಿದಾನಗಳನ್ನು ಕಾಂಗ್ರೆಸ್ ಪಕ್ಷ ಮಾಡಿದೆ. ಅಂತಹ ಇತಿಹಾಸವುಳ್ಳ ಕಾಂಗ್ರೆಸ್ ಪಕ್ಷವನ್ನು ರಾಷ್ಟ್ರದೆಲ್ಲೆಡೆ ನಿರ್ನಾಮ ಮಾಡುತ್ತೇವೆಂಬ ಕನಸನ್ನು ಮೋದಿಯವರು ಹಾಗೂ ಅವರ ಹಿಂಬಾಲಕರು ಕಾಣುತ್ತಿದ್ದಾರೆ. ಆದರೆ ಅವರು ಈ ದೇಶವನ್ನು ಹಾಳು ಮಾಡುತ್ತಿರುವುದನ್ನು ಮರೆತಿದ್ದಾರೆ ಎಂದರು. ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ಕೆಆರ್‌ಕ್ಷೇತ್ರ ಉಸ್ತುವಾರಿ ಚಂದ್ರಮೌಳಿ, ನಗರಾಧ್ಯಕ್ಷ ಆರ್.ಮೂರ್ತಿ, ಮಾಜಿ ಶಾಸಕ ವಾಸು, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಲತಾ ಚಿಕ್ಕಣ್ಣ, ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಈಶ್ವರ ಚಕ್ಕಡಿ, ಶಿವಮಲ್ಲು, ಎಂ.ಕೆ.ಅಶೋಕ್, ಗೋಪಿನಾಥ್, ಬ್ಲಾಕ್ ಅಧ್ಯಕ್ಷರಾದ ಜಿ.ಸೋಮಶೇಖರ್, ಶ್ರೀಧರ, ವಿದ್ಯಾ, ಭವ್ಯ, ರಾಧಮಣಿ, ಲತಾ ರಂಗನಾಥ್, ಲೀಲಾ ಪಂಪಾಪತಿ, ಎಂ.ಸಿ.ಚಿಕ್ಕಣ್ಣ, ಟಿ.ಬಿ.ಚಿಕ್ಕಣ್ಣ, ಪ್ರದೀಪ್‌ಕುಮಾರ್, ನವೀನ್‌ಕುಮಾರ್, ಮಾಧ್ಯಮ ವಕ್ತಾರ ಮಹೇಶ್, ಹೇಮಾವತಿ, ವಿಜಯ್‌ಕುಮಾರ್, ಶಾದಿಖ್ ಉಲ್ಲಾ ರೆಹಮಾನ್, ನಾಸೀರ್, ಫಾರುಖ್, ಗುಣಶೇಖರ್, ಸೋಮು, ಧರ್ಮೇಂದ್ರ, ಪ್ರಕಾಶ್, ಲೋಕೇಶ್ ಕುಮಾರ್ ಮಾದಾಪುರ, ಸುಲೋಚನಾ ಆರಾಧ್ಯ, ಆನಂದ, ಪುಟ್ಟಸ್ವಾಮಿ, ಪ್ರಭಾಕರ್, ಪೈ.ಮಹೇಶ್, ಮೈಸೂರು ಬಸವಣ್ಣ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.09.2022 ಸೋಮವಾರ, ಮಳೆ ನಕ್ಷತ್ರ: ಪುಬ್ಬ, 31.08.2022 ರಿಂದ 13.09.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ,
ತಿಥಿ : ದ್ವಿತೀಯ, ನಕ್ಷತ್ರ : ಉತ್ತರಾಬಾಧ್ರ, ರಾಹುಕಾಲ: ಸಂಜೆ 7.30 ರಿಂದ 9ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಹಿಮ್ಮಡಿ, ಪಾದದಲ್ಲಿ ನೋವು–ಉರಿ–ಊತದ ಬಗ್ಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9.30ರಿಂದ.

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ಜೈನ ಸಾಹಿತ್ಯ ಸಂಸ್ಕೃತಿ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ಮಹಾವಿದ್ಯಾಲಯ, ಮೈಸೂರು :** ಜೈನಧರ್ಮ: ಸಮಾಜಮುಖಿ ಚಿಂತನೆಗಳು ಕುರಿತು ರಾಷ್ಟ್ರ ಮಟ್ಟದ ವಿಚಾರ ಸಂಕಿರಣ, ಉದ್ಘಾಟನೆ: ಧರ್ಮಸ್ಥಳದ ಎಸ್‌ಡಿಎಂ ವಿದ್ಯಾಸಂಸ್ಥೆಗಳ ಸಮೂಹದ ಉಪಾಧ್ಯಕ್ಷ ಡಿ. ಸುರೇಂದ್ರಕುಮಾರ್, ಅಧ್ಯಕ್ಷತೆ: ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ. ಸ.ಚಿ. ರಮೇಶ್, ಸ್ಥಳ: ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ಮಹಾವಿದ್ಯಾಲಯ, ಕೃಷ್ಣಮೂರ್ತಿಪುರಂ, ಬೆಳಗ್ಗೆ 11 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: ಶತಮಾನದ ಸ್ಮರಣೆಗಳು: 'ಮಂಡ್ಯ ಜಿಲ್ಲೆಯ ಶತಮಾನದ ನೆನಪುಗಳು' ಲೇಖನ ಪ್ರಸ್ತುತಿ– ಡಿ.ಎನ್. ಶ್ರೀಪಾದ್, 6.40 ಅರಿವಿನ ಶಿಖರ, 6.50 ರೈತರಿಗೆ ಸಲಹೆ, 7.45 ನಿತ್ಯ ವಿಜ್ಞಾನ, 10.00 ಲಯಸಂಭ್ರಮ: ತಾಳ, ಲಯ, ರಸಾಸ್ವಾದ, ಶಿಕ್ಷಕರ ದಿನಾಚರಣೆಯ ಸಂದರ್ಭದಲ್ಲಿ ಪರಿಕಲ್ಪನೆ ಮತ್ತು ಪ್ರಸ್ತುತಿ– ಹೆಚ್.ಎಲ್.ಶಿವಶಂಕರಸ್ವಾಮಿ, ನಿರ್ಮಾಣ:– ಎಸ್. ಸುಬ್ರಹ್ಮಣ್ಯ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ:** 12.30 ಭಕ್ತಿಗೀತೆಗಳು, 12.45 ನಮ್ಮ ಆರೋಗ್ಯ: 'ಹದಿಹರೆಯದವರಲ್ಲಿ ಪೋಷಣೆ ಮತ್ತು ಜೀವನಶೈಲಿ ಕುರಿತು ಡಾ. ಸುಧಾ ಸಾಯಿರಾಂ ಅವರೊಂದಿಗೆ ಮಾತುಕತೆ, 1.20 ಭಾವಗೀತೆಗಳು – ವಸುಧಾಶಾಸ್ತ್ರಿ, 3.00 ಎನ್.ವಿ. ಸತ್ಯನಾರಾಯಣ: ವೇಣುವಾದನ, 4.00 ಮಹಿಳಾರಂಗ: ಡಾಕ್ಟರ್ ಸಮಯ: ನೇರ ಫೋನ್ ಇನ್ ಕಾರ್ಯಕ್ರಮ ಭಾಗವಹಿಸುವ ವೈದ್ಯರು– ಡಾ. ರಾಜೇಶ್ವರಿ ಮಾದಪ್ಪ, ವಿಷಯ– ಮಕ್ಕಳ ಆರೋಗ್ಯದಲ್ಲಿ ತಾಯಿಯ ಪಾತ್ರ, ಪ್ರಸ್ತುತಿ– ಎಂ.ಎಸ್.ಭಾರತಿ. **ಸಂಜೆ:** ಝೇಂಕಾರ: ಮಕ್ಕಳ ಗೀತ ಗಾಯನ ಕಲಿಕಾ ಕಾರ್ಯಕ್ರಮ, ಕವಿ– ದಿವಾಕರ ಹೆಗಡೆ, ಸಂಗೀತ– ನಿತಿನ್ ರಾಜಾರಾಂ ಶಾಸ್ತ್ರಿ, ಚಾಮರಾಜ ನಗರ ನಾದಾಮೃತ ಸಂಗೀತ ವಿದ್ಯಾಲಯದ ಮಕ್ಕಳು, 6.50 ಕೃಷಿರಂಗ, 9.30 ನೆಲ ಮೂಲ: ಜನಪದ ಆಚರಣೆ ಮತ್ತು ಸಂಪ್ರದಾಯಗಳನ್ನು ಕುರಿತ ಸರಣಿ ಕಾರ್ಯಕ್ರಮ, ರಚನೆ– ಡಾ. ಪಿ.ಕೆ. ರಾಜಶೇಖರ್ ಪ್ರಸ್ತುತಿ– ಡಾ. ಮೈಸೂರು ಉಮೇಶ್, 10.30 ಸವಿನೆನಪು.

ಶಾಸಕ ಎಲ್.ನಾಗೇಂದ್ರ ಹುಟ್ಟುಹಬ್ಬ ಆಚರಣೆ


ಶ್ರೀ ಚಾಮುಂಡೇಶ್ವರಿ ಸೇರಿದಂತೆ ವಿವಿಧ ದೇವಸ್ಥಾನಗಳಲ್ಲಿ ವಿಶೇಷ ಪೂಜೆ, ಅಭಿಮಾನಿಗಳು, ಬಿಜೆಪಿ ಕಾರ್ಯಕರ್ತರಿಂದ ಅಭಿನಂದನೆ, ಶುಭ ಹಾರೈಕೆ



ಮೈಸೂರಿನ ಲಷ್ಕರ್ ಮೊಹಲ್ಲಾದಲ್ಲಿ ಬಿಜೆಪಿ ಕಾರ್ಯಕರ್ತರು ಶಾಸಕ ಎಲ್.ನಾಗೇಂದ್ರ ಅವರ ಹುಟ್ಟುಹಬ್ಬ ಆಚರಿಸಿದರು. ಈ ವೇಳೆ ನಗರಪಾಲಿಕೆ ಸದಸ್ಯ ಸತೀಶ್, ಬಿಜೆಪಿ ನಗರ ಯುವಮೋರ್ಚಾ ಅಧ್ಯಕ್ಷ ಎಂ.ಜೆ.ಕಿರಣ್‌ಗೌಡ, ಕೋ ಆಪರೇಟೀವ್ ಬ್ಯಾಂಕ್ ನಿರ್ದೇಶಕ ಅರವಿಂದ, ಪಕ್ಷದ ಚಾಮರಾಜ ಕ್ಷೇತ್ರದ ಅಧ್ಯಕ್ಷ ಸೋಮಶೇಖರ, ಜೈಶಂಕರ್, ಪಂಕಜ್, ಸಚಿನ್, ಕೀರ್ತಿ, ಅನೂಜ್ ಮತ್ತಿತರ ಮುಖಂಡರು ಶಾಸಕ ಎಲ್.ನಾಗೇಂದ್ರ ಅವರನ್ನು ಅಭಿನಂದಿಸಿದರು.



ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಎಲ್. ನಾಗೇಂದ್ರ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಉದ್ಯಮಿಗಳಾದ ಪ್ರದೀಪ್, ಭದ್ರೀಶ್, ಚಂದ್ರು ಕುಮಾರ್, ರಮೇಶ್, ಸಚಿನ್, ಅಜಯ್, ಪ್ರಕಾಶ್ ಹಾಗೂ ಸ್ನೇಹಿತರು ಶುಭಾಶಯ ಕೋರಿದರು.



ಬಿಜೆಪಿ ಮೈಸೂರು ನಗರ ಯುವಮೋರ್ಚಾ ವತಿಯಿಂದ ಶಾಸಕ ಎಲ್.ನಾಗೇಂದ್ರ ಅವರಿಗೆ ಹುಟ್ಟುಹಬ್ಬದ ಶುಭಾಶಯ ತಿಳಿಸಿ 'ವೀರ ಸಾವರ್ಕರ್ ಜೀವನ ಚರಿತ್ರೆ ಪುಸ್ತಕವನ್ನು ಉಡುಗೊರೆ ನೀಡಲಾಯಿತು. ಈ ವೇಳೆ ಯುವಮೋರ್ಚಾ ನಗರಾಧ್ಯಕ್ಷ ಎಂ.ಜೆ.ಕಿರಣ್ ಗೌಡ, ರಾಜ್ಯ ಉಪಾಧ್ಯಕ್ಷ ಜೈಶಂಕರ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಸದಸ್ಯ ಗೋಕುಲ್ ಗೋವರ್ಧನ್, ಪಕ್ಷದ ರಾಜ್ಯ ಪರಿಷತ್ ಸದಸ್ಯ ನಂಜಪ್ಪ, ಚಾಮರಾಜ ಕ್ಷೇತ್ರದ ಅಧ್ಯಕ್ಷ ಸೋಮಶೇಖರ ರಾಜು, ಕಾರ್ಯಕಾರಿಣಿ ಸದಸ್ಯ ಅರುಣ್ ಕಾಟ್ಕರ್ ಮತ್ತಿತರರಿದ್ದರು.









ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಅವರಿಗೆ ಸ್ವೀಟ್ ಮಹೇಶ್, ಭೂಮಿ ನಾರಾಯಣ್, ಪ್ರದೀಪ್, ಶಂಭು, ಚೌಡಪ್ಪ, ಮಂಜು ಮತ್ತಿತರರು ಹುಟ್ಟುಹಬ್ಬದ ಶುಭಾಶಯ ಕೋರಿ, ಅಭಿನಂದಿಸಿದರು.

ಮೈಸೂರು, ಸೆ.11(ಆರ್‌ಕೆ)– ಮೈಸೂರಲ್ಲಿ ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಎಲ್. ನಾಗೇಂದ್ರ ಅವರ ಹುಟ್ಟುಹಬ್ಬವನ್ನು ಇಂದು ಸಂಭ್ರಮ, ಸಡಗರದಿಂದ ಆಚರಿಸಲಾಯಿತು.

ಕುಟುಂಬದ ಸದಸ್ಯರೊಂದಿಗೆ ಇಂದು ಬೆಳಗ್ಗೆ ಚಾಮುಂಡಿಬೆಟ್ಟಕ್ಕೆ ತೆರಳಿದ ನಾಗೇಂದ್ರ ಅವರು, ಅಧಿದೇವತೆ ತಾಯಿ ಶ್ರೀ ಚಾಮುಂಡೇಶ್ವರಿ ದೇವಿಯ ದರ್ಶನ ಮಾಡಿ ವಿಶೇಷ ಪೂಜೆ ಸಲ್ಲಿಸಿದರು. ನಂತರ ವಿಜಯನಗರ 1ನೇ ಹಂತದ ಶ್ರೀ ಯೋಗಾ ನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ಶಾಸಕರು, ಪ್ರೊ.ಭಾಷ್ಯಂ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದರು. ನಗರಪಾಲಿಕೆ ಸದಸ್ಯ ಎನ್.ಯು. ಸುಬ್ಬಯ್ಯ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಅವರು ಸನ್ಮಾನಿಸಿ ಶುಭ ಕೋರಿದರು.

ಬಿಜೆಪಿ ಯುವ ಮೋರ್ಚಾ ನಗರಾಧ್ಯಕ್ಷ ಎಂ.ಜೆ.ಕಿರಣ್‌ಗೌಡ, ಮುಖಂಡರಾದ ಗೋಕುಲ್ ಗೋವರ್ಧನ್, ನಂಜಪ್ಪ, ಜಯಶಂಕರ, ಸೋಮಶೇಖರ, ರಾಜು ಅವರು, ಪ್ರೊ. ಭಾಷ್ಯಂ ಸ್ವಾಮೀಜಿಗಳ ಸಮ್ಮುಖದಲ್ಲಿ ನಾಗೇಂದ್ರ ಅವರಿಗೆ ಸ್ವಾತಂತ್ರ್ಯ ಸೇನಾನಿ ವೀರ ಸಾವರ್ಕರ್ ಅವರ ಜೀವನ ಚರಿತ್ರೆ ಪುಸ್ತಕವನ್ನು ನೀಡುವ ಮೂಲಕ ಹುಟ್ಟುಹಬ್ಬದ ಶುಭಾಷಯ ಕೋರಿದರು.

ನಜರ್‌ಬಾದ್‌ನ ಶ್ರೀ ನಿಂಬುಜಾದೇವಿಯ ದರ್ಶನ ಪಡೆದ ನಂತರ ಅಲ್ಲಿಯ ಅನಾಥ ಮಕ್ಕಳ ಶಾಲೆ ಮಕ್ಕಳಿಗೆ ಉಪಹಾರ ನೀಡಿದ ಶಾಸಕರು, ಬಿ.ಎನ್.ರಸ್ತೆಯ ಮೈಸೂರು ಹೋಟೆಲ್ ಕಾಂಪ್ಲೆಕ್ಸ್, ಲಷ್ಕರ್ ಮೊಹಲ್ಲಾದ ಕೆ.ಆರ್.ಆಸ್ಪತ್ರೆ ರಸ್ತೆ, ಮಂಡಿ ಮೊಹಲ್ಲಾದ ಗಂಗಾ ಪಾಪಣ್ಣ ಸರ್ಕಲ್, ಎಲ್ಲಮ್ಮ ತಾಯಿ ಸರ್ಕಲ್‌ನಲ್ಲಿ ಅಭಿಮಾನಿಗಳು, ಪಕ್ಷದ ಕಾರ್ಯಕರ್ತರೊಂದಿಗೆ ಕೇಕ್ ಕತ್ತರಿಸಿ ಜನ್ಮ ದಿನ ಆಚರಿಸಿಕೊಂಡರು.

ಬಿಜೆಪಿ ಕಚೇರಿಯಲ್ಲಿ ನಗರಾಧ್ಯಕ್ಷ ಶ್ರೀವತ್ಸ, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮೋಹನ್ ಹಾಗೂ ಇತರರು ನಾಗೇಂದ್ರ ಅವರಿಗೆ ಶುಭ ಕೋರಿದರು. ಜಲದರ್ಶಿನಿ ಅತಿಥಿ ಗೃಹದಲ್ಲಿರುವ ಶಾಸಕರ ಕಚೇರಿಯಲ್ಲಿ ಕಾರ್ಪೊರೇಟರ್‌ಗಳಾದ ರಂಗಸ್ವಾಮಿ, ರವೀಂದ್ರ, ಮುಖಂಡರಾದ ಮಂಗಳಾ ಸೋಮಶೇಖರ್, ಸ್ವೀಟ್ ಮಹೇಶ ಹಾಗೂ ಇತರರು ನಾಗೇಂದ್ರ ಅವರ ಹುಟ್ಟುಹಬ್ಬ ಆಚರಿಸಿದರು.

ಲಷ್ಕರ್ ಮೊಹಲ್ಲಾದ ಕೆ.ಆರ್.ಆಸ್ಪತ್ರೆ ರಸ್ತೆ ಸೇರಿದಂತೆ ಮೈಸೂರಿನ ಇತರೆಡೆಯೂ ಅಭಿಮಾನಿಗಳು, ಹಿತೈಷಿಗಳು ಹಾಗೂ ಬಿಜೆಪಿ ಕಾರ್ಯಕರ್ತರು ನಾಗೇಂದ್ರ ಅವರ ಹುಟ್ಟುಹಬ್ಬವನ್ನು ಸಡಗರದಿಂದ ಆಚರಿಸಿದರು. ಗೋಕುಲಂನ ಚೌಡಪ್ಪ ಸ್ನೇಹ ಬಳಗ, ಇಂಡಿಯನ್ ಟಿವಿ–ಬಸವ ಮಾರ್ಗ ಫೌಂಡೇಷನ್, ಒಂಟಿಕೊಪ್ಪಲಿನ ಎಂ.ಎಂ.ಎಂಟರ್ ಪ್ರೈಸಸ್, ಕೆ.ಜಿ.ಕೊಪ್ಪಲಿನ ಚೇತನ ಹಾಗೂ ಸ್ನೇಹ ಬಳಗ, ಪಡುವಾರಹಳ್ಳಿಯ 22ನೇ ವಾರ್ಡ್‌ನ ಬಿಜೆಪಿ ಕಾರ್ಯಕರ್ತರು ಬಿಜೆಪಿ ಯುವ ಮುಖಂಡ ಎಸ್.ಬಿ.ಶಿವ, ಸರಸ್ವತಿಪುರಂ ಶ್ರೀ ಚಾಮುಂಡೇಶ್ವರಿ ಅಸೋಸಿಯೇಟ್ಸ್, ಚಾಮರಾಜ ಕ್ಷೇತ್ರದ ಬಿಜೆಪಿ ಕಾರ್ಯಕರ್ತರು, ಎಲ್. ನಾಗೇಂದ್ರ ಅಭಿಮಾನಿ ಬಳಗ ಸೇರಿದಂತೆ ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಶಾಸಕರಿಗೆ ಹುಟ್ಟುಹಬ್ಬದ ಶುಭ ಕೋರಿದ್ದಾರೆ.

ಕೊಡವ ಸಮಾಜದಿಂದ 'ಕೈಲ್ ಪೋಳ್ದ್' ಉತ್ಸವ



ಮೈಸೂರು, ಸೆ.11(ಆರ್‌ಕೆ)–ಮೈಸೂರಿನ ಕೊಡವ ಸಮಾಜದ ವತಿಯಿಂದ ವಿಜಯನಗರ 1ನೇ ಹಂತದಲ್ಲಿರುವ ಸಮಾಜದ ಆವರಣದಲ್ಲಿ ಇಂದು ವಾರ್ಷಿಕ 'ಕೈಲ್ ಪೋಳ್ದ್' ಉತ್ಸವ ಆಚರಿಸಲಾಯಿತು.

ಆಯುಧಗಳಿಗೆ ಸಾಂಪ್ರದಾಯಿಕ ಪೂಜೆ ನೆರವೇರಿಸುವುದರೊಂದಿಗೆ ದಿನ ಪೂರ್ತಿ 'ಕೈಲ್ ಪೋಳ್ದ್' ಉತ್ಸವ ನಡೆಯಿತು. ಇದೇ ವೇಳೆ ಸಮಾಜದ ವತಿಯಿಂದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ವಿಧಾನಪರಿಷತ್ ಸದಸ್ಯ ಮಂದೆಪಂಡ ಸುಜಾ ಕುಶಾಲಪ್ಪ ಅವರನ್ನು ಸನ್ಮಾನಿಸಲಾಯಿತಲ್ಲದೆ, ಪ್ರತಿಭಾನ್ವಿತ ಕೊಡವ ವಿದ್ಯಾರ್ಥಿಗಳಿಗೆ ವಿವಿಧ ವಿದ್ಯಾರ್ಥಿ ವೇತನ ವಿತರಿಸಲಾಯಿತು.

ಕೊಡವ ಸಮಾಜದ ಅಧ್ಯಕ್ಷ ಮೇಚಂಡ ಎಂ.ಶಶಿ ಪೊನ್ನಪ್ಪ ಅವರು ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಉಪಾಧ್ಯಕ್ಷ ಮಾಲಚಿರ ಎಂ.ಪೊನ್ನಪ್ಪ, ಗೌರವ ಕಾರ್ಯದರ್ಶಿ ಮುಕ್ಕಾಟಿರ ಬಿ.ಜೀವನ್, ಜಂಟಿ ಕಾರ್ಯದರ್ಶಿ ಅಪ್ಪಂಡೆರಂಡ ತಾರಾ ಸೋಮಯ್ಯ, ಖಜಾಂಚಿ ಮಾಚಿಮಾಡ ಪಿ.ನಾಣಯ್ಯ, ಕೊಡವ ಸಮಾಜ ಕಲ್ಚರಲ್ ಅಂಡ್ ಸ್ಪೋರ್ಟ್ಸ್ ಕ್ಲಬ್ ಅಧ್ಯಕ್ಷ ಕುಟ್ಟಿಮಡ ಡಿ.ಮುತ್ತಪ್ಪ, ಸಮಾಜದ ಮಾಜಿ ಅಧ್ಯಕ್ಷರು, ಸಮುದಾಯದ ಸದಸ್ಯರು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಂಡು ಉತ್ಸವದ ಯಶಸ್ಸಿಗೆ ಕಾರಣರಾದರು.

ಕ್ಷುಲ್ಲಕ ಕಾರಣಕ್ಕೆ ಬನ್ನೂರಿನಲ್ಲಿ ಶನಿವಾರ ರಾತ್ರಿ

ಎರಡು ಗುಂಪುಗಳ ನಡುವೆ ಮಾರಾಮಾರಿ

ನಾಲ್ವರಿಗೆ ಇರಿತ, ಆರೋಪಿಗಳ ಪತ್ತೆಗೆ ವ್ಯಾಪಕ ಶೋಧ



ಸಾದೀಕ್



ತಬ್ರೇಜ್



ತೌಸಿಫ್



ಸಮಿಯುಲ್ಲಾ

ಮೈಸೂರು, ಸೆ.11(ಆರ್‌ಕೆ)–ಕ್ಷುಲ್ಲಕ ಕಾರಣಕ್ಕಾಗಿ ಒಂದೇ ಕೋಮಿನ ಎರಡು ಗುಂಪುಗಳ ನಡುವೆ ಮಾರಾಮಾರಿ ನಡೆದು ನಾಲ್ವರಿಗೆ ಚಾಕುವಿನಿಂದ ಇರಿದು ಗಾಯಗೊಳಿಸಿರುವ ಘಟನೆ ಬನ್ನೂರು ಪಟ್ಟಣದಲ್ಲಿ ಶನಿವಾರ ರಾತ್ರಿ ಸಂಭವಿಸಿದೆ.

ಘಟನೆಯಿಂದ ಸೈಯದ್ ಜಾಫರ್ ಸಾದಿಕ್, ಸಮೀವುಲ್ಲಾ, ತೌಸಿಫ್ ಹಾಗೂ ತಬ್ರೇಜ್ ಎಂಬುವವರಿಗೆ ಗಾಯಗಳಾಗಿದ್ದು, ಅವರನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲು ಮಾಡಲಾಗಿದೆ ಮನೆಗೆ ನುಗ್ಗಿ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿ ನಾಲ್ವರಿಗೆ ಇರಿದು ಗಾಯಗೊಳಿಸಿ ತಲೆಮರೆಸಿಕೊಂಡಿದ್ದಾರೆನ್ನಲಾದ ಸೈಯದ್ ಜವ್ರಾನ್, ಸೈಯದ್ ಹುಸೇನ್, ಸೈಯದ್ ಸಲ್ಮಾನ್, ಜಾಕೀರ್, ಬವೇಜ್ ಪಾಷಾ, ಶಕೀಬ್ ಅಹಮದ್, ವಸೀಮ್ ಹಾಗೂ ಇತರರ ಪತ್ತೆಗೆ ಬನ್ನೂರು ಠಾಣೆ ಪೊಲೀಸರು ವ್ಯಾಪಕ ಶೋಧ ನಡೆಸುತ್ತಿದ್ದಾರೆ.

ಎರಡು ಕುಟುಂಬದ ಬಾಲಕರಿಬ್ಬರು ಶನಿವಾರ ಸಂಜೆ ಕಿತ್ತಾಡಿಕೊಂಡಿದ್ದರು. ಅದನ್ನು ಕೇಳಲು ಬಂದ ಒಂದು ಕುಟುಂಬದವರ ಮೇಲೆ ಮತ್ತೊಂದು ಗುಂಪಿನವರು ಹಲ್ಲೆಗೆ ಮುಂದಾದಾಗ ಎರಡೂ ಗುಂಪಿನವರ ನಡುವೆ ಮಾರಾಮಾರಿಯಾಯಿತು. ಅದರಿಂದ ಆಕ್ರೋಶಗೊಂಡ 8 ಮಂದಿಯ ಗುಂಪಿನ ಯುವಕರು ಮನೆಗೆ ನುಗ್ಗಿ ನಾಲ್ವರಿಗೆ ಚಾಕುವಿನಿಂದ ಇರಿದು ಗಾಯಗೊಳಿಸಿ ಪರಾರಿಯಾಗಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಬನ್ನೂರು ಠಾಣೆ ಇನ್ಸ್‌ಪೆಕ್ಟರ್ ಹಾಗೂ ಸಿಬ್ಬಂದಿಗಳು, ಮಹಜರು ನಡೆಸಿ ಗಾಯಗೊಂಡವರನ್ನು ಬನ್ನೂರು ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿದ ನಂತರ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಿದರು.

ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಶನಿವಾರ ರಾತ್ರಿಯೇ ತಂಡ ರಚಿಸಿ ತಲೆಮರೆಸಿಕೊಂಡ ಆರೋಪಿಗಳ ಪತ್ತೆಗೆ ಶೋಧ ಕಾರ್ಯ ಆರಂಭಿಸಿದ್ದಾರೆ. ಗಾಯಗೊಂಡು ಕೆಆರ್.ಆಸ್ಪತ್ರೆ ಸರ್ಜಿಕಲ್ ಬ್ಲಾಕ್‌ನಲ್ಲಿ ದಾಖಲಾಗಿರುವ ಸಾದಿಕ್, ತಬ್ರೇಜ್, ತೌಸಿಫ್ ಹಾಗೂ ಸಮೀವುಲ್ಲಾ ಅವರಿಂದ ಘಟನೆ ಕುರಿತು ಹೇಳಿಕೆ ದಾಖಲಿಸಿಕೊಂಡಿರುವ ಪೊಲೀಸರು, ಆರೋಪಿಗಳ ಮಾಹಿತಿ ಆಧರಿಸಿ ಶೋಧ ನಡೆಸುತ್ತಿದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೇ ಹಿರಿಯ ಪೊಲೀಸ್ ಅಧಿಕಾರಿಗಳು ಘಟನಾ ಸ್ಥಳಕ್ಕೆ ಧಾವಿಸಿ ಪರಿಸ್ಥಿತಿ ಅವಲೋಕಿಸಿದರು. ಸ್ಥಳದಲ್ಲಿ ಪೊಲೀಸರನ್ನು ನಿಯೋಜಿಸಲಾಗಿದ್ದು, ಕಟ್ಟೆಚ್ಚರ ವಹಿಸಲಾಗಿದೆ. ತಲೆ ಮರೆಸಿಕೊಂಡಿರುವ ಆರೋಪಿಗಳನ್ನು ಬಂಧಿಸಿ ಕಾನೂನು ರೀತಿಯ ಕ್ರಮ ಜರುಗಿಸುವಂತೆ ಒತ್ತಾಯಿಸಿ ಹಲ್ಲೆಗೊಳಗಾದವರ ಸಂಬಂಧಿಕರು ಬನ್ನೂರು ಠಾಣೆಗೆ ಜಮಾಯಿಸಿದ್ದರು.

ರಾಹುಲ್ ಗಾಂಧಿಯವರ ಭಾರತ್ ಜೋಡೋ ಯಾತ್ರೆ ಹಿನ್ನೆಲೆ ಮೈಸೂರಲ್ಲಿ ಸೆ.18ರಂದು ಪೂರ್ವಭಾವಿ ಸಭೆ



ಮೈಸೂರು, ಸೆ.11(ಎಂಕೆ)– ರಾಹುಲ್ ಗಾಂಧಿಯವರ ಭಾರತ್ ಜೋಡೋ ಯಾತ್ರೆ ಸಂಬಂಧ ಸೆ.18 ರಂದು ಮೈಸೂರಿನಲ್ಲಿ ಬೃಹತ್ ಪೂರ್ವಭಾವಿ ಸಭೆ ಹಮ್ಮಿಕೊಳ್ಳಲಾಗಿದ್ದು, ಸ್ಥಳೀಯ ಹಾಲಿ ಮತ್ತು ಮಾಜಿ ಶಾಸಕರು, ಮುಖಂಡರು, ಕಾರ್ಯಕರ್ತರು ಕಡ್ಡಾಯವಾಗಿ ಭಾಗವಹಿಸುವಂತೆ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಸೂಚನೆ ನೀಡಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ಸಭೆ ನಡೆಸಿದ ಅವರು, ವಿಪಕ್ಷ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ನೇತೃತ್ವದಲ್ಲಿ ಸೆ.18 ರಂದು ಬೃಹತ್ ಸಭೆ ನಡೆಯಲಿದ್ದು, ಚಾ.ನಗರ ಮತ್ತು ಮೈಸೂರಿನಲ್ಲಿ ಭಾರತ್ ಜೋಡೋ ಯಾತ್ರೆ ಕುರಿತು ಸಂಪೂರ್ಣ ಮಾಹಿತಿ ನೀಡಲಿದ್ದಾರೆ.

ಸೆ.30ರಂದು ಚಾ.ನಗರದಲ್ಲಿ ರಾಹುಲ್ ಗಾಂಧಿಯವರು ಬುಡಕಟ್ಟು ಸಮುದಾಯದವರೊಂದಿಗೆ ಚರ್ಚಿಸಲಿದ್ದಾರೆ. ಯಾತ್ರೆಯ ಪ್ರತೀ ದಿನ ಸಂಜೆ ಪ್ರಮುಖ ನಾಯಕರೊಂದಿಗೆ ಕಾರ್ನರ್ ಮೀಟಿಂಗ್ ನಡೆಸಲಿದ್ದಾರೆ. ಚಾ.ನಗರ ನಂತರ ಮೈಸೂರಿಗೆ ಯಾತ್ರೆ ಆಗಮಿಸಲಿದೆ ಎಂದರು.

ಅ.2ರಂದು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಗಾಂಧೀಜಿಯವರು ಭೇಟಿ ನೀಡಿದ್ದ ಬದನವಾಳು ಗ್ರಾಮದಲ್ಲಿ ಗಾಂಧಿ ಜಯಂತಿ ಆಚರಿಸಲು ಈಗಾಗಲೇ ಸ್ಥಳ ಆಯ್ಕೆ ಮಾಡಲಾಗಿದೆ. ಅದ್ದೂರಿತನಕ್ಕಿಂತ ಅಚ್ಚುಕಟ್ಟಾಗಿ ಯಾತ್ರೆ ನಡೆಯಬೇಕು. ಈ ನಿಟ್ಟಿನಲ್ಲಿ ಪ್ರತಿಯೊಬ್ಬರು ಶಿಸ್ತಿನಿಂದ ವರ್ತಿಸಬೇಕು ಎಂದು ಸೂಚಿಸಿದರು.

ಭಾವನಾತ್ಮಕವಾಗಿ ಸೆಳೆಯುವ ತಂತ್ರ: ಬಿಜೆಪಿಯವರು ಹೇಳಿಕೊಳ್ಳಲು ಒಂದೇ ಒಂದು ಅಭಿವೃದ್ಧಿ ಕಾರ್ಯ ಮಾಡಿಲ್ಲ. ಆದ್ದರಿಂದ ತಮ್ಮನ್ನು ಮತದಾರರು ತಿರಸ್ಕಾರ ಮಾಡುತ್ತಾರೆಂದು ಭಾವನಾತ್ಮಕವಾಗಿ ಸೆಳೆಯುವ ತಂತ್ರ ನಡೆಸಿದೆ. ಜನಸ್ಪಂದನ ಸಮಾವೇಶದಲ್ಲಿ ಸಾಧನೆ ಹೇಳುವ ಬದಲು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಇದರಲ್ಲಿಯೇ 'ಅವರ' 'ಸಾಧನೆ' ಏನೆಂಬುದು ಅರ್ಥವಾಗುತ್ತಿದೆ ಎಂದು ಕಾಲೆಳೆದರು.

ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಮಾಜಿ ಶಾಸಕರಾದ ವಾಸು, ಕಳಲೆ ಕೇಶವಮೂರ್ತಿ, ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ, ಮುಖಂಡರು, ನಗರ ಪಾಲಿಕೆ ಸದಸ್ಯರು, ಕಾರ್ಯಕರ್ತರು ಉಪಸ್ಥಿತರಿದ್ದರು.

ಮಾದಕ ವಸ್ತುಗಳ ಬಗ್ಗೆ ಜಾಗೃತಿ ಮೂಡಿಸಿದ ವೈದ್ಯಕೀಯ ವಿದ್ಯಾರ್ಥಿಗಳು

'ಸಂಸ್ಕೃತಿ-2022' ಲೋಗೋ ಅನಾವರಣ



ಮೈಸೂರು, ಸೆ11(ಎಂಕೆ)– 'ಗಾಂಜಾ ಗಮ್ಮತ್ತು ಜೀವಕ್ಕೆ ಆಪತ್ತು', 'ಮಾದಕ ವ್ಯಸನಿಗಳಾಗಬೇಡಿ', 'ಮದ್ಯಪಾನ ಮಾಡಿ ವಾಹನ ಚಲಾಯಿಸಬೇಡಿ' ಎಂಬಿತ್ಯಾದಿ ಜಾಗೃತಿ ಫಲಕಗಳನ್ನು ಹಿಡಿದ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ವಿದ್ಯಾರ್ಥಿಗಳು 'ಸಂಸ್ಕೃತಿ–2022' (ಸಾಂಸ್ಕೃತಿಕ ಮತ್ತು ಸ್ಪರ್ಧಾ ಕಾರ್ಯಕ್ರಮ) ಲೋಗೋ ಅನಾವರಣಗೊಳಿಸಿದರು.

ನಗರದ ಕೋಟೆ ಆಂಜನೇಯ ದೇವಸ್ಥಾನದ ಎದುರು ನಡೆದ ಲೋಗೋ ಅನಾವರಣ ಕಾರ್ಯಕ್ರಮದಲ್ಲಿ ನೃತ್ಯ ಪ್ರದರ್ಶನ ಮಾಡಿದ ವೈದ್ಯಕೀಯ ವಿದ್ಯಾರ್ಥಿಗಳು ಮಾದಕ ವಸ್ತುಗಳಿಂದ ದೂರವಿರಿ ಎಂದು ಜಾಗೃತಿ ಮೂಡಿಸಿದರು. ಬಳಿಕ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕಿ ದಾಕ್ಷಾಯಿಣಿ, ಅ.1,2 ಮತ್ತು3 ರಂದು ನಡೆಯುವ ಸಂಸ್ಥೆಯ ಸಾಂಸ್ಕೃತಿಕ ಹಾಗೂ ಸ್ಪರ್ಧಾ ಕಾರ್ಯಕ್ರಮ(ಸಂಸ್ಕೃತಿ–2022) ಲೋಗೋ ಅನಾವರಣ ಗೊಳಿಸಿದರು.

ಬಳಿಕ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಚಿಕ್ಕ ವಯಸ್ಸಿ ಮಕ್ಕಳು ಮಾದಕ ವ್ಯಸನಿಗಳಾಗುತ್ತಿದ್ದಾರೆ. ಈ ಬಗ್ಗೆ ಪೋಷಕರು ಎಚ್ಚರಿಕೆ ವಹಿಸಬೇಕಾಗಿದೆ. ತಮ್ಮ ಮಕ್ಕಳ ಚಟುವಟಿಕೆಗಳ ಬಗ್ಗೆ ಅನುಮಾನ ಕಂಡು ಬಂದಲ್ಲಿ ಕೂಡಲೇ ಆಸ್ಪತ್ರೆಗೆ ಭೇಟಿ ನೀಡುವಂತೆ ಕಿವಿಮಾತು ಹೇಳಿದರು. ಇದಕ್ಕೂ ಮುನ್ನ ವೈದ್ಯಕೀಯ ಕಾಲೇಜಿನಿಂದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದವರೆಗೆ ಸೈಕಲ್ ಹಾಗೂ ಕಾಲ್ನಡಿಯ ಜಾಥಾ ನಡೆಸಿ ಜಾಗೃತಿ ಮೂಡಿಸಿದರು. ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿ ಡಾ.ಚಂದ್ರಶೇಖರ್, ಡಾ.ಶ್ವೇತಾ, ಡಾ.ಅರ್ಜುನ್, ಡಾ.ತೇಜಸ್, ಡಾ.ಸುಭಾಷ್ ಚಂದ್ರ ಮೌಳಿ ಮತ್ತಿತರರಿದ್ದರು.

ಕರ್ನಾಟಕ ಕ್ಷತ್ರಿಯ ಒಕ್ಕೂಟದ ಮೈಸೂರು ಜಿಲ್ಲಾ ಮಹಿಳಾ ಘಟಕದ ಪದಾಧಿಕಾರಿಗಳ ಪದಗ್ರಹಣ

ಒಳಪಂಗಡಗಳು ಒಂದಾಗಿ ಕ್ಷತ್ರಿಯ ಸಮುದಾಯದ ಅಸ್ಮಿತೆ ಉಳಿಸಬೇಕು

ಸಾಮಾಜಿಕ, ಆರ್ಥಿಕ, ಶೈಕ್ಷಣಿಕವಾಗಿ ಮುಂದೆ ಬರಲು ಸಮುದಾಯಕ್ಕೆ ರಾಜಕೀಯ ಶಕ್ತಿ ಅಗತ್ಯ ; ಒಕ್ಕೂಟದ ರಾಜ್ಯಾಧ್ಯಕ್ಷ ಉದಯಸಿಂಗ್



ಮೈಸೂರಿನ ಪುರಭವನದಲ್ಲಿ ಭಾನುವಾರ ಕರ್ನಾಟಕ ಕ್ಷತ್ರಿಯ ಒಕ್ಕೂಟದ ಮೈಸೂರು ಜಿಲ್ಲಾ ಮಹಿಳಾ ಘಟಕದ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ನಡೆಯಿತು.

ಮೈಸೂರು, ಸೆ.11(ಪಿಎಂ)– ಒಳಪಂಗಡಗಳು ಒಂದಾಗಿ ಕ್ಷತ್ರಿಯ ಸಮುದಾಯದ ಅಸ್ಮಿತೆ ಉಳಿಸಿಕೊಳ್ಳಬೇಕಿದ್ದು, ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕವಾಗಿ ಮಾತ್ರವಲ್ಲದೆ, ಎಲ್ಲಾ ಕ್ಷೇತ್ರಗಳಲ್ಲಿ ಸಮುದಾಯ ಮುಂಚೂಣಿಗೆ ಬರಬೇಕಿದೆ. ಅದಕ್ಕಾಗಿ ಸಮುದಾಯ ಒಗ್ಗಟಿನ ಮೂಲಕ ರಾಜಕೀಯವಾಗಿ ಪ್ರಬಲವಾಗಬೇಕು ಎಂದು ಕರ್ನಾಟಕ ಕ್ಷತ್ರಿಯ ಒಕ್ಕೂಟದ ರಾಜ್ಯಾಧ್ಯಕ್ಷ ಉದಯ ಸಿಂಗ್ ಹೇಳಿದರು.

ಮೈಸೂರಿನ ಪುರಭವನದಲ್ಲಿ ಭಾನುವಾರ ಕರ್ನಾಟಕ ಕ್ಷತ್ರಿಯ ಒಕ್ಕೂಟದ ಮೈಸೂರು ಜಿಲ್ಲಾ ಮಹಿಳಾ ಘಟಕದ ಪದಾಧಿಕಾರಿಗಳ ಪದಗ್ರಹಣ ಹಾಗೂ ಸಮುದಾಯದ ಜಾಗೃತಿ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿದ್ದ ಅವರು ಇದೇ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದರು.

ಇಂದು ನಾವು ಮೈಸೂರು ಜಿಲ್ಲೆಯಲ್ಲಿ ಮಹಿಳಾ ಘಟಕದ ಶುಭಾರಂಭ ಮಾಡಿದ್ದೇವೆ. ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಮ್ಮ ಸಮಾಜದ ಶಕ್ತಿ ಕ್ಷೀಣಿಸಿದೆ. ಪ್ರಜಾಪ್ರಭುತ್ವ ಎಂಬುದು ಕೇವಲ ಹೆಸರಿಗೆ ಸೀಮಿತವಾಗಿರುವುದು ಇದಕ್ಕೆ ಕಾರಣ. ಕ್ಷತ್ರಿಯ ಸಮಾಜ ಇಂದು ಒಳಪಂಗಡಗಳಿಂದ ವಿಭಜನೆಯಾಗುತ್ತಿದ್ದು, ಇದರಿಂದ ಸಮಾಜದ ಅಸ್ಮಿತೆ ಕಳೆದುಕೊಳ್ಳುವಂತೆ ಆಗಿದೆ. ಹಾಗಾಗಿ ಒಂದಾಗಿ ಸಮಾಜದ ಅಸ್ಮಿತೆ ಕಾಪಾಡಿಕೊಳ್ಳಬೇಕಿದೆ ಎಂದು ತಿಳಿಸಿದರು.

ಈಗ ರಾಜಕೀಯ ಶಕ್ತಿ ಎಂದರೆ ಸಂಖ್ಯಾ ಬಲವಾಗಿದೆ. ಹಾಗಾಗಿ ಕ್ಷತ್ರಿಯ ಸಮುದಾಯದ ಒಳಪಂಗಡಗಳು ಒಂದಾಗಬೇಕಿದೆ. ಈ ಹಿನ್ನೆಲೆಯಲ್ಲಿ ಸಮುದಾಯ ಸಂಘಟಿಸಲು ಮುಂದಾಗಿದ್ದೇವೆ. ನಮ್ಮ ಸಮಾಜದ ಸ್ತ್ರೀ ಶಕ್ತಿ ಜಾಗೃತಿಗೊಳಿಸದೇ ಇದ್ದರೆ ಸಂಘಟನೆ ಅಪೂರ್ಣವಾಗಲಿದೆ. ಹಾಗಾಗಿ ಸಮಾಜ ಒಗ್ಗೂಡಿಸಲು ನಮ್ಮ ಮಹಿಳಾ ಸಮುದಾಯ ನಮ್ಮೊಂದಿಗೆ ಹೆಜ್ಜೆ ಹಾಕಬೇಕಿದೆ. ಈ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ಒಕ್ಕೂಟದ ಪ್ರಪ್ರಥಮ ಜಿಲ್ಲಾ ಮಟ್ಟದ ಮಹಿಳಾ ಘಟಕಕ್ಕೆ ಚಾಲನೆ ನೀಡಿದ್ದೇವೆ ಎಂದು ಹೇಳಿದರು.

ದೇಶ–ಧರ್ಮ ಸಂರಕ್ಷಣೆಗೆ ಸಮಾಜ ಸದೃಢ ವಾಗಿರಬೇಕು: ಪ್ರಜಾತಂತ್ರ ವ್ಯವಸ್ಥೆಯಲ್ಲಿ ಯಾವ ರೀತಿಯಲ್ಲಿ ಬದುಕು ಕಟ್ಟಿಕೊಳ್ಳಬೇಕು ಎಂಬ ಬಗ್ಗೆ ನಮ್ಮ ಸಮುದಾಯಕ್ಕೆ ಬಹುತೇಕ ಅರಿವಿನ ಕೊರತೆ ಇದೆ. ನಮ್ಮಲ್ಲಿ ಯಾರನ್ನೇ ಕೇಳಿದರೂ ದೇಶ–ಧರ್ಮ ಎನ್ನುತ್ತಾರೆ. ದೇಶ–ಧರ್ಮ ಬಹುಮುಖ್ಯ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸಮಾಜ ಸದೃಢವಾಗಿದ್ದರೆ ದೇಶ–ಧರ್ಮದ ಸಂರಕ್ಷಣೆ ಸಾಧ್ಯವಾಗಲಿದೆ ಎಂಬ ಪ್ರಜ್ಞೆಯನ್ನು ನಾವು ಸಮುದಾಯದಲ್ಲಿ ಮೂಡಿಸುತ್ತಿದ್ದೇವೆ. ಸಮುದಾಯ ಒಗ್ಗೂಡಿ ಒಂದು ಶಕ್ತಿಯಾಗಿ ಹೊರಹೊಮ್ಮಬೇಕಿದೆ ಎಂದು ತಿಳಿಸಿದರು.

ಯಾವ ಜಾತಿ ತಾವು ಪ್ರಬಲವೆಂದು ತೋರಿಸಿಕೊಂಡಿವೆಯೋ ಅವರು ಮನವಿ ಸಲ್ಲಿಸುವುದೇ ಬೇಕಿಲ್ಲ. ಸರ್ಕಾರವೇ ಅವರ ಬಳಿ ಹೋಗಿ ಅವರ ಬೇಡಿಕೆಗಳನ್ನು ಈಡೇರಿಸುತ್ತದೆ. ಪ್ರಬಲವಾಗಿಲ್ಲವೆಂದರೆ ಆ ಸಮುದಾಯಗಳ ಮನವಿ ಪರಿಗಣಿಸುವುದಿಲ್ಲ. ಈ ಪರಿಸ್ಥಿತಿ ಅರಿತು ನಮ್ಮ ಸಮಾಜವೂ ಒಂದಾಗಬೇಕು. ನಮ್ಮ ಸಮಾಜ ರಾಷ್ಟ್ರಮಟ್ಟದಲ್ಲಿ ವ್ಯಾಪಕವಾಗಿ ಹರಡಿಸುವ ಸಮುದಾಯ. ನಾವೆಲ್ಲಾ ಒಂದಾಗಬೇಕು ಎಂದರು.

ಮೈಸೂರು ಭಾಗದಲ್ಲಿ ಹತ್ತಾರು ನಾಯಕರಿದ್ದರೆ, ಅವರನ್ನು ಬೆಳೆಸುವ ಕೆಲಸ ನಮ್ಮ ಒಕ್ಕೂಟದಿಂದ ಆಗಬೇಕೆಂಬ ನಿಟ್ಟಿನಲ್ಲಿ ಹೆಜ್ಜೆ ಹಾಕಲು ಹೊರಟ್ಟಿದ್ದೇವೆ. ಈಗ 22 ಜಿಲ್ಲೆಯಲ್ಲಿ ಪ್ರವಾಸ ಮಾಡಲಾಗಿದೆ. ಹಳೇ ಮೈಸೂರಿನಲ್ಲಿ ಹಳ್ಳಿ ಹಳ್ಳಿಯಲ್ಲಿ ಹೋಗಿ ಕ್ಷತ್ರಿಯ ಸಮಾಜದ ಜಾಗೃತಿ ಮೂಡಿಸುವ ಕಾರ್ಯಕ್ರಮ ಮಾಡಲಿದ್ದೇವೆ. ಒಳಪಂಗಡಗಳೂ ಒಳಗೊಂಡಂತೆ ರಾಜ್ಯದಲ್ಲಿ ನಮ್ಮ ಸಮುದಾಯ 1.10 ಕೋಟಿ ಜನಸಂಖ್ಯೆ ಇದೆ ಎಂದು ಹೇಳಿದರು.

ಇದಕ್ಕೂ ಮುನ್ನ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದ ಒಕ್ಕೂಟದ ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ಡಾ.ಎಸ್.ಉಮಾಮೂರ್ತಿ ರಾವ್, ಸುಮಾರು 36 ಒಳಪಂಗಡಗಳಾಗಿ ಚದುರಿರುವ ಸಮುದಾಯವನ್ನು ಒಗ್ಗೂಡಿಸಿ ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ಪಡೆದುಕೊಳ್ಳಬೇಕು. ರಜಪೂತ, ಭಾವಸಾರ, ಮರಾಠಾ ಎಂದು ಹೇಳಿಕೊಳ್ಳದೆ ಎಲ್ಲರೂ ಕ್ಷತ್ರಿಯರು ಎಂದು ಹೆಮ್ಮೆಯಿಂದ ಹೇಳಿಕೊಳ್ಳಬೇಕು. ಆಳುವವರಿಗೆ ನಮ್ಮ ಶಕ್ತಿಯನ್ನು ತೋರಿಸಬೇಕು ಎಂದು ತಿಳಿಸಿದರು.

ಇದೇ ವೇಳೆ ಮೈಸೂರು ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷರಾಗಿ ಸವಿತಾ ಘಾಟ್ಗೆ, ಪ್ರಧಾನ ಕಾರ್ಯದರ್ಶಿಯಾಗಿ ಸವಿತಾ ಚವ್ಹಾಣ್, ಸಹ ಕಾರ್ಯದರ್ಶಿಯಾಗಿ ನೀಮಾ ಶ್ರೀನಿವಾಸ್ ಸೇರಿದಂತೆ ಮೊದಲಾದವರು ವಿವಿಧ ಅಧಿಕಾರ ವಹಿಸಿಕೊಂಡರು. ನಗರಪಾಲಿಕೆ ಸದಸ್ಯೆ ಶೋಭಾ ಸುನೀಲ್, ಮುಖಂಡರಾದ ಡಾ.ವಾಮನ್ ರಾವ್ ಬಾಪಟ್, ಭುವನೇಶ್ವರಿ, ಸತ್ಯನಾರಾಯಣ ಸಿಂಗ್, ಸತ್ಯಪ್ಪ, ಮಹದೇವರಾವ್, ಅರುಣ್ ಚವ್ಹಾಣ್, ರಾಮರಾವ್ ಬಾವಲೆ, ಸುನೀಲ್, ಗಣೇಶ್ ಲಾಳಿಗೆ ಮತ್ತಿತರರು ಹಾಜರಿದ್ದರು.

ನಕ್ಕರೆ ಅದೇ ಸ್ವರ್ಗ

ಕೆಲಸದಾಕೆ : ಅಮ್ಮಾವ್ರೆ ಇನ್ಮೇಲೆ ನಿಮ್ಮ ಹಳೇ ನೈಟಿ, ಡ್ರೆಸ್, ಸೀರೆ ನನಗೆ ಕೊಡ್ಬೇಡಿ.
ಯಜಮಾನಿ : ಯಾಕೆ? ಏನಾಯ್ತು?
ಕೆಲಸದಾಕೆ : ನಾನು ನಿಮ್ಮ ಡ್ರೆಸ್ ಹಾಕಿಕೊಂಡು ಬಂದ್ರೆ ನಿಮ್ಮ ಯಜಮಾನ್ರಿಗೆ ಕನ್‌ಫ್ಯೂಸ್ ಆಗುತ್ತೆ.
ಯಜಮಾನಿ : ಅಯ್ಯೋ ದೇವ್ರೆ! ಏನಾದರೂ ವ್ಯತ್ಯಾಸ ಆಯ್ತಾ.
ಕೆಲಸದಾಕೆ : ಇಲ್ಲಾ ಅಮ್ಮಾವ್ರೆ, ನೀವು ಅಂತ ತಿಳ್ಕೊಂಡು ನನ್ನ ಕಡೆ ತಿರುಗಿಯೂ ನೋಡ್ತಿಲ್ಲ.

ಮೈಸೂರು ಮಿತ್ರ

ಸೋಮವಾರ, 12 ಸೆಪ್ಟೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಈ ನೆಲದ ಮೇಲಿನ ಅತಿ ದೊಡ್ಡ ಕಸವೆಂದರೆ, ಪ್ರಶ್ನಿಸುವ ಸಾಮರ್ಥ್ಯವನ್ನು ಕಳೆದುಕೊಂಡ ಮೆದುಳು. – ಆಲ್ಬರ್ಟ್ ಐನ್‌ಸ್ಟೈನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಗೇಣಿ ಕೊಟ್ಟು, ಗೋಣಿ ಕೊಡವಿದ.

ನಿಮ್ಮ ಪತ್ರಗಳು

ವಂಚಿಸುವ ಮೊಬೈಲ್ ಆ್ಯಪ್‌ಗಳ ಬಗ್ಗೆ ಎಚ್ಚರ

ಮಾನ್ಯರೆ,

ದೇಶದಲ್ಲಿ ಇದೀಗ ಹಣವನ್ನು ವಂಚಿಸುವ ಚೈನೀಸ್ ಮೊಬೈಲ್ ಅಪ್ಲಿಕೇಶನ್‌ಗಳ ಗ್ಯಾಂಗ್ ಅಷ್ಟೆ ಅಲ್ಲದೆ ಭಾರತದಲ್ಲೇ ಕುಳಿತು ಹಣ ಹೂಡಿಕೆ ಮೇಲೆ ಆಕರ್ಷಕ ಬಡ್ಡಿ ಹಣವನ್ನು ನೀಡುತ್ತೇವೆಂದು ವಂಚನೆ ಮಾಡುವ ಅಪ್ಲಿಕೇಶನ್‌ಗಳ ಗ್ಯಾಂಗ್ ಭಾರೀ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿವೆ.

ಮೊದಲು ಈ ವಂಚನೆ ಮಾಡುವ ಜಾಲ ಫೇಸ್‌ಬುಕ್, ವಾಟ್ಸಾಪ್ ಮತ್ತಿತರ ಸಾಮಾಜಿಕ ಜಾಲತಾಣದಲ್ಲಿ ಒಂದು ಲಿಂಕ್ ಅನ್ನು ಹರಿಯಬಿಡುತ್ತದೆ. ನಾವು ಅಮೆರಿಕ, ಕೆನಡಾ ಮತ್ತು ಯೂರೋಪ್ ದೇಶದವರು ನಾವು ನಡೆಸುವ ಬ್ಯುಸಿನೆಸ್‌ನಲ್ಲಿ ನೀವು ಪಾಲ್ಗೊಂಡು ಲಾಭ ಪಡೆಯಿರಿ ಎಂದು ನಂಬಿಸುತ್ತಾರೆ.

ಅವರು ಕಳಿಸಿದ ಲಿಂಕ್ ಅನ್ನು ಕ್ಲಿಕ್ ಮಾಡಿದ ನಂತರ ಅಪ್ಲಿಕೇಶನ್ ನಿಮ್ಮ ಮೊಬೈಲ್‌ನಲ್ಲಿ ಡೌನ್ಲೋಡ್ ಆಗಿ ಸಕ್ರಿಯವಾಗುತ್ತದೆ. (ನೆನಪಿರಲಿ ಈ ಆ್ಯಪ್‌ಗಳು ಗೂಗಲ್ ಪ್ಲೇ ಸ್ಟೋರ್‌ನಿಂದ ನುಸುಳುವುದು ಕಷ್ಟ) ಮೊಬೈಲ್ ಅಪ್ಲಿಕೇಶನ್ ಮೂಲಕ ವಂಚನೆ ಮಾಡುವ ಗ್ಯಾಂಗ್ ಆರಂಭದಲ್ಲಿ ರೂ. 500/– ರಿಂದ 1000/– ಹೂಡಿಕೆ ಮಾಡಲು ಹೇಳುತ್ತದೆ. ನೀವು ಹೂಡಿಕೆ ಮಾಡಿದ ನಂತರ ನಿಮಗೆ ದಿನೇ ದಿನೆ ನಿಮ್ಮ ಹೂಡಿಕೆಯ ಹಣದ ಮೇಲೆ ಕೆಲವು ದಿನಗಳ ಕಾಲ ಶೇಕಡಾ 5ರಿಂದ 10 ರವರೆಗೆ ನಿಮ್ಮ ಬ್ಯಾಂಕ್ ಖಾತೆಗೆ ಬಡ್ಡಿಯನ್ನು ಜಮಾ ಮಾಡುತ್ತಾರೆ.

ಅಷ್ಟೇ ಅಲ್ಲದೆ ಈ ಆ್ಯಪ್‌ಗಳ ಗ್ಯಾಂಗ್ ಮತ್ತೊಬ್ಬರನ್ನು ಪರಿಚಯಿಸಿದವರಿಗೆ ಹೆಚ್ಚು ಬಡ್ಡಿ ಹಣವನ್ನು ಕೊಡುವುದಾಗಿ ಪುಸಲಾಯಿಸಲಾಗುತ್ತದೆ. ನೀವು ಇದು ನಿಜವಾಗಿ ಲಾಭಗಳಿಸುವ ವಿಧಾನ ಎಂದು ತಿಳಿದು ನಿಮ್ಮ ಗೆಳೆಯರು, ನಿಮ್ಮ ಮನೆಯ ಇತರೆ ಸದಸ್ಯರಿಗೆ ನೀವು ಹಣ ಹೂಡಲು ಒತ್ತಾಯ ಮಾಡುತ್ತೀರಿ. ಪ್ರಯೋಜನಗಳನ್ನು ನೋಡಿ ಅವರು ಸಹ ಮುಂದುವರೆಸುತ್ತಾರೆ. ಎಲ್ಲರೂ ಅನಾಯಾಸವಾಗಿ ಹಣ ಮಾಡುವ ಸುಲಭ ಮಾರ್ಗ ಎಂದು ಭಾವಿಸಿ ಲಕ್ಷಗಟ್ಟಲೆ ಹೂಡಿಕೆ ಮಾಡುತ್ತಾರೆ. ಒಮ್ಮೆ ಸಾವಿರಾರು ಜನ ಸೇರಿ ದೊಡ್ಡ ಮೊತ್ತದ ಹಣ ಹೂಡಿಕೆ ಆದಂತೆ ಆ್ಯಪ್ ಒಂದೇ ಕ್ಷಣದಲ್ಲಿ ನಿಷ್ಕ್ರಿಯಗೊಳ್ಳುತ್ತದೆ.ನೀವು ಏನೋ ತಾಂತ್ರಿಕ ದೋಷವಿರಬಹುದೆಂದು ಒಂದೆರಡು ದಿನ ಸುಮ್ಮನೆ ಇದ್ದುಬಿಡ್ತೀರಿ. ಅಷ್ಟರೊಳಗೆ ಈ ಆನ್ಲೈನ್ ಆ್ಯಪ್ ಮೂಲಕ ವಂಚಿಸುವ ಗ್ಯಾಂಗ್ ಕೊಂಚವು ಕೂಡಾ ಸುಳಿವು ಬಿಡದೆ ಇಂಟರ್ನೆಟ್‌ನಿಂದ ಮಂಗ ಮಾಯವಾಗಿಬಿಟ್ಟಿರುತ್ತವೆ.

ದೇಶ–ವಿದೇಶಗಳ ಗ್ಯಾಂಗ್ ಈ ವಂಚನೆ ಜಾಲದಲ್ಲಿ ಭಾಗಿಯಾಗಿರುವುದು ಬೆಳಕಿಗೆ ಬಂದಿದೆ. ಸುಲಭದಲ್ಲಿ ಹಣಗಳಿಸಲು ಮೊಬೈಲ್ ಫೋನುಗಳ ಅಥವಾ ಬೇರೆ ಯಾವ ಮೂಲಕ ಇಲ್ಲವೆಂಬುದು ನಾವೆಲ್ಲರೂ ಮನಗಾಣಬೇಕಿದೆ . ಸಂಸ್ಕೃತದ ಪದ ಹೇಳುವಂತೆ "ತಸ್ಮಾತ ಜಾಗೃತ" ಅರ್ಥಾತ್ ಎಚ್ಚರದಿಂದ ಇರಬೇಕಿದೆ.

– ವಿಜಯಕುಮಾರ್ ಎಚ್.ಕೆ., ರಾಯಚೂರು.

ಮತ್ತೊಂದು ಬಸ್ ಸೌಲಭ್ಯ ಕಲ್ಪಿಸಿ

ಮಾನ್ಯರೆ,

ಮೈಸೂರು ನಗರ ಬಸ್ ನಿಲ್ದಾಣದಿಂದ ಪ್ರತಿದಿನ ಸಂಜೆ 5.30ಕ್ಕೆ ವರುಣಾ, ಹೊಸ ಕೋಟೆ, ಸುತ್ತೂರು, ಬಿಳಿಗೆರೆ ಹಾಗೂ ಕಿರುಗುಂದ ಮಾರ್ಗವಾಗಿ ನಂಜನಗೂಡು ತಲುಪುವ ಬಸ್ಸಿನ ಪ್ರಯಾಣಿಕರ ಪಾಡು ತುಂಬಾ ತ್ರಾಸದಾಯಕವಾಗಿದೆ.

ಮುಖ್ಯವಾಗಿ ಸಂಜೆ ವೇಳೆ ಈ ಬಸ್ಸಿಗೆ ಕಾಲೇಜು ವಿದ್ಯಾರ್ಥಿ–ವಿದ್ಯಾರ್ಥಿನಿಯರೇ ಹೆಚ್ಚಾಗಿದ್ದು, ಕೆಲಸ ಕಾರ್ಯಗಳಿಗೆ ಹೋಗಿ ಬರುವ ಮತ್ತು ಗ್ರಾಮೀಣ ಪ್ರದೇಶಗಳಿಗೆ ಹೋಗುವವರಿಗೆ ಈ ಬಸ್ಸಿನ ಪ್ರಯಾಣವು ನರಕಯಾತನೆಯಾಗಿದೆ.

ಅದೂ ಅಲ್ಲದೆ ಈ ಬಸ್ಸು ಸಂಜೆ ನಗರ ಬಸ್ ನಿಲ್ದಾಣಕ್ಕೆ ಬರುತ್ತಿದ್ದಂತೆಯೇ ಪುರುಷ, ಮಹಿಳೆಯರೆನ್ನದೇ ಯುವಕ, ಯುವತಿಯರೆನ್ನದೇ ಬಸ್ಸಿನ ಎರಡೂ ದ್ವಾರಗಳಲ್ಲಿ ಒಮ್ಮೆಲೇ ನೂಕು ನುಗ್ಗಲು ಉಂಟಾಗಿ, ಸಾರ್ವಜನಿಕರ ಘರ್ಷಣೆಗೂ ಕಾರಣವಾಗಿದೆ.

ಈಗ್ಗೆ ಕಳೆದ ತಿಂಗಳು ಇದೇ ರೀತಿ ಬಸ್ಸು ಹತ್ತುವ ಸಂದರ್ಭದಲ್ಲಿ ನೂಕು ನುಗ್ಗಲು ಉಂಟಾಗಿ ಯುವತಿಯೊಬ್ಬಳ ಬೆಲೆ ಬಾಳುವ ಮೊಬೈಲನ್ನು ಕಳ್ಳರು ಬಸ್ಸಿನ ಬಾಗಿಲ ಬಳಿಯಲ್ಲಿಯೇ ಅಪಹರಿಸಿದ್ದರು. ಇಷ್ಟಾದರೂ ಸಹ ಈ ಬಸ್ಸಿನ ಪ್ರಯಾಣಿಕರ ಸ್ಥಿತಿಗತಿ ಇಲ್ಲೇ ಇರುವ ನಗರ ಸಾರಿಗೆ ಅಧಿಕಾರಿಗಳ ಗಮನಕ್ಕೆ ಬಾರದಿರುವುದು ನಿಜಕ್ಕೂ ವಿಪರ್ಯಾಸವೇ ಸರಿ. ಆದರೂ ಪ್ರಯಾಣಿಕರ ಒತ್ತಡ ಹಾಗೂ ಜಂಜಾಟದ ನಡುವೆಯೂ ಉತ್ತಮವಾಗಿ ಕಾರ್ಯ ನಿರ್ವಹಿಸುವ ಈ ಬಸ್ಸಿನ ನಿರ್ವಾಹಕ ಮತ್ತು ಚಾಲಕರ ಕಾರ್ಯಕ್ಷಮತೆಯಂತೂ ನಿಜಕ್ಕೂ ಶ್ಲಾಘನೀಯ.

ಅಂತೆಯೇ ನಗರ ಬಸ್ ನಿಲ್ದಾಣದಿಂದ ಬಿಳಿಗೆರೆ ಗ್ರಾಮದವರೆವಿಗೂ ಪ್ರಯಾಣಿಕರ ಒತ್ತಡ ತಗ್ಗಿಸಲು ಈ ಮಾರ್ಗವಾಗಿ ಮತ್ತೊಂದು ಬಸ್ಸಿನ ಅವಶ್ಯಕತೆ ಇದೆ. ಆದ್ದರಿಂದ ಸಾರಿಗೆ ಸಂಸ್ಥೆಯ ಅಧಿಕಾರಿಗಳು ಸಂಜೆ 5.15ಕ್ಕೆ ನಗರ ಬಸ್ ನಿಲ್ದಾಣದಿಂದ ಬಿಳಿಗೆರೆ ಗ್ರಾಮದವರೆಗೂ ತಲುಪುವಂತೆ ಮತ್ತೊಂದು ಬಸ್ಸನ್ನು ಕಲ್ಪಿಸಬೇಕಾಗಿ ಈ ಮೂಲಕ ಮನವಿ.

– ವಿ. ದೇವರಾಜು, ಅಳಗಂಚಿ ಗ್ರಾಮ, ನಂಜನಗೂಡು ತಾಲೂಕು.

ಅವ್ಯವಸ್ಥೆಗಳ ಆಗರ ಸೋಮನಾಥನಗರ

ಮಾನ್ಯರೆ,

ಮೈಸೂರಿನ ದಟ್ಟಗಳ್ಳಿ ಬಳಿಯಿರುವ ಸೋಮನಾಥನಗರ (ಆದಿತ್ಯ ಸರ್ಕಲ್ ಸುತ್ತಮುತ್ತ) ಅವ್ಯವಸ್ಥೆಗಳ ಆಗರವಾಗಿದೆ. ಈ ಬಡಾವಣೆ ಇದುವರೆಗೂ ಯಾರಿಗೂ ಬೇಡವಾಗಿ ನಿರ್ಲಕ್ಷ್ಯಕ್ಕೊಳಗಾಗಿದೆ. ಇಡೀ ಬಡಾವಣೆ ಕಗ್ಗತ್ತಲಿನಿಂದ ಕೂಡಿದೆ. ಚರಂಡಿ ವ್ಯವಸ್ಥೆಯಂತೂ ಇಲ್ಲವೇ ಇಲ್ಲ, ಪಾರ್ಕುಗಳು ಪಾಳು ಬಿದ್ದಿವೆ.

ಬಡಾವಣೆ ತುಂಬಾ ಆಳೆತ್ತರದ ಗಿಡ–ಗಂಟಿಗಳು ಬೆಳೆದು ನಿಂತಿವೆ. ಜೊತೆಗೆ ಸಿಹಿ ನೀರಿನಿಂದ ವಂಚಿತರಾಗಿ ಉಪ್ಪು ನೀರು ಬಳಸಬೇಕಾದ ಪರಿಸ್ಥಿತಿ ಇದೆ. ಇದೀಗ ಬಡಾವಣೆ ಬೋಗಾದಿ ಪಟ್ಟಣ ಪಂಚಾಯ್ತಿ ವ್ಯಾಪ್ತಿಗೆ ಸೇರಿದೆ ಎಂದು ಭಾನುವಾರ ಬೆಳಗ್ಗೆ ಆಟೋದಲ್ಲಿ ಮೈಕ್ ಮೂಲಕ ಅನೌನ್ಸ್ ಮಾಡಲಾಗುತ್ತಿತ್ತು.

ಸೋಮನಾಥನಗರದಲ್ಲಿ ಸ್ವಚ್ಛತೆಯ ಸಮಸ್ಯೆ ಇದೆ. ಮೇಲೆ ಹೇಳಿರುವ ಸಮಸ್ಯೆಗಳ ಬಗ್ಗೆ ಪಟ್ಟಣ ಪಂಚಾಯ್ತಿ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಗಮನಹರಿಸಿ, ಮೊದಲು ಬಡಾವಣೆಗೆ ಲೈಟಿನ ವ್ಯವಸ್ಥೆ ಮಾಡಿ ಜನರು ನೆಮ್ಮದಿಯಿಂದ ಓಡಾಡುವ ವ್ಯವಸ್ಥೆ ಮಾಡಬೇಕು ಎಂದು ಕೋರುತ್ತೇವೆ. ನಂತರ ಉಳಿದ ಸಮಸ್ಯೆಗಳ ಬಗ್ಗೆ ಆದ್ಯತೆ ಮೇರೆಗೆ ಗಮನಹರಿಸಬೇಕಾಗಿದೆ. ಎರಡನೆಯದಾಗಿ ಸೋಮನಾಥನಗರಕ್ಕೆ ಸಿಹಿ ನೀರಿನ ವ್ಯವಸ್ಥೆ ಕಲ್ಪಿಸುವ ಮೂಲಕ ಉಪ್ಪು ನೀರಿನ ಬಳಕೆಯಿಂದ ಆಗುತ್ತಿರುವ ಸಮಸ್ಯೆಯಿಂದ ಪಾರು ಮಾಡಬೇಕಾಗಿ ಮನವಿ.

– ಚಂದ್ರ, ಸೋಮನಾಥನಗರ, ಮೈಸೂರು.



ದಸರಾ ಫಲಪುಷ್ಪ ಪ್ರದರ್ಶನ ಪ್ರವೇಶ ಗುತ್ತಿಗೆಗೆ ನೀರಸ ಪ್ರತಿಕ್ರಿಯೆ


ಒಬ್ಬರೇ ಟೆಂಡರ್‌ದಾರ ಅರ್ಜಿ ಸಲ್ಲಿಕೆ, ಮರು ಟೆಂಡರ್‌ಗೆ ಅರ್ಜಿ ಆಹ್ವಾನ

–ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಸೆ.11– ನಾಡಹಬ್ಬ ದಸರಾ ಮಹೋತ್ಸವದ ಪ್ರಮುಖ ಆಕರ್ಷಣೀಯ ಕೇಂದ್ರ ಬಿಂದುಗಳಲ್ಲಿ ಒಂದಾದ ದಸರಾ ಫಲಪುಷ್ಪ ಪ್ರದರ್ಶನಕ್ಕೆ ಗುತ್ತಿಗೆದಾರರಿಂದ ಈ ಬಾರಿ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಒಬ್ಬರೇ ಟೆಂಡರ್‌ದಾರರು ಪಾಲ್ಗೊಂಡ ಹಿನ್ನೆಲೆಯಲ್ಲಿ ಮರು ಟೆಂಡರ್‌ಗೆ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಕೊರೊನಾ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷಗಳಿಂದ ದಸರಾ ಫಲಪುಷ್ಪ ಪ್ರದರ್ಶನ ನಡೆದಿರಲಿಲ್ಲ. ಈ ಬಾರಿ ಅದ್ದೂರಿಯಾಗಿ ಫಲಪುಷ್ಪ ಪ್ರದರ್ಶನ ನಡೆಸಲು ಸರ್ಕಾರ ನಿರ್ಧರಿಸಿದ್ದು, ಹಾಗಾಗಿ ಟೆಂಡರ್ ಕರೆಯಲಾಗಿತ್ತು. ಸೆ4ರಂದು ಟೆಂಡರ್ ಅವಧಿ ಅಂತ್ಯಗೊಂಡಿದ್ದು, ಸೆ. 6ರಂದು ಟೆಂಡರ್ ತೆರೆಯಲಾಗಿತ್ತು. ಈ ವೇಳೆ ದಸರಾ ಫಲಪುಷ್ಪ ಪ್ರದರ್ಶನದ ಪ್ರವೇಶ ಶುಲ್ಕ ಸಂಗ್ರಹಿಸುವ ಟೆಂಡರ್‌ಗೆ ಒಬ್ಬರೇ ಗುತ್ತಿಗೆದಾರರು ಅರ್ಜಿ ಸಲ್ಲಿಸಿದ್ದರು. ಸರ್ಕಾರದ ಮೊತ್ತ 70 ಲಕ್ಷ ರೂ. ನಿಗದಿ ಪಡಿಸಲಾಗಿತ್ತು ಆದರೆ ಟೆಂಡರ್‌ದಾರರು 60 ಲಕ್ಷಕ್ಕೆ ಅರ್ಜಿ ಸಲ್ಲಿಸಿದ್ದರು.

ಹಾಗಾಗಿ ನಿಯಮಾನುಸಾರ ಟೆಂಡರ್ ಅನ್ನು ಸ್ವೀಕರಿಸಲು ತೊಡಕು ಉಂಟಾದ



ಹಿನ್ನೆಲೆಯಲ್ಲಿ ಪ್ರವೇಶ ಶುಲ್ಕ ಸಂಗ್ರಹಿಸುವ ಪ್ರಕ್ರಿಯೆಗೆ ಮರು ಟೆಂಡರ್ ಕರೆಯಲಾಗಿದ್ದು, ಸೆ. 14ರವರೆಗೆ ಅರ್ಜಿ ಸಲ್ಲಿಕೆಯನ್ನು ವಿಸ್ತರಿಸಲಾಗಿದೆ. ಪ್ರಸಕ್ತ ಸಾಲಿನ ದಸರಾ ಫಲಪುಷ್ಪ ಪ್ರದರ್ಶನ ವಿಜೃಂಭಣೆಯಿಂದ ನಡೆಯಲಿರುವುದರಿಂದ ಟೆಂಡರ್ ಪ್ರಕ್ರಿಯೆಯನ್ನು 3 ವಿಭಾಗಗಳಲ್ಲಿ ವಿಂಗಡಿಸಲಾಗಿತ್ತು. ಅದರಲ್ಲಿ ಆವರಣದಲ್ಲಿ 50 ಮಳಿಗೆಗಳುಳ್ಳ ಫುಡ್ ಸ್ಟಾಲ್, 20 ಲಕ್ಷ ಸರ್ಕಾರದ ದರ ನಿಗದಿ ಮಾಡಲಾಗಿತ್ತು ಹೇಮಂತ್ ಕುಮಾರ್ ಎಂಬುವರು 32 ಲಕ್ಷಕ್ಕೆ ಬಿಡ್ ಕೂಗಿದ್ದಾರೆ.

ಫಲಪುಷ್ಪ ಪ್ರದರ್ಶನದ ಆವರಣದಲ್ಲಿ ಅಮ್ಯೂಸ್‌ಮೆಂಟ್ ಪಾರ್ಕ್ (ಮಕ್ಕಳ ಆಟಿಕೆ)ಗೆ ಟೆಂಡರ್ ಕರೆಯಲಾಗಿದ್ದು, 8 ಲಕ್ಷಮೊತ್ತನಿಗದಿ ಮಾಡಿ ಟೆಂಡರ್ ಕರೆಯಲಾಗಿತ್ತು. ವಿನಯ್ ಕುಮಾರ್ ಎಂಬವರು 14 ಲಕ್ಷಕ್ಕೆ ಟೆಂಡರ್ ಪಡೆದಿದ್ದಾರೆ. ಹಾಗಾಗಿ ಅಮ್ಯೂಸ್‌ಮೆಂಟ್ ಪಾರ್ಕ್, ಆಹಾರ ಮೇಳದ ಟೆಂಡರ್ ಪ್ರಕ್ರಿಯೆ ಅಂತಿಮಗೊಂಡಿದ್ದು, ಸಿದ್ಧತಾ ಕಾರ್ಯ ಮಾಡಿಕೊಳ್ಳುವಂತೆ ಕಾರ್ಯಾದೇಶ ನೀಡಲಾಗಿದೆ.



ಫಲಪುಷ್ಪ ಪ್ರದರ್ಶನದಿಂದ ಅರಮನೆಗೆ ಶಿಫ್ಟ್ ಆದ ದೆಹಲಿಯ ಕೆಂಪುಕೋಟೆ

ಪಾರ್ಕ್‌ನಲ್ಲಿರುವ ಗಾಜಿನ ಮನೆಯಲ್ಲಿ ಈ ಬಾರಿ ದಸರಾ ಫಲಪುಷ್ಪ ಪ್ರದರ್ಶನದ ವೇಳೆ ವಿವಿಧ ಬಣ್ಣದ ಲಕ್ಷಾಂತರ ಗುಲಾಬಿ ಹೂಗಳಿಂದ ದೆಹಲಿಯ ಕೆಂಪುಕೋಟೆಯನ್ನು ಪ್ರತಿಷ್ಠಾಪಿಸಲು ಈ ಹಿಂದೆ ನಿರ್ಧರಿಸಲಾಗಿತ್ತು. ಆದರೆ ಮೈಸೂರು ಅರಮನೆ ಆವರಣದಲ್ಲಿ ನವರಾತ್ರಿ ವೇಳೆ ನಡೆಯಲಿರುವ ಫಲ ಪುಷ್ಪ ಪ್ರದರ್ಶನದಲ್ಲಿ ದೆಹಲಿಯ ಕೆಂಪು ಕೋಟೆಯನ್ನು ಹೂವಿನಿಂದ ಸಿದ್ಧಪಡಿಸುವುದಕ್ಕೆ ಅರಮನೆ ಮಂಡಳಿ ಅನುಮತಿ ಪಡೆದಿದೆ. ಈ ಹಿನ್ನೆಲೆಯಲ್ಲಿ ಕುಪ್ಪಣ್ಣ ಪಾರ್ಕ್ ನಲ್ಲಿರುವ ಗಾಜಿನ ಮನೆಯಲ್ಲಿ ಬೇರೊಂದು ಆಕೃತಿ ನಿರ್ಮಾಣ ಮಾಡಲು ತೋಟಗಾರಿಕಾ ಇಲಾಖೆ ನಿರ್ಧರಿಸಿದೆ. ಸೋಮವಾರ ಮೈಸೂರು ಜಿಲ್ಲಾ ಪಂಚಾಯತ್ ಸಿಇಒ ಅಧ್ಯಕ್ಷತೆಯಲ್ಲಿ ನಡೆಯಲಿರುವ ಸಭೆಯಲ್ಲಿ ಈ ಬಾರಿಯ ದಸರಾ ಫಲ ಪುಷ್ಪ ಪ್ರದರ್ಶನದ ಥೀಮನ್ನು ನಿರ್ಧರಿಸಲಾಗುತ್ತದೆ.

ಈ ಸಂಬಂಧ ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕ ಕೆ.ರುದ್ರೇಶ್ ಮಾತನಾಡಿ, ಸರ್ಕಾರ ನಿಗದಿಪಡಿಸಿದ ಮೊತ್ತಕ್ಕಿಂತ ಕಡಿಮೆ ಮೊತ್ತದ ಟೆಂಡರ್ ಕೂಗಿರುವುದರಿಂದ ನಿಯಮಾನುಸಾರ ಮರು ಟೆಂಡರ್‌ಗೆ ಅರ್ಜಿ ಆಹ್ವಾನಿಸಲಾಗಿದೆ. ಪ್ರವೇಶ ಶುಲ್ಕ ಸಂಗ್ರಹಿಸುವ ಟೆಂಡರ್ ಆಗಿರುವುದರಿಂದ ಫಲಪುಷ್ಪ ಪ್ರದರ್ಶನಕ್ಕೆ ಯಾವುದೇ ತರಹದ ಹಿನ್ನಡೆಯಾಗುವುದಿಲ್ಲ. ಕಾರಣ ಸೆ.26ರಿಂದ ನವರಾತ್ರಿ ಆರಂಭವಾಗುವುದರಿಂದ ಅಂದಿನಿಂದ ಪ್ರವೇಶ ಶುಲ್ಕ ಸಂಗ್ರಹ ಮಾಡಲಾಗುತ್ತದೆ. ಹಾಗಾಗಿ ಫಲಪುಷ್ಪ ಪ್ರದರ್ಶನದ ಅಗತ್ಯ ಸಿದ್ಧತೆಯನ್ನು ಆರಂಭಿಸಲಾಗಿದೆ. ಈ ಮರು ಟೆಂಡರ್ ಪ್ರಕ್ರಿಯೆಗೂ ದಸರಾ ಫಲಪುಷ್ಪ ಪ್ರದರ್ಶನ ಯಶಸ್ವಿಗೂ ಯಾವುದೇ ತರಹದ ಹಿನ್ನೆಡೆ ಆಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ರಾಜಮಾರ್ಗದಲ್ಲಿ ದಸರಾ ಗಜಪಡೆ ತಾಲೀಮು...





ಮೈಸೂರು ದಸರಾ ಮಹೋತ್ಸವಕ್ಕೆ ಆಗಮಿಸಿರುವ 14 ಆನೆಗಳು ಭಾನುವಾರ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ತಾಲೀಮಿನಲ್ಲಿ ಕೆ.ಆರ್.ವೃತ್ತದ ಮೂಲಕ ಹಾದುಹೋಗುತ್ತಿರುವುದು. ಚಿತ್ರಗಳು : ಲಕ್ಷ್ಮೀನಾರಾಯಣ ಯಾದವ್

ಮೈಸೂರಿನ ಹಿಂದಿನ ಡಿಸಿ ರೋಹಿಣಿ ಸಿಂಧೂರಿ ವಿರುದ್ಧ ಶಾಸಕ ಸಾ.ರಾ.ಮಹೇಶ್ ಮಾನನಷ್ಟ ಮೊಕದ್ದಮೆ



ಮೈಸೂರು, ಸೆ.11(ಆರ್‌ಕೆಬಿ)–ಶಾಸಕ ಸಾ.ರಾ.ಮಹೇಶ್ ಭೂ ಕಬಳಿಕೆ ಮಾಡಿದ್ದು, ಅವರು ಜೈಲಿಗೆ ಹೋಗುತ್ತಾರೆ ಎಂದು ಖಾಸಗಿ ವ್ಯಕ್ತಿಯೊಂದಿಗೆ ಮೈಸೂರಿನ ಇಂದಿನ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ನಡೆಸಿದ್ದ ಸಂಭಾಷಣೆ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದ ಹಿನ್ನೆಲೆ ಕೆ.ಆರ್.ನಗರ ಶಾಸಕ ಸಾ.ರಾ.ಮಹೇಶ್, ರೋಹಿಣಿ ಸಿಂಧೂರಿ ಅವರ ವಿರುದ್ಧ ಮೈಸೂರಿನ ಎರಡನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯದಲ್ಲಿ ಒಂದು ಕೋಟಿ ರೂ.ಗಳ ಸಿವಿಲ್ ಮತ್ತು ಕ್ರಿಮಿನಲ್ ಮಾನ ನಷ್ಟ ಮೊಕದ್ದಮೆ ಹೂಡಿದ್ದು, ನ್ಯಾಯಾಲಯವು ರೋಹಿಣಿ ಸಿಂಧೂರಿ ಅವರಿಗೆ ನೋಟಿಸ್ ಜಾರಿ ಮಾಡಿದೆ.

ಮೈಸೂರಿನ ತಮ್ಮ ಕಚೇರಿಯಲ್ಲಿ ಭಾನುವಾರ ಸುದ್ದಿಗೋಷ್ಠಿ ನಡೆಸಿದ ಶಾಸಕ ಸಾ.ರಾ. ಮಹೇಶ್ ಈ ಕುರಿತು ವಿವರಿಸಿದರು. ರೋಹಿಣಿ ಸಿಂಧೂರಿ ಮೈಸೂರಿನ ಜಿಲ್ಲಾಧಿಕಾರಿಯಾಗಿದ್ದ ವೇಳೆ ಕೋವಿಡ್ ಸೋಂಕಿನ ನಿರ್ವಹಣೆ ಸರಿಯಾಗಿ ಮಾಡದೇ ಸಾವಿನ ಸಂಖ್ಯೆಯನ್ನು ಮುಚ್ಚಿಟ್ಟು ಪತ್ರಿಕೆಗಳಿಗೆ ತಪ್ಪಾದ ವಿವರಗಳನ್ನು ನೀಡಿದ್ದರು. ಅಲ್ಲದೇ ಭ್ರಷ್ಟಾಚಾರವನ್ನೂ ಎಸಗಿದ್ದರು. ಈ ಹಿನ್ನೆಲೆಯಲ್ಲಿ ಸರ್ಕಾರ ಅವರನ್ನು ವರ್ಗಾವಣೆ ಮಾಡಿತ್ತು. ಆದರೆ ತಾನು ಭೂ ಕಬಳಿಕೆ ಪ್ರಕರಣ ಕೈಗೆತ್ತಿಕೊಂಡಿದ್ದರಿಂದ ವರ್ಗಾವಣೆ ಆಗಿದೆ ಎಂದು ಸಾಮಾಜಿಕ ಜಾಲತಾಣದಲ್ಲಿ ಬಿಂಬಿಸಿಕೊಳ್ಳುವ ಪ್ರಯತ್ನ ನಡೆಸಿದ್ದರು. ನನ್ನ ವಿರುದ್ಧ ಸಾರ್ವಜನಿಕರೊಬ್ಬರು ನೀಡಿದ್ದ ಅರ್ಜಿಯನ್ನೇ ಆಧಾರವಾಗಿಟ್ಟುಕೊಂಡು ಯಾವುದೇ ತನಿಖೆ ಇಲ್ಲದೇ ಭೂ ಕಬಳಿಕೆ ಆರೋಪ ಮಾಡಿದ್ದರು. ಅವರು ಮಾಡಿದ್ದ ಆರೋಪದಲ್ಲಿ ಹುರುಳಿಲ್ಲ ಎಂಬುದು ಈಗಾಗಲೇ ವಿಭಾಗೀಯ ಆಯುಕ್ತರು ನೀಡಿದ ವರದಿಯಿಂದ ದೃಢಪಟ್ಟಿದೆ. ಅಲ್ಲದೇ ಇದೀಗ ಸರ್ಕಾರದ ಮಟ್ಟದಲ್ಲೂ ತನಿಖೆ ನಡೆಯುತ್ತಿದೆ. ಈ ಮಧ್ಯೆ ನನ್ನ ಮಾನ ಹಾನಿಯಾಗುವಂತೆ ಅವರು ಸಂಭಾಷಣೆ ನಡೆಸಿದ್ದ ವೀಡಿಯೋ ವೈರಲ್ ಆಗಿದ್ದು, ರೋಹಿಣಿ ಸಿಂಧೂರಿ ವಿರುದ್ಧ ಸಿವಿಲ್ ಹಾಗೂ ಕ್ರಿಮಿನಲ್ ಮಾನನಷ್ಟ ಮೊಕದ್ದಮೆ ಹೂಡಿರುವುದಾಗಿ ತಿಳಿಸಿದರು.

ಇದೇ ವೇಳೆ ಸಾ.ರಾ.ಮಹೇಶ್ ಪರ ವಕೀಲ ಅರುಣ್ ಕುಮಾರ್ ಮಾತನಾಡಿ ಶಾಸಕ ಸಾ.ರಾ.ಮಹೇಶ್ ಭೂ ಅಕ್ರಮ ಎಸಗಿದ್ದಾರೆ. ಅವರು ಜೈಲಿಗೆ ಹೋಗುತ್ತಾರೆ ಎಂದು ರೋಹಿಣಿ ಸಿಂಧೂರಿ ಅವರು ಮಾತನಾಡಿರುವ ಆಡಿಯೋ ವೈರಲ್ ಆಗಿತ್ತು. ಈ ಹಿನ್ನೆಲೆಯಲ್ಲಿ ಅವರಿಗೆ ನೋಟಿಸ್ ಜಾರಿ ನೀಡಿದ್ದೆವು. ನಮ್ಮ ನೋಟಿಸ್‌ಗೆ ಉತ್ತರಿಸಿದ ಅವರು, ಆಡಿಯೋದಲ್ಲಿನ ಧ್ವನಿ ತಮ್ಮದೇ ಎಂದು ಒಪ್ಪಿಕೊಂಡಿದ್ದಾರೆ. ಅಲ್ಲದೇ ಖಾಸಗಿಯೊಂದಿಗೆ ತಾವು ಖಾಸಗಿಯಾಗಿ ಮಾತನಾಡಿರುವುದಾಗಿ ತಿಳಿಸಿದ್ದಾರೆ. ಐಎಎಸ್ ಅಧಿಕಾರಿಯಾಗಿರುವ ಅವರು, ಅಧಿಕಾರ ವಹಿಸಿಕೊಂಡಾಗ ಗೌಪ್ಯತೆಯನ್ನು ಕಾಪಾಡುವುದಾಗಿ ಮಾಡಿದ್ದ ಪ್ರಮಾಣವನ್ನು ಉಲ್ಲಂಘಿಸಿ ಆಡಳಿತಾತ್ಮಕ ವಿಚಾರವನ್ನು ಖಾಸಗಿ ವ್ಯಕ್ತಿಯೊಂದಿಗೆ ಮಾತನಾಡಿದ್ದಾರೆ. ಯಾವುದೇ ತನಿಖೆ ಇಲ್ಲದೇ ಸಾ.ರಾ.ಮಹೇಶ್ ಭೂ ಕಬಳಿಕೆ ಮಾಡಿದ್ದು, ಜೈಲಿಗೆ ಹೋಗುತ್ತಾರೆ ಎಂದು ಹೇಳಿರುವುದು ರಾಜಕೀಯ ಪ್ರೇರಿತವಾದ ಹೇಳಿಕೆಯಾಗಿದೆ ಇದರಿಂದಾಗಿ ಸಾ.ರಾ.ಮಹೇಶ್ ಅವರಿಗೆ ರಾಜಕೀಯವಾಗಿ ಹಾನಿ ಉಂಟಾಗಿದೆ. ಹೀಗಾಗಿ ಅವರ ವಿರುದ್ಧ ಮಾನ ನಷ್ಟ ಮೊಕದ್ದಮೆ ಹೂಡಿದ್ದು, ಅ.20ರೊಳಗೆ ವಿವರಣೆ ನೀಡುವಂತೆ ನ್ಯಾಯಾಲಯವು ರೋಹಿಣಿ ಸಿಂಧೂರಿ ಅವರಿಗೆ ನೋಟಿಸ್ ಜಾರಿ ಮಾಡಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮಾಜಿ ಮೇಯರ್ ಆರ್.ಲಿಂಗಪ್ಪ, ಮಾಜಿ ಉಪ ಮೇಯರ್ ಶೈಲೇಂದ್ರ, ಜೆಡಿಎಸ್ ನಗರಾಧ್ಯಕ್ಷ ಕೆ.ಟಿ.ಚಲುವೇಗೌಡ ಉಪಸ್ಥಿತರಿದ್ದರು.

52 ಸೆಕೆಂಡ್‌ಗಳಲ್ಲಿ 100 ಕಿ.ಮೀ. ವೇಗ: ದಾಖಲೆ ಮುರಿದ 'ವಂದೇ ಭಾರತ್' ರೈಲು

ನವದೆಹಲಿ, ಸೆ.11– ಸೆಮಿ ಹೈಸ್ಪೀಡ್ ರೈಲು 'ವಂದೆ ಭಾರತ್ ಎಕ್ಸ್‌ಪ್ರೆಸ್ 52 ಸೆಕೆಂಡ್‌ಗಳಲ್ಲಿ ಗಂಟೆಗೆ 100 ಕಿ.ಮೀ.ನಷ್ಟು ವೇಗ ಸಾಧಿಸುವ ಮೂಲಕ ಬುಲೆಟ್ ಟ್ರೇನ್‌ನ ದಾಖಲೆಯನ್ನು ಮುರಿದಿದೆ. ಅಹಮದಾಬಾದ್–ಮುಂಬೈ ನಡುವೆ ಶುಕ್ರವಾರ ಈ ರೈಲಿನ ಪರೀಕ್ಷಾರ್ಥ ಸಂಚಾರ ನಡೆಯಿತು. ಗಂಟೆಗೆ 130 ಕಿ.ಮೀ ವೇಗದೊಂದಿಗೆ ತಡೆರಹಿತವಾಗಿ ಚಲಿಸಿದ ರೈಲು, ಈ ನಗರಗಳ ನಡುವಿನ 491 ಕಿ.ಮೀ. ದೂರವನ್ನು 5 ಗಂಟೆ 14 ನಿಮಿಷಗಳಲ್ಲಿ ಕ್ರಮಿಸಿತು ಎಂದು ರೈಲ್ವೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ನಿಗದಿತ ವೇಳಾಪಟ್ಟಿ ಹಾಗೂ ನಿಲುಗಡೆಗಳೊಂದಿಗೆ ಸಂಚರಿಸಿದ ಸಂದರ್ಭದಲ್ಲಿ ಇಷ್ಟೇ ದೂರವನ್ನು ಈ ರೈಲು 6 ಗಂಟೆಗಿಂತ ಕಡಿಮೆ ಅವಧಿಯಲ್ಲಿ ಕ್ರಮಿಸಲಿದೆ ಎಂದೂ ತಿಳಿಸಿದ್ದಾರೆ.

ಕಾಂಗ್ರೆಸ್ ಸತ್ಯಾಗ್ರಹ, ಹೋರಾಟ, ಸಾವಿರಾರು ಜನರ ಬಲಿದಾನದಿಂದ ದೇಶಕ್ಕೆ ಸ್ವಾತಂತ್ರ್ಯ

ಜಿ.ಪಂ. ಮಾಜಿ ಅಧ್ಯಕ್ಷ ಮರೀಗೌಡ ಅಭಿಮತ



ಮೈಸೂರು, ಸೆ.11(ಜಿಎ)– ಸತ್ಯಾಗ್ರಹ, ಹೋರಾಟ, ಸಾವಿರಾರು ಜನರ ಬಲಿದಾನಗಳ ಮೂಲಕ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಪಕ್ಷ ಕಾಂಗ್ರೆಸ್ ಎಂದು ಜಿ.ಪಂ. ಮಾಜಿ ಅಧ್ಯಕ್ಷ ಕೆ. ಮರೀಗೌಡ ತಿಳಿಸಿದರು.

ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಸಿದ್ದಲಿಂಗಪುರ ಗ್ರಾ.ಪಂ. ಆಲನಹಳ್ಳಿ ಗ್ರಾ.ಪಂ. ಹಾಗೂ ನಗರದ 45ನೇ ವಾರ್ಡ್‌ಗಳಲ್ಲಿ ಭೂತ್‌ಮಟ್ಟದ ಪದಾಧಿಕಾರಿಗಳ ಆಯ್ಕೆ ಹಾಗೂ ಭಾರತ್ ಜೂಡೋ ಯಾತ್ರೆ ಹಿನ್ನೆಲೆಯಲ್ಲಿ ಭಾನುವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡುತ್ತಿದ್ದರು.

ಈ ದೇಶಕ್ಕೆ ಸ್ವಾತಂತ್ರ್ಯ ಬಂದಾಗ ದೇಶದ ಸಂಪತ್ತು ಬರಿದಾಗಿತ್ತು. ನಂತರ ನೆಹರು ಅವರು ಪ್ರಧಾನಮಂತ್ರಿಯಾಗಿ ಪಂಚವಾರ್ಷಿಕ ಯೋಜನೆಗಳ ಮೂಲಕ ಅಭಿವೃದ್ಧಿ ಪಡಿಸಿದರು. ಇಂದಿರಾಗಾಂಧಿಯವರು 11 ವರ್ಷ ಪ್ರಧಾನಿಯಾಗಿ 20 ಅಂಶಗಳ ಕಾರ್ಯಕ್ರಮಗಳ ಮೂಲಕ ಈ ದೇಶದ ಬಡತನವನ್ನು ಹೋಗಲಾಡಿಸಿದರು. ತದನಂತರದಲ್ಲಿ ಮನಮೋಹನ್‌ಸಿಂಗ್‌ರವರು ನರೇಗಾ ಯೋಜನೆಯನ್ನು ಜಾರಿಗೆ ತಂದು ಅಭಿವೃದ್ಧಿ ಕೆಲಸ ಮಾಡುವುದರ ಜೊತೆಗೆ ಗ್ರಾಮೀಣ ಜನರಿಗೆ ಉದ್ಯೋಗ ನೀಡಿದರು ಹಾಗೂ ಕಡ್ಡಾಯ ಶಿಕ್ಷಣ ಆಹಾರ ಭದ್ರತೆ ಕಾಯ್ದೆ ಜಾರಿಗೆ ತಂದರು ಎಂದು ತಿಳಿಸಿದರು.

ಡಾ|| ಬಿ.ಆರ್.ಅಂಬೇಡ್ಕರ್‌ರವರ ನೇತೃತ್ವದಲ್ಲಿ ಸಂವಿಧಾನ ರಚನೆ ಮಾಡಿ ಈ ದೇಶದ ಪ್ರತಿಯೊಬ್ಬ ಪ್ರಜೆಯು ಸಮವಾಗಿ ಬದುಕಲು ಅವಕಾಶ ಮಾಡಿಕೊಟ್ಟರು. ಕಳೆದ 8 ವರ್ಷದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಮೋದಿ ನೇತೃತ್ವದಲ್ಲಿ ಏನು ಮಾಡಿವೆ. ಸಂವಿಧಾನವನ್ನೆ ಬದಲಾವಣೆ ಮಾಡುತ್ತೇವೆ ಎನ್ನುತ್ತಾರೆ. ಕೇವಲ ಸುಳ್ಳು ಭರವಸೆಗಳನ್ನು ಹೇಳುತ್ತ ಯಾವುದೇ ಅಭಿವೃದ್ಧಿ ಕೆಲಸಗಳನ್ನು ಮಾಡದೆ ಭ್ರಷ್ಟಾಚಾರದಲ್ಲಿ ಮುಳುಗಿರುವ ಬಿ.ಜೆ.ಪಿ. ಸರ್ಕಾರವನ್ನು ಕಿತ್ತೊಗೆಯಲು ರಾಹುಲ್‌ಗಾಂಧಿ ನೇತೃತ್ವದಲ್ಲಿ ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಜನಜಾಗೃತಿ ಮೂಡಿಸಲು ಪಾದಯಾತ್ರೆ ಹಮ್ಮಿಕೊಳ್ಳಲಾಗಿದ್ದು, ಚಾಮುಂಡೇಶ್ವರಿ ಕ್ಷೇತ್ರಕ್ಕೆ ಬಂದ ಸಂದರ್ಭದಲ್ಲಿ ನೀವೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಪಾದಯಾತ್ರೆಯನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಗ್ರಾ.ಪಂ. ಅಧ್ಯಕ್ಷೆ ಶಕುಂತಲ ಸೋಮಣ್ಣ, ತಾ.ಪಂ. ಮಾಜಿ ಸದಸ್ಯೆ ಪುಟ್ಟಲಕ್ಷ್ಮಮ್ಮ, ಗ್ರಾ.ಪಂ. ಸದಸ್ಯರಾದ ಸರಿತಾ, ವಿನುತ ಲಕ್ಷ್ಮಿ, ಸುಮಿತ್ರ ನಾಗೇಶ್, ಮಹಾಲಕ್ಷ್ಮಿ, ರಘು, ದಶರಥ, ಗುರುಮೋಹನ್‌ಕುಮಾರ್, ಗಂಗಾಧರ್, ಪ್ರಕಾಶ್, ಜಯಮ್ಮ, ಮುಖಂಡರಾದ ಪಾಂಡುರಂಗ, ಗುರುಸ್ವಾಮಿ, ಸತೀಶ್‌ಕುಮಾರ್, ಆರಿಫ್‌ಪಾಷ, ಬೆಲವತ್ತ ರಾಮಚಂದ್ರ, ಸಿದ್ದರಾಜು, ನಾರಾಯಣ, ದಿವಾಕರ, ಜಬಿವುಲ್ಲಾ, ಜ್ಯೋತಿಲಕ್ಷ್ಮಿ, ಮುರುಡೇಶ್, ರಾಜಣ್ಣ, ಬಾಬು, ವಿಜೇಯೇಂದ್ರ, ಪ್ರವೀಣ್, ಅನಂತು, ರವಿ, ಪ್ರಸಾದ್ ಸೇರಿದಂತೆ ಕಾರ್ಯಕರ್ತರು ಭಾಗಿಯಾಗಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಶಿಕ್ಷಿತರು ಸಮಾಜದ ಅಭಿವೃದ್ಧಿಗೆ ಸಹಕರಿಸಬೇಕು

ಹೆಚ್ಚುವರಿ ಪ್ರಾದೇಶಿಕ ಆಯುಕ್ತ ಪಿ.ಶಿವರಾಜು



ಮೈಸೂರು, ಸೆ.11– ಶಿಕ್ಷಿತರು ಸಂಘಟಿತರಾಗಿ ಸಮಾಜದ ಅಭಿವೃದ್ಧಿಗೆ ಸಹಕಾರ ನೀಡಬೇಕು ಎಂದು ಎಂದು ಹೆಚ್ಚುವರಿ ಪ್ರಾದೇಶಿಕ ಆಯುಕ್ತ ಪಿ.ಶಿವರಾಜು ಹೇಳಿದರು.

ನಗರದ ಎಂಜಿ ರಸ್ತೆಯಲ್ಲಿರುವ ರಾಜೇಂದ್ರ ಭವನದಲ್ಲಿ ರಾಜ್ಯ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಮೈಸೂರು ಜಿಲ್ಲಾ ಘಟಕವು ಭಾನುವಾರ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ, ನಿವೃತ್ತ ನೌಕರರಿಗೆ ಸನ್ಮಾನ ಹಾಗೂ ಶ್ರೀ ಶಿವರಾತ್ರಿ ರಾಜೇಂದ್ರಜಯಂತಿ ಉದ್ಘಾಟಿಸಿ ಅವರು ಮಾತನಾಡಿದರು. ಶಿಕ್ಷಣದಿಂದಲೇ ಪ್ರತಿಯೊಬ್ಬರಿಗೂ ಅವಕಾಶದ ಬಾಗಿಲು ತೆರೆಯುವುದು. ಈ ನಿಟ್ಟಿನಲ್ಲಿ ಜ್ಞಾನ ಸಂಪಾದಿಸುವತ್ತ ಪ್ರತಿಯೊಬ್ಬ ವಿದ್ಯಾರ್ಥಿಯು ಮುಂದಾಗಬೇಕು. ಜ್ಞಾನ, ಅಧಿಕಾರ, ಸಾಮರ್ಥ್ಯ ಯಾರ ಬಳಿ ಇರುತ್ತದೋ ಅಂಥವರನ್ನು ಲೋಕ ಕೊಂಡಾಡುತ್ತದೆ. ಹೀಗಾಗಿ ಮಕ್ಕಳಿಗೆ ಶಿಕ್ಷಣವನ್ನು ನೀಡುವತ್ತ ಪೋಷಕರು ಮುಂದಾಗಬೇಕು ಎಂದು ಸಲಹೆ ನೀಡಿದರು.

ವೀರಶೈವ ಲಿಂಗಾಯತ ಸಮುದಾಯವು ಸಂಘಟನೆಯಲ್ಲಿ ಹಿಂದಿದೆ. ಸಮುದಾಯದ ಕಾರ್ಯಕ್ರಮಗಳಿಗೆ ಇದೇ ಸಮುದಾಯದ ಅಧಿಕಾರಿಗಳು ಆಹ್ವಾನಿಸಿದರೆ, ಬರಲು ಹಿಂಜರಿಯುತ್ತಾರೆ. ಸಮುದಾಯದಲ್ಲಿ ಗುರುತಿಸಿಕೊಂಡ ಮೇಲೆ ಕಾರ್ಯಕ್ರಮದಲ್ಲಿ ಭಾಗವಹಿಸಿದರೆ ತಪ್ಪೇನು? ಇಂಥ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಭಾಗವಹಿಸುವುದರಿಂದ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ತುಂಬಬಹುದು ಎಂದರು.

ಜೆಎಸ್‌ಎಸ್ ವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ನಿರಂಜನಮೂರ್ತಿ ಮಾತನಾಡಿ, ಕೇಂದ್ರ ಸರ್ಕಾರದ ಮೀಸಲಾತಿ ಪಟ್ಟಿಯಲ್ಲಿ ವೀರಶೈವ ಲಿಂಗಾಯತ ಸಮುದಾಯಕ್ಕೆ ಸ್ಥಾನ ನೀಡಬೇಕು. ಹಿಂದುಳಿದ ವರ್ಗದ ಪಟ್ಟಿಯಲ್ಲಿ ಸೇರಿಸುವುದರಿಂದ ಸಮುದಾಯದ ಸ್ಪರ್ಧಾರ್ಥಿಗಳಿಗೆ ಅನುಕೂಲವಾಗುತ್ತದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಕೇಂದ್ರ ಮೇಲೆ ಒತ್ತಡ ತರಬೇಕು ಎಂದು ಆಗ್ರಹಿಸಿದರು.

ಬಳಿಕ ಎಸ್ಸೆಸ್ಸೆಲ್ಸಿ, ಪಿಯು ಪರೀಕ್ಷೆಗಳಲ್ಲಿ ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ಮಂಡ್ಯ ಜಿಪಂ ಸಿಇಒ ಶಾಂತಾ ಹುಲ್ಮನಿ, ಪಡುವಲು ಶ್ರೀವಿರಕ್ತ ಮಠದ ಮಹದೇವ ಸ್ವಾಮೀಜಿ, ಪ್ರೊ.ಡಿ.ಎಸ್. ಸದಾಶಿವಮೂರ್ತಿ, ಸಂಘದ ಅಧ್ಯಕ್ಷ ಆಲೂರು ಬಸವರಾಜು, ಸೋಮಶೇಖರಯ್ಯ, ಎಂ.ಕೆ.ಸ್ವಾಮಿ, ಕೆ.ಕೆಂಪಣ್ಣ, ಪಿ.ಪ್ರಭುಸ್ವಾಮಿ, ಡಾ.ಪರಮೇಶ್ವರಪ್ಪ, ಮಾಲಂಗಿ ಸುರೇಶ್, ಕಲ್ಮಳ್ಳಿ ನಟರಾಜು ಮತ್ತಿತರರು ಉಪಸ್ಥಿತರಿದ್ದರು.

ಟಾಲಿವುಡ್‌ನ ರೆಬೆಲ್ ಸ್ಟಾರ್ ಕೃಷ್ಣಂರಾಜು ನಿಧನ

ಹೈದರಾಬಾದ್, ಸೆ.11– ಟಾಲಿವುಡ್‌ನ ರೆಬೆಲ್‌ಸ್ಟಾರ್ ಎಂದೇ ಖ್ಯಾತರಾಗಿದ್ದ ಹಿರಿಯ ನಟ ಕೃಷ್ಣಂರಾಜು ಅವರು ನಿಧನರಾಗಿದ್ದಾರೆ. ತೆಲುಗು ಸಿನಿಮಾ ರಂಗದ ರೆಬೆಲ್ ಸ್ಟಾರ್ ಎಂದೇ ಖ್ಯಾತರಾಗಿದ್ದ ಉಪ್ಪಲಪತ್ತಿ ವೆಂಕಟ ಕೃಷ್ಣಂರಾಜು(83) ಭಾನುವಾರ ನಸುಕಿನ 3.25ಕ್ಕೆ ತಮ್ಮ ನಿವಾಸದಲ್ಲಿ ನಿಧನರಾಗಿದ್ದು ಈ ಬಗ್ಗೆ ಕುಟುಂಬದ ಮೂಲಗಳು ಮಾಹಿತಿ ನೀಡಿವೆ.



ನಟ, ಪತ್ರಕರ್ತ, ಛಾಯಾಗ್ರಾಹಕರಾಗಿ ಕೃಷ್ಣಂರಾಜು ಜನಪ್ರಿಯರಾಗಿದ್ದರು. ಪತ್ನಿ, ಮೂವರು ಪುತ್ರಿಯರು, ಅಪಾರ ಸ್ನೇಹಿತರು ಹಾಗೂ ಬಂಧುಗಳನ್ನು ಅವರು ಅಗಲಿದ್ದಾರೆ. 'ಬಾಹುಬಲಿ' ಖ್ಯಾತಿಯ ಪ್ರಭಾಸ್ ಸಹ ಕೃಷ್ಣಂರಾಜು ಅವರ ಹತ್ತಿರದ ಸಂಬಂಧಿ. ಕೃಷ್ಣಂರಾಜು ಅವರು ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ, ಗ್ರಾಹಕ ಸೇವೆಗಳು, ಆಹಾರ ಮತ್ತು ಪಡಿತರ ವಿತರಣೆ, ರಕ್ಷಣಾ ಮತ್ತು ವಿದೇಶಾಂಗ ವ್ಯವಹಾರಗಳ ರಾಜ್ಯ ಖಾತೆಯ ಸಚಿವರಾಗಿ ಸೇವೆ ಸಲ್ಲಿಸಿದ್ದರು. ಅವರು ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಸಂಪುಟದಲ್ಲಿ ಕೇಂದ್ರ ಸಚಿವರಾಗಿ ಸೇವೆ ಸಲ್ಲಿಸಿದ ಮೊದಲ ನಟರಾಗಿದ್ದಾರೆ.

1966ರಲ್ಲಿ 'ಚಿಲಕ ಗೋರಿಂಕಾ' ಚಿತ್ರದಲ್ಲಿ ಮೊದಲ ಬಾರಿಗೆ ಬಣ್ಣಹಚ್ಚಿದ್ದರು. ನಂತರ ಹಲವು ಚಿತ್ರಗಳಲ್ಲಿ ಖಳನಾಯಕನಾಗಿ ಅಭಿನಯಿಸಿದರು. ನಂತರದ ದಿನಗಳಲ್ಲಿ ನಾಯಕನಟನಾಗಿ ಅಪಾರ ಜನಪ್ರಿಯ ಪಡೆದುಕೊಂಡರು. ಸುಮಾರು 183 ಚಿತ್ರಗಳಲ್ಲಿ ನಟಿಸಿದ್ದ ಕೃಷ್ಣಂರಾಜು ಅವರು ಕೊನೆಯ ಚಿತ್ರ 'ರಾಧೇ ಶ್ಯಾಮ್'. ಇವರ ಹತ್ತಿರದ ಸಂಬಂಧ ಪ್ರಭಾಸ್ ಈ ಚಿತ್ರದ ನಾಯಕರಾಗಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಶ್ರೀ ಗೌರಿಶಂಕರ ಟ್ರಾವೆಲ್ಸ್
8.10.22 (14/18 ದಿನ): ದೆಹಲಿ, ಹರಿದ್ವಾರ, ಗಂಗೋತ್ರಿ, ಯಮುನೋತ್ರಿ, ಬದರಿನಾಥ್, ಕೇದಾರ್‌ನಾಥ್ ಇತ್ಯಾದಿ.
30.10.22 (8/12 ದಿನ): ದೆಹಲಿ, ಆಗ್ರಾ, ಮಥುರ, ಅಲಹಾಬಾದ್, ಕಾಶಿ, ಗಯಾ, ಅಯೋಧ್ಯ ಇತ್ಯಾದಿ.
11.11.22 (4 ದಿನ) ಶಿರಡಿ, ಬಾಂಬೆ, ಎಲ್ಲೋರ, 3 ಜ್ಯೋತಿರ್ಲಿಂಗ ಇತ್ಯಾದಿ.
26.11.22 (7 ದಿನ) Isha, ಮಧುರ, ಕನ್ಯಾಕುಮಾರಿ, ರಾಮೇಶ್ವರ ಇತ್ಯಾದಿ. (ವಿಮಾನ, ಟ್ರೈನ್ ಮತ್ತು ಬಸ್ಸು) (ಊಟ, ವಸತಿ ಸೇರಿರುತ್ತದೆ)
9620002114

ಬೇಕಾಗಿದ್ದಾರೆ
ಮೈಸೂರಿನ ಹೆಸರಾಂತ ಡೆವಲಪರ್ ಕಂಪನಿಗೆ ಮಾರ್ಕೆಟಿಂಗ್ ಮ್ಯಾನೇಜರ್, ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಹಾಗೂ ಟೆಲಿಕಾಲರ್ಸ್ ಹಾಗೂ ಆಫೀಸ್ ಬಾಯ್ (7ನೇ ತರಗತಿ) ಬೇಕಾಗಿದ್ದಾರೆ. ಆಕರ್ಷಕ ವೇತನ, ಯಾವುದೇ ಡಿಗ್ರಿ
7483442527 / 8088546307

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಷೀನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas
9379699229

ತಕ್ಷಣ ಬೇಕಾಗಿದ್ದಾರೆ
1) ಹೌಸ್‌ಕೀಪಿಂಗ್ – ಪುರುಷರು (Male)
2) ಸೆಕ್ಯೂರಿಟಿ ಗಾರ್ಡ್ – SSLC Pass/Fail
3) ಸೆಕ್ಯೂರಿಟಿ ಸೂಪರ್‌ವೈಸರ್ – PUC / Degree.
4) Utility Worker.
ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:
9739166772, 9739199355
ಸ್ಥಳ: ಹೆಬ್ಬಾಳು, ಹಿನಕಲ್, ಬೆಳವಾಡಿ

ಬೇಕಾಗಿದ್ದಾರೆ
ಟೆಲಿಕಾಲಿಂಗ್ ಮಾಡಲು ಅನುಭವವುಳ್ಳ ಹುಡುಗಿಯರು ಹಾಗೂ ಮಹಿಳೆಯರು ಬೇಕಾಗಿದ್ದಾರೆ. Salary: 8K + Incentives.
8904131762

ಬೇಕಾಗಿದ್ದಾರೆ
ಟೆಲಿಕಾಲಿಂಗ್ ಮಾಡಲು ಬೇಕಾಗಿದ್ದಾರೆ. (ಹುಡುಗ / ಹುಡುಗಿಯರು). ದಿನಸಿ ಅಂಗಡಿಗೆ ಹುಡುಗರು ಬೇಕಾಗಿದ್ದಾರೆ.
7829668666, 9740125009

MOBILE ರಿಪೇರಿ ಟ್ರೈನಿಂಗ್
18 ವರ್ಷದಿಂದ Mobile, Electrical, Electronics ಮತ್ತು Computer Hardware ರಿಪೇರಿ ಹೇಳಿಕೊಡುತ್ತಿರುವ ಏಕೈಕ ಸಂಸ್ಥೆಯಲ್ಲಿ ಶೀಘ್ರದಲ್ಲಿ ಹೊಸ ಬ್ಯಾಚ್ ಪ್ರಾರಂಭ. ಯಾವುದೇ ವಿದ್ಯಾರ್ಹತೆ ಹಾಗೂ ವಯೋಮಿತಿಯ ಅಗತ್ಯವಿಲ್ಲ. PG ವ್ಯವಸ್ಥೆಯು ಇರುತ್ತದೆ. ಕೂಡಲೇ ಸಂಪರ್ಕಿಸಿ:
SMM Institute,
ಶ್ರೀ ವೀರಭದ್ರೇಶ್ವರಸ್ವಾಮಿ ದೇವಸ್ಥಾನದ ಎದುರು, ದಳವಾಯಿ ಶಾಲೆಯ ರಸ್ತೆ, ಕೆ.ಆರ್.ಮೊಹಲ್ಲಾ ಮೈಸೂರು.
Mob.: 9986926101

ತಕ್ಷಣ ಬೇಕಾಗಿದ್ದಾರೆ
ಹೂಟಗಳ್ಳಿ, ಹೆಬ್ಬಾಳ್ ಮತ್ತು ಬನ್ನಿಮಂಟಪ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮತ್ತು ಮೇಲ್ಪಟ್ಟು, ಸಂಬಳ: 15,500/- W/o 8hrs, ಊಟ, ತಿಂಡಿ ಸೌಲಭ್ಯವಿರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:
9620777819
9880727819

S M GOLD COMPANY
ಗಿರವಿ ಚಿನ್ನಾಭರಣ ಖರೀದಿ
1 ಗ್ರಾಂ ಚಿನ್ನಕ್ಕೆ 5600
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಂಡು ಉಳಿದ ಹಣ ತಕ್ಷಣಕೊಡುತ್ತೇವೆ. ಕೂಡಲೇ ಸಂಪರ್ಕಿಸಿ – (T&C)
9964522225

ಶ್ರೀ ಬಾಲಾಜಿ ಟೂರಿಸ್ಟ್
8-10-22: 7 ದಿನ ಊಟಿ, ಪಳನಿ, ಮಧುರೈ, ಕಂಚಿ, ಕನ್ಯಾಕುಮಾರಿ, ರಾಮೇಶ್ವರ, ಶ್ರೀರಂಗಂ, ತಂಜಾವೂರು, ಚಿದಂಬರಂ, 9 ನವಗ್ರಹ, ಗೋಲ್ಡನ್ ಟೆಂಪಲ್, ಇತ್ಯಾದಿ.
12-11-2022: 14 ದಿನ ಮಹಾಕಾಳೇಶ್ವರ, ಓಂಕಾರ್, ನಾಗೇಶ್ವರ್, ಸೋಮನಾಥ್, ದ್ವಾರಕಾ, ಪಟೇಲರ ಸ್ಟ್ಯಾಚು, ಭಾವನಗರ, ಅಂಬಾಜಿ, ಪುಷ್ಕರ್, ಜೈಪುರ್, ಇತ್ಯಾದಿ
12-12-2022: 14 ದಿನ ಪಶುಪತಿನಾಥ್, ಮುಕ್ತಿನಾಥ್, ಕಾಠ್ಮಂಡು, ಪಾಪೋಕಾಮನ, ಪೊಕ್ರಾ, ವೈದ್ಯನಾಥ್, ಕಾಶಿ, ಗಯಾ ಇತ್ಯಾದಿ. ವಿಮಾನ/ರೈಲು/ಬಸ್/ಊಟ/ವಸತಿ ಸೇರಿ
9945770486

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ:
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು.

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರೆ ನಾಲ್ವರ ದೈವ ಚೌಡಮ್ಮ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಃಸಿದ್ಧ. ಖಾಯಂ ವಿಳಾಸ: ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

20X30 30X40 30X50 ಮುಡಾ ಅನುಮೋದಿತ ಸೈಟ್ ಮಾರಾಟಕ್ಕೆ
ಪೊಲೀಸ್ ಲೇಔಟ್ ಮತ್ತು ಲಲಿತಾದ್ರಿಪುರ ನಡುವೆ ರಿಂಗ್ ರೋಡ್ ಒಳಗೆ
ತಕ್ಷಣದ ನೋಂದಣಿ ಮತ್ತು ಕೂಡಲೆ ಮನೆ ಕಟ್ಟಬಹುದು ಬ್ಯಾಂಕ್ ಸಾಲ ಲಭ್ಯವಿದೆ
98800 65122 / 77956 09173

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

Sudarshan Saur SOLAR WATER HEATER
ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ರವರೆಗೆ, ವಿದ್ಯಾರ್ಹತೆ:– ಕನಿಷ್ಠ ಓದು / ಬರಹ ಗೊತ್ತಿರಬೇಕು. ವೇತನ:– 12,818 + ESI & PF ಮತ್ತು ಉಚಿತ ಊಟದ ವ್ಯವಸ್ಥೆ, ಅಗತ್ಯ ದಾಖಲಾತಿಗಳು: ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಫೋಟೋ–06, ಟಿ.ಸಿ. ಅಥವಾ ಮಾರ್ಕ್ಸ್ ಕಾರ್ಡ್ ಕಡ್ಡಾಯ.
8453408502 / 9108100117

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

LOANS
MUDA / CORPORATION / 11B
HOUSING LOAN
MORTGAGE LOAN
TAKE OVER LOAN
FOR BUSINESS / SALARIED
PERSONAL LOAN
SECONDS CAR LOAN
☎-9620349543

ಬೋಳು ತಲೆಯ ಸಮಸ್ಯೆಯೇ?



SMART HAIR FIXING
574, 9th Cross, Anikethana Road, Kuvempunagar, Mysuru
MYSURU 9611028523 BANGALORE 9343142258

ಬೇಕಾಗಿದ್ದಾರೆ
ಮೆಡಿಕಲ್ ಶಾಪ್‌ನಲ್ಲಿ ಹಾಗೂ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು, ಹುಡುಗಿಯರು, ಮಹಿಳೆಯರು ಬೇಕಾಗಿದ್ದಾರೆ. ಸ್ಥಳ ಅಗ್ರಹಾರ ಮತ್ತು ಕೆಜಿ ಕೊಪ್ಪಲು, ಮೈಸೂರು. ಸಮಯ ಬೆಳಿಗ್ಗೆ 9.30 ರಿಂದ ರಾತ್ರಿ 9 ರವರೆಗೆ. ಸ್ಥಳೀಯರಿಗೆ ಮಾತ್ರ. ಸಂಪರ್ಕಿಸಿ:
9986311444, 9986322444

ತಕ್ಷಣ ಬೇಕಾಗಿದ್ದಾರೆ
HOME BASSED
E-CODE GAS SAFE

EDUCATION	WORK TIME	SALARY
SSLC,PUC,DIP Any Degree	4 HOURS Age Limit	8000/- 18 to 35

ಗ್ಯಾಸ್ ಸೇಫ್ಟಿ ಬಗ್ಗೆ ಮನೆಯಲ್ಲಿ ಗ್ರಾಹಕರಿಗೆ ಮಾಹಿತಿ ನೀಡುವ ಕೆಲಸ android ಸ್ಮಾರ್ಟ್ ಫೋನ್ ಹೊಂದಿರಬೇಕು
9986621226

ಮಾಂತ್ರಿಕ ಕೊಳ್ಳೇಗಾಲದ ಜ್ಯೋತಿಷ್ಯರು ಪಂ. ಎಸ್. ಕುಮಾರಸ್ವಾಮಿ
MOB: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋರ ಶಕ್ತಿಯಿಂದ ಸ್ತ್ರೀ, ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಬಾಧೆ, ಆರೋಗ್ಯ, ಭೂಮಿ, ಕೋರ್ಟು, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಪರಿಹಾರ ಶತಃಸಿದ್ಧ. ಕರೆಮಾಡಿ ಬನ್ನಿ.
ಖಾಯಂ ವಿಳಾಸ ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು.

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ, 15,200 – 86,000.
9740733021 / 9535028750

ಬೇಕಾಗಿದ್ದಾರೆ
1) ಹೌಸ್‌ಕೀಪಿಂಗ್ (ಮಹಿಳೆಯರು ಮಾತ್ರ).
2) ಫೀಲ್ಡ್ ಆಫೀಸ್ (ಅನುಭವ ಹಾಗೂ ದ್ವಿಚಕ್ರ ವಾಹನ ಹೊಂದಿರಬೇಕು).
3) ಬೆಂಗಳೂರಿಗೆ: ಪೆಟ್ರೋಲ್ ಬಂಕ್ ಆಪರೇಟರ್.
(ಉಚಿತ ವಸತಿ, ಊಟ ಹಾಗೂ ಉತ್ತಮ ವೇತನ). ಸಂಪರ್ಕಿಸಿ:
9242406261, 9686422400

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ: 9731839596
ಇವರು ಕುಟ್ಟಿ ಚೇತನ್ ಮಾರ್ತಾಂಡ ದೇವಿ ಭಗವತಿ ಕಾಟೇರಿ ಪ್ರಯೋಗದಿಂದ, ಸ್ತ್ರೀ ಪುರುಷ ಪ್ರೇಮ, ವಿವಾಹ, ಸಂತಾನ, ದಾಂಪತ್ಯ ಸಮಸ್ಯೆ, ಶತ್ರು ಬಾಧೆ, ಪ್ರೇತ ಬಾಧೆ, ಹಣದ ಸಮಸ್ಯೆ, ತನ್ನವರೇ ತನಗೆ ಶತ್ರು, ಕೌಟುಂಬಿಕ ಕಲಹ ನಿಮ್ಮ ಯಾವುದೇ ಸಮಸ್ಯೆಗಳಿಗೆ ಮಲಯಾಳಿ ಮಾಂತ್ರಿಕ ಶಕ್ತಿಯಿಂದ ತಕ್ಷಣ ಪರಿಹಾರ ಶತಃಸಿದ್ಧ.
ಖಾಯಂ ಮನೆ ವಿಳಾಸ: ಮನೆ ನಂ 68, ಸತ್ಯ ಮಾರ್ಗ, ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ.ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

HOUSE FOR LEASE
FOR 6 LAKHS
308, 4th Main, Vasanthanagar, Behind Vidyavikas College, Mysore-570 002.
Mob: 8310427773

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ /ಯುವತಿಯರು, ಮಹಿಳೆಯರು, ವಿಧವೆ / ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತಾ ಸಂಸ್ಥೆ) ಯಾವುದೇ ರೀತಿಯ ಶುಲ್ಕ ಇರುವುದಿಲ್ಲ (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ).
ಸಂಬಳ 12000ದಿಂದ 18000 (ESI, PF, ಸೌಲಭ್ಯ ಇರುತ್ತದೆ)
8050699742, 7892480649

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಬೇಕಾಗಿದ್ದಾರೆ
ಮೈಸೂರಿನ ಹಿನಕಲ್ ಮತ್ತು ಬೋಗಾದಿ 2ನೇ ಹಂತ ಹಾಗೂ JK Tyres, KRS ರಸ್ತೆ ಹತ್ತಿರ, ಇಲ್ಲಿಗೆ ಹಗಲಿನ 12 ಗಂಟೆ ಕೆಲಸ ನಿರ್ವಹಿಸಲು ಪುರುಷ, ವಿದ್ಯಾವಂತ 55 ರಿಂದ 60 ವರ್ಷ ವಯಸ್ಸಿನ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವೇತನ ತಿಂಗಳಿಗೆ 9,000. ಸಂಪರ್ಕಿಸಿ:
Mob: 9731976148

ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ
1) ನಾರ್ತ್ & ಚೈನೀಸ್ (Professional Cook).
2) ದೋಸೆ ಮಾಸ್ಟರ್
3) ಕಾಫೀ & ಜ್ಯೂಸ್ Cook.
ವಿವೇಕಾನಂದನಗರ, ಮೈಸೂರು ವಿವೇಕಾನಂದ ವೃತ್ತದ ಹತ್ತಿರ.
Mob: 9845567554

LOAN / ಸಾಲ
ವೈಯಕ್ತಿಕ, ವ್ಯಾಪಾರ, ಮನೆಕಟ್ಟಲು, ಮನೆಕೊಳ್ಳಲು, ನಿವೇಶನ, ಅಡಮಾನ, ವಾಹನ, ಕೈಗಾರಿಕಾ, ಯಂತ್ರೋಪಕರಣ, ಹಸುಸಾಕಾಣಿಕೆ, ಬಾರ್, ಪೆಟ್ರೋಲ್‌ಬಂಕ್, ವಿಮೆ, ಇನ್ನಿತರೆ ಸಾಲಸೌಲಭ್ಯ
Email: royalfinsis@gmail.com
8884633339
8884977977

PART TIME WORK
ಮನೆಯಲ್ಲಿಯೇ ಕುಳಿತು ಬಿಡುವಿನ ವೇಳೆಯಲ್ಲಿ
ಕೆಲಸ / JOB
ವಾರದ ಸಂಬಳ : 3000/– ರಿಂದ 5000/– ಮೇಲ್ಪಟ್ಟು
ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ:
9108418233
9743217566

ಪರ್ಮನೆಂಟ್ ಉದ್ಯೋಗ
SSLC (Pass), PUC, ITI, JOC, Diploma, any Degree ಆದಂತಹ 226 ಅಭ್ಯರ್ಥಿಗಳು A.W. Groups of Company ಗೆ ಬೇಕಾಗಿದ್ದಾರೆ. ವಯೋಮಿತಿ: 18 ರಿಂದ 35 ವರ್ಷ. ತಿಂಗಳಿಗೆ 28000 – 36000. (ಉಚಿತ ವಸತಿ + Incentives + Promotions). ಕೂಡಲೇ ಕರೆಮಾಡಿ: ಮೇಘಾಶ್ರೀ
9844219943, 9900163228

Navam Mens Destination
ಬಟ್ಟೆ ಅಂಗಡಿಗೆ ಕೆಲಸಕ್ಕೆ ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಪ್ರಾಮುಖ್ಯತೆ. ಆಕರ್ಷಕ ಸಂಬಳ ನೀಡಲಾಗುವುದು.
ಸ್ಥಳ: ಮೈಸೂರು, ಬನ್ನೂರು, ಟಿ.ನರಸೀಪುರ.
Mob: 7676685839

ಜಮೀನು ಮಾರಾಟಕ್ಕಿದೆ
ನಂಜನಗೂಡು ತಾಲ್ಲೂಕು ಕೂಡ್ಲಾಪುರ ಗ್ರಾಮದಲ್ಲಿ ಮುಖ್ಯರಸ್ತೆಗೆ ಹೊಂದಿಕೊಂಡಿರುವ 1 ³/₄ (ಒಂದು ಮುಕ್ಕಾಲು ಎಕರೆ) ಕೆಂಪು ಮಣ್ಣಿನ ಜಮೀನು ಮಾರಾಟಕ್ಕಿದೆ.
ಆಸಕ್ತರು ಸಂಪರ್ಕಿಸಿ: ಕುಮಾರ್
9902314234

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
7676844160
6361056646

ಏಷಿಯನ್ ಟೂರ್ಸ್ & ಟ್ರಾವೆಲ್ಸ್
7-11-2022 – 11 ದಿನಗಳು – ಕಾಶಿ–ಅಯೋಧ್ಯೆ–ನೈಮಿಶಾರಣ್ಯ–ವೈದ್ಯನಾಥ ಜ್ಯೋತಿರ್ಲಿಂಗ.
10-11-2022– 16 ದಿನಗಳು – ಮಲ್ಲಿಆಕ್ಸೆಲ್ ಬಸ್ ಮತ್ತು ವಿಮಾನದ ಮೂಲಕ ಅಷ್ಟ ಜ್ಯೋತಿರ್ಲಿಂಗ ದರ್ಶನ– ಭೀಮಾಶಂಕರ್–ಶಿರಡಿ–ನಾಸಿಕ್–ತ್ರಯಂಬಕೇಶ್ವರ–ಓಂಕಾರೇಶ್ವರ–ಮಹಾಕಾಳೇಶ್ವರ–ಉಜ್ಜಯಿನಿ–ಮೌಂಟ್ ಅಬು–ದ್ವಾರಕಾ–ಸೋಮನಾಥ–ನಿಷ್ಕಲಂಕ ಮಹಾದೇವ. ಸಂಪರ್ಕಿಸಿ: ರಾಮಕೃಷ್ಣ–
9342287551 / 9482239855

ಇಂದೇ ಸಂಪರ್ಕಿಸಿ
ಹೆಬ್ಬಾಳ್, ಹೂಟಗಳ್ಳಿ, ಮೇಟಗಳ್ಳಿ, ಸರಸ್ವತಿಪುರಂ, ನಂಜನಗೂಡು, ಎನ್.ಆರ್.ಮೊಹಲ್ಲಾ ಮುಂತಾದ ಏರಿಯಾಗಳಲ್ಲಿನ ಕಂಪನಿಗಳಿಗೆ, Office ಗಳಿಗೆ, Showroom ಗಳಿಗೆ, ಕೆಲಸ ಮಾಡಲು ಯುವಕ / ಯುವತಿಯರು ಬೇಕಾಗಿದ್ದಾರೆ. Any Qualification (ESI+PF+OT) ಯೊಂದಿಗೆ ಸಂಬಳ 14,000–36000/– ಸಂಪರ್ಕಿಸಿ.
9663704915
9008403466

ತಕ್ಷಣ ಬೇಕಾಗಿದ್ದಾರೆ
ಮೈಸೂರು, ನಂಜನಗೂಡು, ಕಡಕೊಳ, ಹೆಬ್ಬಾಳ್, ಹೂಟಗಳ್ಳಿ, ಮೇಟಗಳ್ಳಿ ಮುಂತಾದ ಸ್ಥಳದಲ್ಲಿರುವ ಪ್ರತಿಷ್ಠಿತ ಕಂಪನಿ, ಆಫೀಸ್ ಮತ್ತು ಶೋರೂಂಗಳಿಗೆ 7th, SSLC, PUC, ITI, Diploma, Any Degree Pass / Fail ಆದವರಿಗೆ Packing, Helper, Checking, Maintenance, Billing, Front Office, Telephone attender ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ 14,000 - 39,000 (ESI+PF+OT) ಸೇರಿ. ಸಂಪರ್ಕಿಸಿ:
7676939277 / 9353753194

ವಿವಾಹ ಯೋಗ
ಮೊಬೈಲ್ ಆ್ಯಪ್ (APP) ಮೂಲಕ ನಿಮ್ಮ ಜೀವನ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳಿ. ಎಲ್ಲಾ ಜಾತಿಯ ವಧು–ವರರು ಸಂಪರ್ಕಿಸಬಹುದು.
FREE REGISTRATION
0821-3501969

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.
7795560970

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ ಡೇ / ನೈಟ್ ಶಿಫ್ಟ್ ಕೆಲಸಕ್ಕಾಗಿ ಹುಡುಗ / ಹುಡುಗಿಯರು ಬೇಕಾದ್ದಾರೆ.
ಸಂಬಳ: 12,000/–
8892258814

FOR RENT
600Sq.Ft of Ground Floor 1000 Sq.ft of 1st Floor, East of Vishwamanava Double Road, Kuvempunagar, Mysore. Suitable for Polyclinic, Coaching Center etc.
8105751169 / 9620607138

WANTED Telecallers
To work in gold Company, Kuvempunagar, Mysore. Experience / Fresher Only Female. Attractive Salary / Incentive. Qualification: SSLC / PUC Any Degree. Contact:
8861732326 / 9742277945

ಜಾಯಿಂಟ್ ವೆಂಚರ್
4800 Sq.Ft. Residencial ನಿವೇಶನಕ್ಕೆ ಅಪಾರ್ಟ್‌ಮೆಂಟ್ or ಮನೆಗಳನ್ನು ಕಟ್ಟಲಿಕ್ಕೆ ಜಾಯಿಂಟ್ ವೆಂಚರ್ or ಬಂಡವಾಳ ಹಾಕುವವರು ಬೇಕಾಗಿದ್ದಾರೆ. ನೇರ ಸಂಪರ್ಕಿಸಿ.
9449408551

WALK IN INTERVIEW REQUIRED FOR HOTEL
Receptionist, Office Assistant, Room Boys, House Keeping Ladies, Chinese Cook.
Old Ramanashri Hotel Complex, Harding Circle, Opp. to Woodlands.
9620672223

ಬೇಕಾಗಿದ್ದಾರೆ
ಮೈಸೂರಿನಲ್ಲಿ ಇರುವ ತೋಟಕ್ಕೆ ಮತ್ತು ಮನೆ ಕೆಲಸಕ್ಕೆ ಕೆಲಸಗಾರರು ಬೇಕಾಗಿದ್ದಾರೆ. ಉತ್ತಮ ವೇತನ, ಮತ್ತು ವಸತಿ ಸೌಲಭ್ಯವಿದೆ, ದಂಪತಿಗಳಿಗೆ ಆದ್ಯತೆ ಕೊಡಲಾಗುವುದು. ಆಸಕ್ತರು ಸಂಪರ್ಕಿಸಿ
9845118555

ಮೈಸೂರು ಮ್ಯಾರೇಜ್ ಬ್ಯೂರೋ
ವಧು ವರರನ್ನು ಹುಡುಕಲು ಸಹಾಯ ಬೇಕೇ? ನಮಗೆ ಕರೆ ಮಾಡಿ. ಫೋಟೋ & ಬಯೋಡೆಟಾ ವಾಟ್ಸಾಫ್ ಮಾಡಿರಿ. ನೋಂದಣಿ ಉಚಿತ!
ಡಾ. ಗುರೂಜಿ
6361740552
Receptionist ಬೇಕಾಗಿದ್ದಾರೆ

ಬೇಕಾಗಿದ್ದಾರೆ
ಕುವೆಂಪುನಗರದ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವ ಇರುವ ಆಸಕ್ತ ಯುವತಿಯರು ಬೇಕಾಗಿದ್ದಾರೆ.
7019033758

ಬೇಕಾಗಿದ್ದಾರೆ
ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಯ ಸರ್ವೆ ಸಮೀಕ್ಷೆ ಕಾರ್ಯನಿರ್ವಹಿಸಲು ಆಸಕ್ತಿಯುಳ್ಳ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ತುರ್ತಾಗಿ ಬೇಕಾಗಿದ್ದಾರೆ. ಸಂಪರ್ಕಿಸಿ.:
9663117528
9742876761

WANTED SITES & OLD HOUSES
@ Kuvempunagar, S.S.Puram, Vijayanagar, Yelwala & Mysore Surroundings. Quick Regin.
9342125252

WANTED
Wanted an educated good - hearted person as a friend to a 24 years old youth with anxiety issue to engage him positively for 2-3 hours per day, thrice in a week, Suitably rewarded.
Contact: ananthkmr939@gmail.com
8088586087

ಬೇಕಾಗಿದ್ದಾರೆ
ಗಂಡು ಮಕ್ಕಳ ಮೇಲ್ವಿಚಾರಕರು ಹಾಗೂ ಕನ್ನಡ ಶಿಕ್ಷಕರು. ಉಚಿತ ವಸತಿ + ಊಟ + 15000/– ವೇತನ ನೀಡಲಾಗುವುದು. ದಿವ್ಯ ದೀಪ ಚಾರಿಟಬಲ್ ಟ್ರಸ್ಟ್, ಕೆಂಚಲಗೂಡು, ಮಾನಂದವಾಡಿ ರಸ್ತೆ, ಮೈಸೂರು – 08. ಸಂಪರ್ಕಿಸಿ:
9341369901
9538499901

ವರಬೇಕಾಗಿದೆ
38 ವರ್ಷದ (ಈಡಿಗರು) ಶುದ್ಧ ಸಸ್ಯಹಾರಿ ವಿಚ್ಛೇದಿತ ವಧುವಿಗೆ ಕರ್ನಾಟಕ ರಾಜ್ಯ ಸರ್ಕಾರದ ಉದ್ಯೋಗದಲ್ಲಿರುವ ವರ ಮಾತ್ರ ಹಾಗೂ ಸ್ವಂತ ಮನೆ, ತೋಟ, ಗದ್ದೆ, ಹೊಲ ಇರುವಂತಹ ಶುದ್ಧ ಸಸ್ಯಹಾರಿ 45 ವರ್ಷದೊಳಗಿನ ಮಕ್ಕಳಿಲ್ಲದ ವಿಧುರ ವಿಚ್ಛೇದಿತ ಅಥವಾ ಮೊದಲನೇ ಸಂಬಂಧದ ಜಾತಿಯ ಅಭ್ಯಂತರವಿಲ್ಲದ ವರ ಬೇಕಾಗಿದೆ. ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಅಥವಾ ಎಲ್.ಐ.ಸಿ ಅಥವಾ ಕರ್ನಾಟಕ ರಾಜ್ಯ ಸರ್ಕಾರದ ಕೆಲಸದಲ್ಲಿರುವ ವರಗಳು ಮಾತ್ರ ನೇರವಾಗಿ ಸಂಪರ್ಕಿಸಿ. (ರಿಜಿಸ್ಟರ್ ಮದುವೆ ಕಡ್ಡಾಯ) ಬ್ರಾಹ್ಮಣರಿಗೆ ಮೊದಲ ಆದ್ಯತೆ.
8296171519

ಮೈಸೂರು ನಗರ ರಸ್ತೆ ಸಾರಿಗೆ ಸಂಸ್ಥೆ 2 ಮತ್ತು 3ನೇ ದರ್ಜೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ (ನಿ)
ನಂ.1516/17, 1ನೇ ಮಹಡಿ, 8ನೇ ಕ್ರಾಸ್, ತ್ಯಾಗರಾಜ ರಸ್ತೆ, ವಿ.ವಿ.ಮಾರ್ಕೆಟ್ ಎದುರು, ಮೈಸೂರು – 570004. ಮೇಲ್ಕಂಡ ನಮ್ಮ ಗೃಹ ನಿರ್ಮಾಣ ಸಹಕಾರ ಸಂಘದ 2021–22 ರ ವಾರ್ಷಿಕ ಮಹಾಸಭೆಯನ್ನು ದಿನಾಂಕ: 25.09.22 ರ ಭಾನುವಾರ ಬೆಳಿಗ್ಗೆ 10.30ಕ್ಕೆ ಸಂಘದ ಕಚೇರಿಯಲ್ಲಿ ನಡೆಸಲಾಗುತ್ತದೆ. ಆಹ್ವಾನ ಪತ್ರಿಕೆ ತಲುಪದಿರುವವರು ಇದನ್ನೇ ಆಹ್ವಾನ ಪತ್ರಿಕೆ ಎಂದು ತಿಳಿದು ಆಗಮಿಸಿ ಕಾರ್ಯಕ್ರಮ ಯಶಸ್ವಿ ಗೊಳಿಸಬೇಕೆಂದು ಪ್ರಾರ್ಥನೆ.
ದಿ. 10.09.2022 ಸಹಿ/– ವೆಂಕಟೇಶ್, ಕಾರ್ಯದರ್ಶಿ

HOUSE FOR SALE
Ground & 1st & 2nd Floor. EWS 15x30 (South face), H Block, R.K.Nagar, Mysore. Contact:
9008867878

ಸೈಟು ಮಾರಾಟಕ್ಕಿದೆ
ಸುವರ್ಣನಗರ 30x40, West Face
ಬೋಗಾದಿ ರಸ್ತೆ, ಮೈಸೂರು.
8792831405
9980275884

ಬೇಕಾಗಿದ್ದಾರೆ
ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಹಾಗೂ ಆಫೀಸ್ ಕೆಲಸಕ್ಕೆ ಯುವಕ – ಯುವತಿಯರು ಬೇಕಾಗಿದ್ದಾರೆ
Salary: 13,000-21,000+ESI, PF
ವಿದ್ಯಾರ್ಹತೆ: 10th, PUC, ITI, Diploma and Any Degree ಇಂದೇ ಸಂಪರ್ಕಿಸಿ:
9035734821

N N FASHION COURSE
ಕ್ಲಾಸ್ ಫಾರ್ ಹ್ಯಾಂಡ್ ವರ್ಕ್ 4000/- (Fashion Designing)
ಬ್ಯೂಟಿಶಿಯನ್ ಕೋರ್ಸ್ 4000/-
ಕ್ರೋಶ ವರ್ಕ್ 1500/-
ಸಾರೀ ಟುಚ್ 800/-
ಮೆಹಂದಿ ಡಿಸೈನ್ 2000/-
One day offer with Materials
9632600712

WANTED
Service Technician
ITI holder/ 2nd PUC for HOME APPLIANCES
Authorized Service Center & Kent RO Water Purifier Service Center. Contact:
9900237315, 9845963421

ಛತ್ರ ಖಾಲಿ ಇದೆ
ದಿನಾಂಕ ನವೆಂಬರ್ 5 ಹಾಗೂ 6ನೇ ತಾರೀಖು ಛತ್ರ ಖಾಲಿ ಇರುತ್ತದೆ. "ನೇರಂಬಳ್ಳಿ ಸಾವಿತ್ರಮ್ಮ, ಸುಬ್ಬರಾವ್ ಕಲ್ಯಾಣ ಮಂಟಪ" ಲಕ್ಷ್ಮೀಪುರಂ, ಮೈಸೂರು. ಸಂಪರ್ಕಿಸಿ:
9448917957
9480512518

ಕೂಡಲೇ ನೇಮಕಾತಿ
* ಕನ್ನಡ, ತಮಿಳ್, ಇಂಗ್ಲೀಷ್ Telecallers Salary upto 18,000 (Degree) with Exp.
* Voice / Non Voice Executives
* Data Entry ಆಪರೇಟರ್ಸ್ ಬೇಕಾಗಿದ್ದಾರೆ. Salary 9,000 to 15,000
No Marketing, Targets Sales Work from Home (Female) Part Time also Laptop ಕಂಪನಿಯಿಂದ ಕೊಡಲಾಗುವುದು.
9483434327 / 9900629071

HOUSE FOR RENT
Single king size bedroom 2nd floor with balcony at Gokulam, Mysore.
Contact:
Mob: 9900237315

ಮೈಸೂರು ಮಿತ್ರ 43 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ತ್ರಿವೇಣಿ ಸಂಗಮದಲ್ಲಿ ಅ.13ರಿಂದ ಮಹಾ ಕುಂಭಮೇಳ



ಕೆ.ಆರ್.ಪೇಟೆ, ಸೆ.11– ತಾಲೂಕಿನ ಪುರ, ಸಂಗಾಪುರ, ಅಂಬಿಗರಹಳ್ಳಿ ಗ್ರಾಮಗಳ ಬಳಿಯ ಕಾವೇರಿ, ಹೇಮಾವತಿ, ಲಕ್ಷ್ಮಣ ತೀರ್ಥ ನದಿಗಳ ಸಂಗಮ ಕ್ಷೇತ್ರ ತ್ರಿವೇಣಿ ಸಂಗಮದಲ್ಲಿ ಅ.13, 14, 15 ಮತ್ತು 16 ರಂದು 4 ದಿನಗಳ ಕಾಲ 2ನೇ ಮಹಾ ಕುಂಭ ಮೇಳ ನಡೆಯಲಿದೆ ಎಂದು ರೇಷ್ಮೆ, ಯುವ ಜನ ಸಬಲೀಕರಣ ಮತ್ತು ಕ್ರೀಡಾ ಸಚಿವ ಡಾ.ಕೆ.ಸಿ.ನಾರಾಯಣಗೌಡ ಹೇಳಿದರು.

ತಾಲೂಕಿನ ತ್ರಿವೇಣಿ ಸಂಗಮ ಕ್ಷೇತ್ರದಲ್ಲಿರುವ ಪ್ರವಾಸೋದ್ಯಮ ಇಲಾಖೆಯ ಯಾತ್ರಿ ನಿವಾಸದಲ್ಲಿ ಮಹಾ ಕುಂಭಮೇಳ ಆಚರಣೆ ಹಿನ್ನಲೆ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ ಸಾಧು–ಸಂತರು ಸೇರಿ ಸುಮಾರು 3 ಲಕ್ಷ ಮಂದಿ ಆಗಮಿಸು ನಿರೀಕ್ಷೆ ಇದೆ. ಹಾಗಾಗಿ, ಕುಂಭಮೇಳವನ್ನು ವಿಜೃಂಭಣೆಯಿಂದ ಆಚರಿಸಲು ಅಧಿಕಾರಿಗಳು ಸಹಕರಿಸಬೇಕು ಎಂದು ತಿಳಿಸಿದರು.

ವಿಶೇಷ ಅತಿಥಿಗಳಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಸ್ವಾಮೀಜಿ, ಸುತ್ತೂರುಶ್ರೀ, ಚುಂಚಶ್ರೀ, ಬೇಬಿ ಶ್ರೀಗಳು ಸೇರಿದಂತೆ ವಿವಿಧ ಮಠಾಧೀಶರು ಹಾಗೂ ಗಣ್ಯರು ಆಗಮಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಯಾವುದೇ ರೀತಿಯ ಕುಂದು– ಕೊರತೆಗಳಾಗದಂತೆ ಅಗತ್ಯ ಮೂಲ ಸೌಲಭ್ಯ ಒದಗಿಸಿಕೊಡಲು ಜಿಲ್ಲಾಡಳಿತ ಸೂಕ್ತ ಕ್ರಮ ವಹಿಸಬೇಕು ಎಂದು ಸಲಹೆ ನೀಡಿದರು.

ಶ್ರೀಕ್ಷೇತ್ರದಲ್ಲಿರುವ ಬಾಲ ಮಲೆಮಹದೇಶ್ವರ ದೇವಸ್ಥಾನ, ಶ್ರೀಸಂಗಮೇಶ್ವರ ದೇವಾಲಯ ಅಭಿವೃದ್ಧಿ, ತ್ರಿವೇಣಿ ಸಂಗಮಕ್ಕೆ ಹೋಗುವ ಎಲ್ಲಾ ರಸ್ತೆಗಳ ಅಭಿವೃದ್ಧಿ, ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ, ತಂಗುದಾಣಗಳ ನಿರ್ಮಾಣ ಸೇರಿದಂತೆ ಅಗತ್ಯ ಸೌಕರ್ಯಗಳನ್ನು ಶೀಘ್ರದಲ್ಲೇ ಪೂರ್ಣ ಮಾಡಿ ಕುಂಭಮೇಳ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಲು ಕ್ರಮವಹಿಸಬೇಕು ಎಂದು ಸೂಚಿಸಿದರು.

ಧಾರ್ಮಿಕ ಕಾರ್ಯಕ್ರಮಗಳು ಹಿಂದಿನ ಪರಂಪರೆಯಂತೆ ನಡೆಯಬೇಕು. ಲೇಸರ್ ಶೋ, ವಿವಿಧ ಶೈಲಿಯ ದೀಪಾಲಂಕಾರ, ವಸ್ತು ಪ್ರದರ್ಶನ, ಸಾಂಸ್ಕೃತಿಕ ಕಾರ್ಯಕ್ರಮ ಬಹಳ ಅಚ್ಚುಕಟ್ಟಾಗಿ ನಡೆಯಬೇಕು ಎಂದರು.

ಪೂರ್ವಭಾವಿ ಸಭೆಯ ನಂತರ ಸಚಿವರು, ಅಧಿಕಾರಿಗಳೊಂದಿಗೆ ಕುಂಭಮೇಳ ನಡೆಯುವ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಸಭೆಯಲ್ಲಿ ಜಿಲ್ಲಾಧಿಕಾರಿ ಎಸ್.ಅಶ್ವತಿ, ಎಡಿಸಿ ಡಾ.ಹೆಚ್.ಎಲ್.ನಾಗರಾಜು, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ.ಶ್ರೀನಿವಾಸ್, ಜಿಲ್ಲಾ ಹಾಪ್‌ಕಾಮ್ಸ್ ಅಧ್ಯಕ್ಷ ಕೆ.ಜಿ.ತಮ್ಮಣ್ಣ, ಜಿಪಂ ಸಿಇಓ ಶಾಂತಾ ಎಲ್.ಹುಲ್ಮನಿ, ಉಪಕಾರ್ಯದರ್ಶಿ ಸಿದ್ಧಲಕ್ಷ್ಮಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ವೇಣುಗೋಪಾಲ್, ಉಪವಿಭಾಗಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ, ಸಚಿವ ನಾರಾಯಣಗೌಡರ ಆಪ್ತ ಕಾರ್ಯದರ್ಶಿ ಹೆಚ್.ಜಿ.ಪ್ರಭಾಕರ್, ತಹಸೀಲ್ದಾರ್ ಎಂ.ವಿ.ರೂಪಾ, ಕುಂಭಮೇಳದ ಸಂಚಾಲಕ ಅಂಚಿ ಸಣ್ಣಸ್ವಾಮೀಗೌಡ, ಆಳ್ವಾಸ್ ಸಂಸ್ಥೆಯ ಮೋಹನ್ ಆಳ್ವ, ಸೋಮನಹಳ್ಳಿ ಗ್ರಾಪಂ ಅಧ್ಯಕ್ಷ ಕಟ್ಟೆಕ್ಯಾತನಹಳ್ಳಿ ಪಾಪಣ್ಣ, ಸದಸ್ಯ ಪಿ.ಎಸ್.ವಸಂತಕುಮಾರ್, ಗಣೇಶ್ ಸೇರಿದಂತೆ ವಿವಿಧ ಗಣ್ಯರು ಇದ್ದರು.

ಶ್ರೀ ನಾರಾಯಣ ಗುರು ಜಯಂತಿ ಆಚರಣೆ



ಮದ್ದೂರು, ಸೆ.11– ತಾಲೂಕಿನ ಬೆಸಗರಹಳ್ಳಿ ಗ್ರಾಮದ ನೆಲದಸಿರಿ ಗ್ರಾಮಾಭಿವೃದ್ಧಿ ಸೇವಾ ಟ್ರಸ್ಟ್ ಕಚೇರಿ ಆವರಣದಲ್ಲಿ ಸಾಮಾಜಿಕ ಚಳವಳಿಯ ಹರಿಕಾರ ಶ್ರೀನಾರಾಯಣ ಗುರು ಅವರ ಜಯಂತಿ ಆಚರಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ಪ್ರಗತಿಪರ ಸಂಘಟನೆಗಳ ಒಕ್ಕೂಟದ ಸಂಚಾಲಕ ಸೋ.ಶಿ.ಪ್ರಕಾಶ ಮಾತನಾಡಿ, 'ಒಂದೇ ಜಾತಿ, ಒಂದೇ ಮತ ಹಾಗೂ ಒಂದೇ ದೇವರು' ಎಂಬ ಸತ್ಯ ವಾಕ್ಯವನ್ನು ಪ್ರತಿಪಾದಿಸಿದ ನಾರಾಯಣ ಗುರು ಅವರು ಸಮಾಜದ ತಾರತಮ್ಯಗಳನ್ನು ಕಡಿಮೆ ಮಾಡಲು ತಮ್ಮ ಇಡೀ ಜೀವನವನ್ನು ಮುಡಿಪಾಗಿಟ್ಟಿದ್ದರು ಎಂದರು.

ವಿಶ್ವಜ್ಞಾನಿ ಗ್ರಾಮಾಭಿವೃದ್ಧಿ ಸೇವಾ ಟ್ರಸ್ಟ್‌ನ ಗೌರವಾಧ್ಯಕ್ಷ ಕೆ.ಟಿ.ಶಿವಕುಮಾರ್ ಮಾತನಾಡಿ, ಜಾತೀಯತೆ, ಅಸ್ಪ್ರಶ್ಯತೆ ಎಂಬ ವಿಷ ವೃಕ್ಷವು ಇಡೀ ಶೂದ್ರ ಸಮೂಹವನ್ನು ಉಸಿರುಗಟ್ಟಿ ಸಾಯಿಸುತ್ತಿರುವ ವ್ಯವಸ್ಥೆಯಲ್ಲಿ 'ಈಳವ' ಎಂಬ ಅಸ್ಪ್ರಶ್ಯ ಜಾತಿಯಲ್ಲಿ ನಾರಾಯಣ ಗುರು ಎಂಬ ಪವಿತ್ರಾತ್ಮನ ಜನ್ಮವಾಯಿತು ಎಂದರು. ಕಾರ್ಯಕ್ರಮದಲ್ಲಿ ಬೆಸಗರಹಳ್ಳಿ ಗ್ರಾಪಂ ಅಧ್ಯಕ್ಷೆ ಬಿ.ಸೌಮ್ಯಾ, ಸದಸ್ಯರಾದ ವೆಂಕಟೇಶ, ಚನ್ನಕೇಶವ, ಮುಖಂಡರಾದ ಪ್ರಭುಲಿಂಗ, ರಮೇಶ್, ನಂದೀಶ್, ಕರ್ನಾಟಕ ಜಾನಪದ ಪರಿಷತ್ ತಾಲೂಕು ಘಟಕದ ಅಧ್ಯಕ್ಷ ಚಾಮನಹಳ್ಳಿ ಮಂಜು, ನಿಲುವಾಗಿಲು ಗೋವಿಂದು, ನಂಜೇಶ್, ಎಲ್‌ಐಸಿ ಪ್ರತಿನಿಧಿಗಳ ಸಂಘಟನೆಯ ತಾಲೂಕು ಘಟಕದ ಅಧ್ಯಕ್ಷ ಧೀರ್‌ಕುಮಾರ್, ನೆಲದಸಿರಿ ಗ್ರಾಮಾಭಿವೃದ್ಧಿ ಸೇವಾ ಟ್ರಸ್ಟ್‌ನ ಅಧ್ಯಕ್ಷ ಬಿ.ಎ.ಮಧುಕುಮಾರ, ಪ್ರಧಾನ ಕಾರ್ಯದರ್ಶಿ ರಾಮಯ್ಯ, ನಿರ್ದೇಶಕ ಎನ್.ಚಂದ್ರಕಾಂತ್ ಇದ್ದರು.



ಶ್ರೀರಂಗಪಟ್ಟಣದಲ್ಲಿ ಜಿಲ್ಲಾ ಶಿಕ್ಷಣ ಇಲಾಖೆಯಿಂದ ಆಯೋಜಿಸಿದ್ದ ಹೋಬಳಿ ಮಟ್ಟದ ಪ್ರೌಢಶಾಲಾ ವಿಭಾಗದ ಥ್ರೋಬಾಲ್ ಕ್ರೀಡಾಕೂಟದಲ್ಲಿ ಗಂಜಾಂನ ಸೇಂಟ್ ಮೇರಿಸ್ ಹೈಸ್ಕೂಲ್ ವಿದ್ಯಾರ್ಥಿನಿಯರು ಪ್ರಥಮ ಸ್ಥಾನ ಪಡೆದರು.

ನಾವು ಪರಿಸರ ರಕ್ಷಿಸಿದರೆ, ಅದು ನಮ್ಮನ್ನು ರಕ್ಷಿಸುತ್ತದೆ



ಚಿನಕುರಳಿ, ಸೆ.11– ಪರಿಸರವನ್ನು ನಾವು ರಕ್ಷಣೆ ಮಾಡಿದರೆ ಪರಿಸರ ನಮ್ಮನ್ನು ರಕ್ಷಣೆ ಮಾಡಲಿದೆ ಎಂದು ಚಂದ್ರವನ ಆಶ್ರಮದ ಪೀಠಾಧ್ಯಕ್ಷ ಡಾ.ಶ್ರೀತ್ರಿನೇತ್ರಮಹಂತ ಶಿವಯೋಗಿ ಸ್ವಾಮೀಜಿ ಹೇಳಿದರು.

ಬೇಬಿ ಗ್ರಾಮದ ಡಿಎಂಎಸ್ ಶಾಲೆಯ ಆವರಣದಲ್ಲಿ ರೋಟರಿ ಚಂದ್ರವನ 3190 ವತಿಯಿಂದ ನಡೆದ ಗಿಡ ನೆಡುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಭಾರತಿಯ ಸಂಸ್ಕೃತಿಯಲ್ಲಿ ಪ್ರಕೃತಿ ಪ್ರೇಮ, ಭಕ್ತಿ, ಶ್ರದ್ಧೆಯಿಂದ ಕಾಣುತ್ತೇವೆ. ಆದರೆ, ಇತ್ತೀಚಿನ ದಿನಗಳಲ್ಲಿ ಪರಿಸರ ನಾಶ ಮಾಡುವ ಕೆಲಸಕ್ಕೆ ಮುಂದಾಗಿದ್ದೇವೆ. ಇದರಿಂದಾಗಿ ಉತ್ತಮ ವಾತಾವರಣ ಕಾಣುತ್ತಿಲ್ಲ. ಜತೆಗೆ ಹಾಗಾಗೆಯೇ ಪ್ರಾಕೃತಿಕ ವಿಕೋಪಗಳು ಸಂಭವಿಸುತ್ತಿವೆ ಎಂದು ವಿಷಾಧ ವ್ಯಕ್ತಪಡಿಸಿದರು.

ಪ್ರಕೃತಿಯನ್ನು ನಾವು ಸರಿಯಾಗಿ ನೋಡಿಕೊಂಡರೆ ಪ್ರಕೃತಿ ನಮ್ಮನ್ನು ನೋಡಿಕೊಳ್ಳುತ್ತಿದೆ. ಹಾಗಾಗಿ ಪ್ರತಿಯೊಬ್ಬರು ಪ್ರಕೃತಿಯನ್ನು ಪ್ರೀತಿಸುವುದನ್ನು ಕಲಿಯಬೇಕು. ಕಾಡನ್ನು ಉಳಿಸಿ, ಬೆಳೆಸುವ ಕೆಲಸವನ್ನು ಮಾಡಬೇಕು. ಕನಿಷ್ಠ ವರ್ಷಕ್ಕೊಮ್ಮೆಯಾದರು ಪ್ರತಿಯೊಬ್ಬರು ಒಂದೊಂದು ಗಿಡಗಳನ್ನು ನೆಡಬೇಕು. ಹುಟ್ಟುಹಬ್ಬ, ಇತರೆ ಸಂಭ್ರಮದ ಆಚರಣೆಗಳನ್ನು ಗಿಡನೆಡುವುದರ ಮೂಲಕ ಆಚರಣೆ ಮಾಡಿಕೊಂಡರೆ ಪರಿಸರ ಸಂರಕ್ಷಣೆಯೂ ಆದಂತಾಗಲಿದೆ. ಪ್ರತಿಯೊಬ್ಬರು ಒಂದೊಂದು ಗಿಡವನ್ನು ದಾನ ಮಾಡಬೇಕು. ಜತೆಗೆ ಮನೆಯಂಗಳದಲ್ಲಿ ಒಂದೊಂದು ಗಿಡವನ್ನು ನೆಟ್ಟಿ ಬೆಳೆಸುವ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಮುಂದಿನ ದಿನಗಳಲ್ಲಿ ರೋಟರಿ ಸಂಸ್ಥೆ ಚಂದ್ರವನ ಹಾಗೂ ಚಂದ್ರವನ ಮಠದ ಸಹಯೋಗದಲ್ಲಿ ಕಾವೇರಿ ತೀರದ ತಡದಲ್ಲಿ ಗಿಡ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು ಎಂದರು.

ಈ ವೇಳೆ ರೋಟರಿ ಸಂಸ್ಥೆ ಚಂದ್ರವನ ಅಧ್ಯಕ್ಷ ಟಿ.ಪಿ.ಶಿವಕುಮಾರ್, ಕಾರ್ಯದರ್ಶಿ ಸವಿನಾ ಆದಿತ್ಯ, ಸಹ ಕಾರ್ಯದರ್ಶಿ ಬಿ.ಎಸ್.ಪ್ರಕಾಶ್, ಸದಸ್ಯರಾದ ಗುಲಾಬಿ, ಸಿ.ಎಸ್.ಹೀರೇಮಠ್, ಚಂದ್ರಪ್ಪ, ಚಂದ್ರಣ್ಣ, ಗ್ರಾಪಂ ಅಧ್ಯಕ್ಷ ಚಂದ್ರಶೇಖರಯ್ಯ, ಸದಸ್ಯರಾದ ಸಿದ್ದರಾಜು, ಮಂಗಳಮ್ಮ, ಕುಮಾರಸ್ವಾಮಿ ಗ್ರಾಮಸ್ಥರಾದ ಬಾಬು, ಅಶೋಕ್, ಚಂದ್ರಶೇಖರ್ ಸೇರಿದಂತೆ ಹಲವರು ಹಾಜರಿದ್ದರು.

ಯುಪಿಎಸ್, ಬ್ಯಾಂಡ್‌ಸೆಟ್ ಖರೀದಿಸಲು ಧನಸಹಾಯ



ನಾಗಮಂಗಲ, ಸೆ11– ತಾಲೂಕಿನ ಬಿಂಡಿಗನವಿಲೆ ಹೋಬಳಿ ಆಲೀಸಂದ್ರ ಸರ್ಕಾರಿ ಪ್ರೌಢಶಾಲೆಗೆ ಯುಪಿಎಸ್ ಹಾಗೂ ಬ್ಯಾಂಡ್ ಸೆಟ್ ಖರೀದಿಸಲು 30 ಸಾವಿರ ರೂ.ಗಳನ್ನು ಸಮಾಜ ಸೇವಕ ಫೈಟರ್ ರವಿ ನೀಡಿದರು.

ಬಳಿಕ ಮಾತನಾಡಿದ ಅವರು, ವಿದ್ಯಾರ್ಥಿಗಳ ಅನುಕೂಲಕ್ಕಾಗಿ ದಿನ ಪತ್ರಿಕೆಯಲ್ಲಿ ಬರುವ ಶಿಕ್ಷಣ ಮಾರ್ಗದರ್ಶಿಯನ್ನು ಉಚಿತವಾಗಿ ತಾಲೂಕಿನ ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆಗಳಿಗೆ ವಿತರಿಸಲಾಗುತ್ತಿದೆ. ತಾಲೂಕಿನ ಗಡಿ ಗ್ರಾಮಗಳಲ್ಲಿರುವ ಶಾಲೆಗಳಿಗೂ ಶುದ್ಧ ಕುಡಿಯುವ ನೀರಿನ ಘಟಕ ನೀಡಿದ್ದೇನೆ. ಶುದ್ಧ ನೀರಿನ ಘಟಕ ಇಲ್ಲದೆ ಇರುವ ಗ್ರಾಮಗಳಲ್ಲಿ ಸುಮಾರು 5 ಲಕ್ಷ ವೆಚ್ಚದಲ್ಲಿ ಘಟಕವನ್ನು ಸ್ಥಾಪಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಟ್ಟಿದ್ದೇನೆ ಎಂದರು.

ನಂತರ ಕದುಬಹಳ್ಳಿ ಸರ್ಕಾರಿ ಪ್ರೌಢಶಾಲೆಗೆ ಫೈಟರ್ ರವಿ ಅವರು ಭೇಟಿ ನೀಡಿ ಪ್ರೊಜೆಕ್ಟರ್, ಬ್ಯಾಂಡ್‌ಸೆಟ್ ಹಾಗೂ ಯುಪಿಎಸ್ ಕೊಳ್ಳಲು 35 ಸಾವಿರ ರೂ. ನೀಡಿದರು. ತದನಂತರ ದೇವಲಾಪುರ ಹೋಬಳಿ ಜಿ.ಬೊಮ್ಮನಹಳ್ಳಿ ಗ್ರಾಮದ ಪ್ರೌಢಶಾಲೆಗೆ ಭೇಟಿ ನೀಡಿ ಶುದ್ಧ ನೀರಿನ ಘಟಕವನ್ನು ಉದ್ಘಾಟಿಸಿದರು.

ಈ ವೇಳೆ ಸರ್ಕಾರಿ ನೌಕರ ಸಂಘದ ಅಧ್ಯಕ್ಷ ಸಿ.ಜೆ.ಕುಮಾರ್, ಪತ್ರಕರ್ತ ಪಿ.ಜೆ.ಜಯರಾಮ, ಶಿಕ್ಷಕರಾದ ಲಿಂಗರಾಜು, ಮಂಜೇಗೌಡ ಹಾಗೂ ಶಿಕ್ಷಕರು ಇದ್ದರು.

ಉದ್ಯೋಗ ಮೇಳ ಮುಂದೂಡಿಕೆ

ಮಂಡ್ಯ, ಸೆ.11– ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಮಂಡ್ಯ ಆರ್‌ಟಿಓ ಆಫೀಸ್ ಎದುರು ರಾಷ್ಟ್ರೀಯ ವೃತ್ತಿ ಸೇವಾ ಯೋಜನೆ (ಎನ್‌ಸಿಎಸ್)ಯಡಿ ಸೆ. 14 ರಂದು ನಡೆಯಬೇಕಿದ್ದ ಉದ್ಯೋಗ ಮೇಳವನ್ನು ಕಾರಣಾಂತರಗಳಿಂದ ಮುಂದೂಡಲಾಗಿದ್ದು, ಅಕ್ಟೋಬರ್–2022ರ ಮಾಹೆಯಲ್ಲಿ ಆಯೋಜಿಸಲಾಗುವುದು ಎಂದು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಉದ್ಯೋಗಾಧಿಕಾರಿ ಎನ್.ಆರ್.ವೇಣುಗೋಪಾಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೊಮ್ಮರಾಯಿಗೌಡ ನಿಧನ



ಕೆ.ಆರ್.ಪೇಟೆ ಸೆ11– ತಾಲೂಕಿನ ವಳಗೆರೆ ಮೆಣಸ ಗ್ರಾಮದ ಹಿರಿಯ ಮುಖಂಡರು ಹಾಗೂ ವಿಎಸ್‌ಎಸ್‌ಎನ್ ಬ್ಯಾಂಕ್ ಮಾಜಿ ಅಧ್ಯಕ್ಷ ಬೊಮ್ಮರಾಯಿಗೌಡ(64) ಶುಕ್ರವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ ವಳಗೆರೆಮೆಣಸ ಗ್ರಾಮದಲ್ಲಿ ನಡೆಯಿತು.

ಬೀದಿನಾಯಿ ದಾಳಿ: ಮೂರು ಮೇಕೆ ಸಾವು



ಭಾರತೀನಗರ, ಸೆ.11– ಬೀದಿನಾಯಿಗಳ ದಾಳಿಯಿಂದ ಮೂರು ಮೇಕೆ ಸಾವನ್ನಪ್ಪಿರುವ ಘಟನೆ ಸಮೀಪದ ದೊಡ್ಡರಸಿನಕೆರೆ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಶಂಕರ್ ಎಂಬುವವರಿಗೆ ಸೇರಿದ ಮೇಕೆಗಳು ಸಾವನ್ನಪ್ಪಿವೆ. ಇವರು ತಮ್ಮ ಮನೆಯ ಮುಂದೆ ಮೇಕೆಗಳನ್ನು ಕಟ್ಟಿಹಾಕಿದ್ದರು. ಈ ವೇಳೆ ಏಕಾಏಕಿ ಮೇಕೆಗಳ ಮೇಲೆ ಬೀದಿ ನಾಯಿಗಳ ಹಿಂಡು ದಾಳಿ ನಡೆಸಿದ ಪರಿಣಾಮ ತೀವ್ರ ಗಾಯಗೊಂಡು ಮೇಕೆಗಳು ಸಾವನ್ನಪ್ಪಿವೆ. ಘಟನೆಯಿಂದ ಸಾವಿರಾರು ನಷ್ಟವಾಗಿದ್ದು, ಮೇಕೆಗಳ ಮಾಲೀಕರಿಗೆ ಸೂಕ್ತ ಪರಿಹಾರ ನೀಡಬೇಕು ಹಾಗೂ ಗ್ರಾಮದಲ್ಲಿ ಬೀದಿ ನಾಯಿಗಳ ಹಾವಳಿ ತಡೆಯಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಧಮ್ಮು–ತಾಕತ್ತು ಯಾರಿಗಿದೆ ಎಂದು 2023ರಲ್ಲಿ ರಾಜ್ಯದ ಜನ ತೀರ್ಮಾನ ಮಾಡುತ್ತಾರೆ

ವಿಪಕ್ಷ ನಾಯಕ ಸಿದ್ದರಾಮಯ್ಯ




ಬೆಂಗಳೂರು, ಸೆ.11– ನಿನ್ನೆ ದೊಡ್ಡಬಳ್ಳಾಪುರದಲ್ಲಿ ಬಿಜೆಪಿ ಸಮಾವೇಶದಲ್ಲಿ ಸಿಎಂ ಬೊಮ್ಮಾಯಿಯವರು ಬಹಳ ವೀರಾವೇಶದಿಂದ ಭಾಷಣ ಮಾಡಿದ್ದಾರೆ. ಅವರು ಭಾಷಣ ಶುರುಮಾಡಿದಾಗಲೇ ಖುರ್ಚಿಗಳೆಲ್ಲ ಖಾಲಿಯಾಗಿದ್ದವು, ಜನರೆಲ್ಲ ಎದ್ದುಹೋಗಿಬಿಟ್ಟಿದ್ದರು. ಅಲ್ಲೇ ಇವರ ತಾಕತ್ತು, ಧಮ್ಮು ತೋರಿಸಲಿಕ್ಕಾಗಲಿಲ್ಲ, ಇನ್ನು ಚುನಾವಣೆಯಲ್ಲಿ ತೋರಿಸುತ್ತಾರೆಯೇ ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ಟೀಕಿಸಿದ್ದಾರೆ.

ಬೆಂಗಳೂರಿನಲ್ಲಿ ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯಾರಿಗೆ ತಾಕತ್ತು, ಧಮ್ಮು ಇದೆ ಎಂದು ಮುಂದಿನ ವರ್ಷ ರಾಜ್ಯದ ಜನ ತೀರ್ಮಾನ ಮಾಡುತ್ತಾರೆ. ಇವರ ಧಮ್ಮು ಚುನಾವಣೆಯಲ್ಲಿ ಗೊತ್ತಾಗುತ್ತದೆ. ನನ್ನ ಅಧಿಕಾರವಧಿಯ ಹಗರಣಗಳನ್ನು ಬಯಲಿಗೆಳೆಯುತ್ತೇವೆ ಎಂದು ಧಮ್ಕಿ ಹಾಕುವ ಬದಲು ಧಮ್ ಇದ್ದರೆ ಮೊದಲು ಆ ಕೆಲಸ ಮಾಡಿ. ನಾನು ಅದನ್ನು ಎದುರಿಸಲು ಸದಾ ಸಿದ್ಧ. ಈ ಬ್ಲಾಕ್ ಮೇಲ್ ತಂತ್ರಗಳನ್ನೆಲ್ಲ ನಿಮ್ಮವರ ಮೇಲೆ ಬಳಸಿಕೊಳ್ಳಿ. ನಮ್ಮ ಸರ್ಕಾರದ ಹಗರಣಗಳನ್ನು ಬಯಲಿಗೆಳೆಯುವ ಮೊದಲು ನಿಮ್ಮ ನಾಯಕರುಗಳ ಮೇಲೆ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುವ ಸಾಲು ಸಾಲು ಹಗರಣಗಳನ್ನು ಇತ್ಯರ್ಥ ಮಾಡಿಕೊಂಡು ಬನ್ನಿ, ನೀವು ಬೀಸುವ ಕತ್ತಿ ನಿಮ್ಮ ಕುತ್ತಿಗೆಯನ್ನೇ ಕೊಯ್ಯದಿರಲಿ ಎಂದಿದ್ದಾರೆ.

ನಿನ್ನೆ ಸಮಾವೇಶದಲ್ಲಿ ನಾಯಕರೆಲ್ಲರೂ ಬಹಳ ಆವೇಶಭರಿತರಾಗಿ ಮಾತನಾಡಿದ್ದಾರೆ, 2023ರಲ್ಲಿ ಕಾಂಗ್ರೆಸ್ ನ್ನು ಅಧಿಕಾರಕ್ಕೆ ಬರಲು ಬಿಡಲ್ಲ ಎಂದು ಯಡಿಯೂರಪ್ಪನವರು ಹೇಳುತ್ತಾರೆ, ಅವರ ಜೇಬಿನಿಂದಲೇ ವೋಟು ಕೊಡುವುದು, ಜನ ತೀರ್ಮಾನ ಮಾಡುವುದು. ಜನರ ಮುಂದೆ ಹೋಗೋಣ, ರಾಜ್ಯದಲ್ಲಿ ಕಾಂಗ್ರೆಸ್ ಪರ ಅಲೆ ಇದೆ, ಜನರು ಬಿಜೆಪಿಯ ಭ್ರಷ್ಟಾಚಾರ, ದುರಾಡಳಿತದಿಂದ ಬೇಸತ್ತು ಹೋಗಿದ್ದಾರೆ. ಜನ ಇಂದು ನೆಮ್ಮದಿಯಾಗಿಲ್ಲ. ಬೇಜವಾಬ್ದಾರಿಯ ಬಿಜೆಪಿ ಸರ್ಕಾರವನ್ನು ಜನರು ಮುಂದಿನ ಚುನಾವಣೆಯಲ್ಲಿ ಸೋಲಿಸಲಿದ್ದಾರೆ ಎಂದರು.

ಸಿದ್ದರಾಮಯ್ಯ, ರಾಜಕೀಯವಾಗಿ ಮೂಲೆಗುಂಪಾಗುವ ದಿನ ದೂರವಿಲ್ಲ

ಕಟೀಲ್ ತಿರುಗೇಟು



ಬೆಂಗಳೂರು, ಸೆ.11– ಸಿದ್ದರಾಮಯ್ಯ, ರಾಜಕೀಯವಾಗಿ ಮೂಲೆಗುಂಪಾಗುವ ದಿನ ದೂರ ಉಳಿದಿಲ್ಲ ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ಅವರಿಗೆ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ತಿರುಗೇಟು ನೀಡಿದ್ದಾರೆ.

ಜನಸ್ಪಂದನ ಸಮಾವೇಶ ಕುರಿತಂತೆ ಸಿದ್ದರಾಮಯ್ಯ ಅವರು ಟೀಕೆ ವ್ಯಕ್ತಪಡಿಸಿದ ಹಿನ್ನೆಲೆ ನಳಿನ್ ಕುಮಾರ್ ಕಟೀಲ್ ಅವರು ಮಾಧ್ಯಮ ಪ್ರಕಟಣೆ ಹೊರಡಿಸಿದ್ದಾರೆ. ಸಿದ್ದರಾಮಯ್ಯ, ರಾಜಕೀಯವಾಗಿ ಮೂಲೆಗುಂಪಾಗುವ ದಿನ ದೂರವಿಲ್ಲ. ಮೋದಿಯವರ ಮಂಗಳೂರು ಕಾರ್ಯಕ್ರಮ ಮತ್ತು ದೊಡ್ಡಬಳ್ಳಾಪುರದ ಜನಸ್ಪಂದನಕ್ಕೆ ಸ್ವಯಂಪ್ರೇರಿತ ಜನಸಾಗರ ಬಂದಿತ್ತು. ಇದನ್ನು ಗಮನಿಸಿ ಸಿದ್ದರಾಮಯ್ಯರು ಸ್ಥಿಮಿತ ಕಳೆದುಕೊಂಡಂತಿದೆ. ಅದಕ್ಕಾಗಿಯೇ ಅವರು ತಮ್ಮ ಸುಳ್ಳಿನ ಸರಮಾಲೆ, ವ್ಯರ್ಥ ಆರೋಪಗಳ ಮೂಲಕ ನಾಟಕ ಮುಂದುವರಿಸಿದ್ದಾರೆ. ರಾಜ್ಯದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತರಲು ಕನ್ನಡನಾಡಿನ ಜನತೆ ನಿರ್ಧರಿಸಿದ್ದಾರೆ. ಅಧಿಕಾರ ಗಳಿಸುವ ಕಾಂಗ್ರೆಸ್ಸಿಗರ ಕನಸು ಕೇವಲ ಹಗಲುಗನಸಾಗಿ ಉಳಿಯಲಿದೆ. ಸಿದ್ದರಾಮಯ್ಯರನ್ನು ಜನರು ಸೋಲಿಸಿ ರಾಜಕೀಯವಾಗಿ ಮೂಲೆ ಗುಂಪಾಗುವಂತೆ ಮಾಡಲಿದ್ದಾರೆ ಎಂದಿದ್ದಾರೆ. ಕಾಂಗ್ರೆಸ್ ಸಂಪೂರ್ಣ ನೆಲಕಚ್ಚಲಿದೆ. ಸಿದ್ದರಾಮಯ್ಯ ಎಂದರೆ ಡೋಂಗಿತನ, ಹಿಂದೂ ವಿರೋಧಿತನದ ಸಂಕೇತ. ರಾಷ್ಟ್ರವಿರೋಧಿ ಶಕ್ತಿಗಳ ಜೊತೆ ಕೈ ಜೋಡಿಸುವ ಮತ್ತು ಧರ್ಮಗಳನ್ನು ಒಡೆಯುವ ಸಿದ್ದರಾಮಯ್ಯ, ಒಮ್ಮೆ ನಿರುದ್ಯೋಗ ಸಮಸ್ಯೆ ಎನ್ನುವ ಸಿದ್ದರಾಮಣ್ಣ, ಮತ್ತೆ ಪ್ಲೇಟ್ ಬದಲಿಸಿ ಶೇಕಡಾ 40 ಭ್ರಷ್ಟಾಚಾರ ಎಂದು ರಾಗ ಎಳೆಯುತ್ತಾರೆ. ಅರ್ಕಾವತಿ ಹಗರಣ ಸೇರಿ ವಿವಿಧ ಭ್ರಷ್ಟಾಚಾರ ಹಗರಣಗಳನ್ನು ಬಿಜೆಪಿ ಸರ್ಕಾರ ಬಯಲಿಗೆ ಎಳೆಯಲಿದೆ. ಇದು ಗೊತ್ತಾಗಿ ಸಿದ್ದರಾಮಣ್ಣನಿಗೆ ಚಳಿಜ್ವರ ಬಂದಂತಿದೆ. ಅದಕ್ಕಾಗಿಯೇ ಸದಾ ಪ್ರಚಾರದಲ್ಲಿರಲು ಸುಳ್ಳು ಸುಳ್ಳು ಹೇಳಿಕೆಗಳನ್ನು ಕೊಡುತ್ತಿದ್ದಾರೆ ಎಂದು ಆಕ್ರೋಶ ಹೊರಹಾಕಿದ್ದಾರೆ.

ಸಿದ್ದರಾಮಯ್ಯ ಬಾಯಿ ಚಪಲಕ್ಕಾಗಿ ಮಾತನಾಡುತ್ತಿದ್ದಾರೆ. ಮಳೆ ಹಾನಿ ಸಂಬಂಧ ನೀವು ಮತ್ತು ನಿಮ್ಮ ಪಕ್ಷದವರು ಎಷ್ಟು ಪ್ರವಾಸ ಮಾಡಿದ್ದೀರಿ? ನಿನ್ನೆ ಕಾಟಾಚಾರಕ್ಕೆ ಬಾದಾಮಿಗೆ ಹೋಗಿ ಬಂದಿದ್ದಲ್ಲವೇ? ನಿಮ್ಮ ಅಸಲಿಯತ್ತು ನಮಗೆ ಮಾತ್ರವಲ್ಲದೆ ಜನರಿಗೂ ಗೊತ್ತಿದೆ. ನಕಲಿ ಸಮಾಜವಾದಿಗಳು, ನಕಲಿ ಬುದ್ಧಿಜೀವಿಗಳ ಜೊತೆ ಸೇರಿ ಮಾತನಾಡುವ ನಿಮ್ಮನ್ನು ಜನರು ನಂಬಲಾರದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಎಸಿಬಿ ಕೇಸ್‌ಗಳು ಲೋಕಾಯುಕ್ತಕ್ಕೆ: ಮಹತ್ವದ ಸಭೆ ಕರೆದ ಲೋಕಾಯುಕ್ತ ನ್ಯಾ.ಬಿ.ಎಸ್.ಪಾಟೀಲ್



ಬೆಂಗಳೂರು, ಸೆ.11– ರಾಜ್ಯ ಸರ್ಕಾರ ಆದೇಶದ ಹಿನ್ನೆಲೆ ಎಸಿಬಿಯಲ್ಲಿ ದಾಖಲಾಗಿರುವ ಎಲ್ಲಾ ಪ್ರಕರಣಗಳನ್ನು ಲೋಕಾಯುಕ್ತಕ್ಕೆ ಹಸ್ತಾಂತರಿಸುವ ಪ್ರಕ್ರಿಯೆ ನಡೆಯುತ್ತಿದೆ. ಈ ಸಂಬಂಧ ಅಧಿಕಾರಿ ವರ್ಗ ಹಾಗೂ ಪೊಲೀಸರ ಜೊತೆ ಲೋಕಾಯುಕ್ತ ನ್ಯಾ. ಬಿ.ಎಸ್.ಪಾಟೀಲ್ ಅವರು ಸೋಮವಾರ ಸಭೆ ನಡೆಸಲಿದ್ದಾರೆ.

ಪಾರದರ್ಶಕ ಸದೃಢ ಸಂಸ್ಥೆಯ ನಿರ್ಮಾಣಕ್ಕೆ ಮುಂದಾಗಿರುವ ಲೋಕಾಯುಕ್ತರು, ಭ್ರಷ್ಟಾಚಾರ ರಹಿತ ಕಾರ್ಯನಿರ್ವಹಣೆಗಾಗಿ ಸೋಮವಾರ ಹಿರಿಯ ಅಧಿಕಾರಿಗಳ ಜೊತೆ ಸಭೆ ನಡೆಸಲಿದ್ದಾರೆ. ಈಗಾಗಲೇ ಎಸಿಬಿ ಅಧಿಕಾರಿಗಳ ಜೊತೆ ಚರ್ಚೆ ನಡೆಸಿರುವ ಲೋಕಾಯುಕ್ತ ಕಾರ್ಯದರ್ಶಿ, ಸದ್ಯ ಕೇಸ್ ಫೈಲ್‌ಗಳಷ್ಟೇ ವರ್ಗಾವಣೆ ಮಾಡಿಕೊಳ್ಳಲು ಸಿದ್ಧತೆ ನಡೆಸಲಾಗುತ್ತಿದೆ. ಎಸಿಬಿ ಮುಖ್ಯಸ್ಥ ಎಡಿಜಿಪಿ ಸೀಮಂತ್ ಕುಮಾರ್ ಸಿಂಗ್ ಎಲ್ಲಾ ಎಸಿಬಿ ಎಸ್ಪಿಗಳಿಗೆ ಪತ್ರ ಬರೆದಿದ್ದು, ಸರ್ಕಾರದ ಆದೇಶದ ಬೆನ್ನಲ್ಲೇ ಎಲ್ಲಾ ಪ್ರಕರಣಗಳನ್ನು ವರ್ಗಾವಣೆ ಮಾಡಲು ಸೂಚಿಸಿದ್ದಾರೆ.

ಬೆಂಗಳೂರು ನಗರ ಲೋಕಾಯುಕ್ತ ಮುಖ್ಯ ಕಚೇರಿಗೆ ಹಾಗೂ ಉಳಿದ ಜಿಲ್ಲೆಗಳಲ್ಲಿ ಆಯಾ ಎಸಿಬಿ ಕಚೇರಿಯಿಂದ ಲೋಕಾಯುಕ್ತ ಸಂಸ್ಥೆಗೆ ಕೇಸ್‌ಗಳು ವರ್ಗಾವಣೆಯಾಗಲಿವೆ. ನಾಳಿನ ಸಭೆ ಬಳಿಕ ಸಿಬ್ಬಂದಿ ವರ್ಗ ನಿಯೋಜನೆ ಬಗ್ಗೆ ಸರ್ಕಾರದ ಜೊತೆ ಲೋಕಾಯುಕ್ತರು ಮಾತುಕತೆ ನಡೆಸಲಿದ್ದಾರೆ. ಗಂಭೀರ ಪ್ರಕರಣಗಳು ಮಾತ್ರ ಲೋಕಾಯುಕ್ತಕ್ಕೆ ಬಂದಿದ್ದು, ಆ ಪ್ರಕರಣಗಳ ತನಿಖೆ ಯಾವ್ಯಾವ ತಂಡಗಳಿಗೆ ನೀಡಬೇಕು ಎಂಬುದು ಸಹ ಸಭೆಯಲ್ಲಿ ಚರ್ಚೆಯಾಗಲಿದೆ. ಮೊದಲು ಎಸಿಬಿ ಪ್ರಕರಣಗಳನ್ನೇ ಕೈಗೆತ್ತಿಕೊಂಡು ತನಿಖೆ ಮಾಡಲು ಲೋಕಾಯುಕ್ತ ಸಿದ್ಧತೆ ನಡೆಸುತ್ತಿದೆ. ತನಿಖೆ ಮುಗಿಯುವ ಹಂತಕ್ಕೆ ಬಂದಿರುವ ಹಾಗೂ ಬಾಕಿಯಿರುವ ಕೇಸ್‌ಗಳು ಮೊದಲು ತನಿಖೆ ಪೂರ್ಣಗೊಳಿಸುವ ಬಗ್ಗೆಯೂ ಚರ್ಚೆಯಾಗಲಿದೆ ಎನ್ನಲಾಗುತ್ತಿದೆ. ಹೈಕೋರ್ಟ್ ತೀರ್ಪಿನನ್ವಯ ರಾಜ್ಯ ಸರ್ಕಾರ ಇತ್ತೀಚೆಗೆ ಎಸಿಬಿ ರದ್ದುಗೊಳಿಸಿ ಅಧಿಕೃತ ಆದೇಶ ಹೊರಡಿಸಿದೆ.

ಆ.11ರಂದು ಎಸಿಬಿ ರದ್ದುಗೊಳಿಸುವಂತೆ ಹೈಕೋರ್ಟ್ ಆದೇಶ ನೀಡಿತ್ತು. ಇದರ ಅನ್ವಯ ರಾಜ್ಯಸರ್ಕಾರ ಕೂಡ ಭ್ರಷ್ಟಾಚಾರ ನಿಗ್ರಹ ದಳ ರದ್ದು ಮಾಡಿದೆ.

ಲೋಕಾಯುಕ್ತಕ್ಕೆ ಅಗತ್ಯ ಸಿಬ್ಬಂದಿ ಕೊಡಿ; ಸಂತೋಷ್ ಹೆಗ್ಡೆ



ಧಾರವಾಡ, ಸೆ.11– ಲೋಕಾಯುಕ್ತಕ್ಕೆ ಮಾತ್ರ ಈಗ ಭ್ರಷ್ಟಾಚಾರ ಪ್ರಕರಗಣ ವಿಚಾರಣೆ ಮಾಡುವ ಅಧಿಕಾರ ಇದ್ದು, ಲೋಕಾಯುಕ್ತ ಇಲಾಖೆಗೆ ಅಗತ್ಯ ಸೌಲಭ್ಯಗಳನ್ನು ನೀಡಬೇಕು ಎಂದು ಧಾರವಾಡದಲ್ಲಿ ಲೋಕಾಯುಕ್ತ ನಿವೃತ್ತ ಲೋಕಾಯುಕ್ತ ನ್ಯಾ. ಸಂತೋಷ್ ಹೆಗ್ಡೆ ಹೇಳಿದರು.

ನಗರದಲ್ಲಿ ಈ ಬಗ್ಗೆ ಮಾತನಾಡಿದ ಅವರು, ಲೋಕಾಯುಕ್ತ ಪುನಃ ಅಧಿಕಾರ ಬಂದಿದ್ದು, ಒಳ್ಳೆಯ ನಿರ್ಧಾರ ಆಗಿದೆ. ಲೋಕಾಯುಕ್ತಕ್ಕೆ ಸರ್ಕಾರ ಸೂಕ್ತ ಸಿಬ್ಬಂದಿ ನಿಯೋಜಿಸಬೇಕು. ಸೂಕ್ತ ಸಿಬ್ಬಂದಿ ಕೊಟ್ಟರೆ ಸರ್ಕಾರಕ್ಕೆ ನಾನು ಸಲಾಂ ಹೇಳುತ್ತೇನೆ. ಈಗಾಗಲೇ ಅನೇಕ ಕೊರತೆಗಳ ನಡುವೆಯೂ ಲೋಕಾಯುಕ್ತ ಕೆಲಸ ಮಾಡುತಿದೆ. ಅದ್ದರಿಂದ ಲೋಕಾಯುಕ್ತಕ್ಕೆ ಸರ್ಕಾರ ಬೇಕಾದ ಸಿಬ್ಬಂದಿಯನ್ನು ಕೊಡಬೇಕು ಎಂದರು. ಕೆಲವು ಲೋಕಾಯುಕ್ತ ಕಾಯ್ದೆಗಳಿಗೆ ತಿದ್ದುಪಡಿ ಆಗಬೇಕು. ಈ ಹಿಂದೆ ಇದ್ದ ಅಧಿಕಾರಗಳನ್ನು ಪುನಃ ಮರಳಿ ಅವರನ್ನು ಅಧಿಕಾರಕ್ಕೆ ತರಬೇಕು. ಆದರೆ ಯಾವುದೇ ಕಾರಣಕ್ಕೂ ನಾನು ಪುನಃ ಲೋಕಾಯುಕ್ತಕ್ಕೆ ಬರುವುದಿಲ್ಲ. ಈಗಾಗಲೇ ನಾನು ಐದು ವರ್ಷ ಕರ್ತವ್ಯ ನಿಭಾಯಿಸಿದ್ದೇನೆ. ನನಗೆ ಈಗ 83 ವರ್ಷ ವಯಸ್ಸಾಯಿತು ಎಂದರು.

ನನಗೆ ಈಗ ಯಾವುದೇ ಅಧಿಕಾರ ಬೇಡ. ಯಾವ ಹುದ್ದೆ, ಅಧಿಕಾರಕ್ಕೆ ಕಾಯುವುದಿಲ್ಲ. ಈಗಾಗಲೇ ಸಾಕಷ್ಟು ಕೆಲಸ ಮಾಡಿದ್ದೇನೆ. ಆದರೆ ಲೋಕಾಯುಕ್ತ ತಿದ್ದುಪಡಿಗೆ ಸಲಹೆ ಕೇಳಿದರೆ ಕೊಡುತ್ತೇನೆ. ಯಾವುದೇ ಸಂದರ್ಭದಲ್ಲಿ ಸಹಾಯ ಕೇಳಿದರೂ ಇಲ್ಲ ಎನ್ನುವುದಿಲ್ಲ. ಸರ್ಕಾರದವರು ನನ್ನ ಸಹಾಯವನ್ನು ಕೇಳುವುದಿಲ್ಲ. ಒಂದು ವೇಳೆ ಕೇಳಿದರೆ ಖಂಡಿತವಾಗಿಯೂ ಸಹಾಯ ಮಾಡುತ್ತೇನೆ ಎಂದು ಸಂತೋಷ್ ಹೆಗಡೆ ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

1983ರಲ್ಲಿ ಜನತಾ ಪಕ್ಷ ಲೋಕಾಯುಕ್ತವನ್ನು ಪ್ರಣಾಳಿಕೆಯಲ್ಲಿ ಸೇರಿಸಿತ್ತು. ಅಂದು ಬಲಿಷ್ಠವಾದ ಲೋಕಾಯುಕ್ತ ಸಂಸ್ಥೆ ಕಟ್ಟಿದ್ದರು. ಆದರೆ ಮೊದಲಿನ ಹತ್ತು ವರ್ಷ ಏನೂ ನಡೆದಿರಲಿಲ್ಲ. ಅಂದು ಎನ್. ವೆಂಕಟಾಚಲಯ್ಯ ಲೋಕಾಯುಕ್ತದ ಶಕ್ತಿಯನ್ನು ತೋರಿಸಿದ್ದರು. ನಂತರ ನಾನು ಯಾವುದೇ ಒತ್ತಡಕ್ಕೆ ಒಳಗಾಗದೇ ಅವರ ಕೆಲಸ ಮುಂದುವರೆಸಿಕೊಂಡು ಹೋಗಿದ್ದು, ಅದರ ಪರಿಣಾಮಗಳನ್ನು ಎದುರಿಸಿದ್ದೇವೆ. ಹೀಗಾಗಿ ಲೋಕಾಯುಕ್ತ ಅಧಿಕಾರವನ್ನು ಕಿತ್ತುಕೊಂಡರು. ಲೋಕಾಯುಕ್ತವನ್ನು ದುರ್ಬಲಗೊಳಿಸುವ ಪ್ರಯತ್ನವನ್ನು ಮಾಡಿದ್ದರು, ಏಕೆಂದರೆ ಆ ಧೈರ್ಯ ಸರ್ಕಾರಕ್ಕೆ ಇರಲಿಲ್ಲ. ನಂತರ ದುರ್ಬಲಗೊಳಿಸುವ ಪ್ರಯತ್ನ ಮಾಡಿದರೂ ಕೂಡ ಅದು ಸಫಲವಾಗಲಿಲ್ಲ. ಆಗ ಭ್ರಷ್ಟ ಅಧಿಕಾರಿಗಳನ್ನೇ ಸರ್ಕಾರದವರು ತಂದಿಟ್ಟಿದ್ದರು. ಅದು ಆಗದೇ ಇದ್ದಾಗ ಎಸಿಬಿ ಕಟ್ಟಿದ್ದರು. ಭ್ರಷ್ಟಾಚಾರ ವಿರುದ್ಧ ಹೋರಾಟವನ್ನು ಅಂತ್ಯ ಮಾಡಲು ಎಸಿಬಿಯನ್ನು ಸೃಷ್ಟಿ ಮಾಡಿದ್ದರು. ಆದರೆ ಇದೂಗ ಎಸಿಬಿ ಹೋಗಿ ಪುನಃ ಲೋಕಾಯುಕ್ತ ಬಂದಿದೆ ಎಂದು ಸಂತೋಷ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಭಾನುವಾರ 379 ಮಂದಿಗೆ ಕೊರೊನಾ

ಬೆಂಗಳೂರು, ಸೆ.11– ರಾಜ್ಯದಲ್ಲಿ ಕೊರೊನಾ ಪಾಸಿಟಿವ್ ಪ್ರಕರಣಗಳ ಸಂಖ್ಯೆಯಲ್ಲಿ ಏರಿಳಿತ ಮುಂದುವರೆದಿದ್ದು, ಕಳೆದ 24 ಗಂಟೆಯಲ್ಲಿ 379 ಮಂದಿಗೆ ಕೋವಿಡ್ ಪಾಸಿಟಿವ್ ದೃಢಪಟ್ಟಿದೆ. ಇದರೊಂದಿಗೆ ಸೋಂಕಿತರ ಸಂಖ್ಯೆ 40,58,557ಕ್ಕೆ ಏರಿಕೆಯಾಗಿದೆ.

ರಾಜ್ಯದಲ್ಲಿ ಮಹಾಮಾರಿ ಕೊರೊನಾದಿಂದ ಇಂದು ಒಬ್ಬರು ಮೃತಪಟ್ಟಿದ್ದು, ಇದರೊಂದಿಗೆ ಸಾವಿನ ಸಂಖ್ಯೆ 40,217ಕ್ಕೆ ಏರಿಕೆಯಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ. ಬೆಂಗಳೂರಿನಲ್ಲಿ ಇಂದು 198 ಮಂದಿಗೆ ಸೋಂಕು ದೃಢಪಟ್ಟಿದೆ. ಇದರೊಂದಿಗೆ ನಗರದಲ್ಲಿ ಸೋಂಕಿತರ ಸಂಖ್ಯೆ 18,68,576ಕ್ಕೆ ಏರಿಕೆಯಾಗಿದೆ. ಇಂದು ರಾಜಧಾನಿಯಲ್ಲಿ ಯಾವುದೇ ಕೊರೊನಾ ಸಾವು ವರದಿಯಾಗಿಲ್ಲ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹೇಳಿದೆ.

ಕೇರಳ ಪ್ರವೇಶಿಸಿದ ಕಾಂಗ್ರೆಸ್‌ನ ಭಾರತ್ ಜೋಡೋ ಯಾತ್ರೆ

19 ದಿನಗಳ ಕಾಲ ದೇವರ ನಾಡಿನಲ್ಲಿ ಯಾತ್ರೆ



ತಿರುವನಂತಪುರ, ಸೆ.11– ಕಾಂಗ್ರೆಸ್ ಪಕ್ಷದ 'ಭಾರತ್ ಜೋಡೋ' ಯಾತ್ರೆಯು ಪಕ್ಷದ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ತನ್ನ 19 ದಿನಗಳ ಸುದೀರ್ಘ ಯಾತ್ರೆಗೆ ಭಾನುವಾರ ದೇವರ ನಾಡು ಕೇರಳ ಪ್ರವೇಶಿಸಿದೆ. ಕೇರಳದ ತಿರುವನಂತಪುರಂ ಜಿಲ್ಲೆಯ ಪರಸ್ಸಾಲಾದಿಂದ ರಾಹುಲ್ ಗಾಂಧಿ ಮತ್ತು ಕಾಂಗ್ರೆಸ್ ನಾಯಕರು ಯಾತ್ರೆಯ 5 ನೇ ದಿನವನ್ನು ಪ್ರಾರಂಭಿಸಿದರು.

ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಮತ್ತು ಸಂಸದ ಕೆ ಸುಧಾಕರನ್, ರಾಜ್ಯ ವಿಧಾನಸಭೆಯ ವಿರೋಧ ಪಕ್ಷದ ನಾಯಕ ವಿಡಿ ಸತೀಶನ್ ಮತ್ತು ಎಐಸಿಸಿ ಪ್ರಧಾನ ಕಾರ್ಯದರ್ಶಿ ತಾರಿಕ್ ಅನ್ವರ್ ಮತ್ತು ಇತರ ಹಿರಿಯ ಕಾಂಗ್ರೆಸ್ ನಾಯಕರು ಔಪಚಾರಿಕವಾಗಿ ಸ್ವಾಗತಿಸಿದ ನಂತರ ರಾಹುಲ್ ಗಾಂಧಿ ಅವರು ಯಾತ್ರೆಯನ್ನು ಪ್ರಾರಂಭಿಸಿದರು.


ಪಕ್ಷದ ಮಾಜಿ ಮುಖ್ಯಸ್ಥರನ್ನು ಸ್ವಾಗತಿಸಿದ ಪಕ್ಷದ ಇತರ ಹಿರಿಯ ನಾಯಕರಲ್ಲಿ ಕಾಂಗ್ರೆಸ್ ಸಂಸದರಾದ ಕೆ ಸಿ ವೇಣುಗೋಪಾಲ್ ಮತ್ತು ಶಶಿ ತರೂರ್ ಹಾಗೂ ಕೇರಳದ ಮಾಜಿ ಮುಖ್ಯಮಂತ್ರಿ ಉಮ್ಮನ್ ಚಾಂಡಿ ಮತ್ತು ಮಾಜಿ ಲೋಪಿ ರಮೇಶ್ ಚೆನ್ನಿತಲಾ ಸೇರಿದ್ದಾರೆ. ರಾಹುಲ್ ಗಾಂಧಿಯನ್ನು ಸ್ವಾಗತಿಸಲು ಅಪಾರ ಸಂಖ್ಯೆಯ ಬೆಂಬಲಿಗರು ಜಮಾಯಿಸಿದ್ದರು.

ಇಂದು ಯಾತ್ರೆಯು ಕೇರಳದ ನೆಯ್ಯಟ್ಟಿಂಕರದಲ್ಲಿರುವ ಡಾ ಜಿಆರ್ ಪಬ್ಲಿಕ್ ಸ್ಕೂಲ್‌ನಲ್ಲಿ ತಂಗುತ್ತದೆ. ತಮಿಳುನಾಡು ಗಡಿ ಸಮೀಪದಲ್ಲಿರುವ ಪರಸ್ಸಾಲದಿಂದ ಕೇರಳ ಪ್ರವೇಶಿಸಿದ ನಂತರ ರಾಹುಲ್ ಗಾಂಧಿ 19 ದಿನಗಳ ಅವಧಿಯಲ್ಲಿ ಮಲಪ್ಪುರಂನ ನಿಲಂಬೂರ್‌ಗೆ 450 ಕಿ.ಮೀ ಪ್ರಯಾಣಿಸಲಿದ್ದಾರೆ.

ರಾಹುಲ್ ಗಾಂಧಿ ಅವರು ಭಾರತ್ ಜೋಡೋ ಯಾತ್ರೆಯನ್ನು ಸೆಪ್ಟೆಂಬರ್ 7 ರಂದು ಕನ್ಯಾಕುಮಾರಿಯಿಂದ ಪ್ರಾರಂಭಿಸಿದರು. ಯಾತ್ರೆಯು ಕಾಶ್ಮೀರದಲ್ಲಿ ಮುಕ್ತಾಯಗೊಳ್ಳಲಿದೆ. ಇದು 3,500 ಕಿ.ಮೀ. ದೂರವನ್ನು ಕ್ರಮಿಸುತ್ತದೆ. 12 ರಾಜ್ಯಗಳನ್ನು ದಾಟುತ್ತದೆ, ಸರಿಸುಮಾರು 150 ದಿನಗಳನ್ನು ತೆಗೆದುಕೊಳ್ಳುತ್ತದೆ.

ಮಾಜಿ ಕಾರ್ಪೋರೇಟರ್ ಎಂ.ನಾರಾಯಣಪ್ಪ ನಿಧನ

ಮೈಸೂರು, ಸೆ.11– ಮೈಸೂರಿನ ವಿಜಯನಗರ 1ನೇ ಹಂತದ ನಿವಾಸಿ, ನಗರಪಾಲಿಕೆ ಮಾಜಿ ಸದಸ್ಯ ಎಂ.ನಾರಾಯಣಪ್ಪ(82) ಭಾನುವಾರ ನಿಧನರಾಗಿದ್ದಾರೆ.



ಮೃತರು ಪತ್ನಿ ಸುಂದರಮ್ಮ, ಆರು ಮಂದಿ ಪುತ್ರರು, ನಾಲ್ವರು ಪುತ್ರಿಯರು, ಮೊಮ್ಮಕ್ಕಳು ಅಳಿಯಂದರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಎನ್.ಆರ್. ಮೊಹಲ್ಲಾದಲ್ಲಿರುವ ರುದ್ರಭೂಮಿಯಲ್ಲಿ ನಾಳೆ(ಸೆ.12) ಮಧ್ಯಾಹ್ನ 12 ಗಂಟೆಗೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಹೂವಿನ ನಾರಾಯಣಪ್ಪ ಎಂದೇ ಕರೆಯಲ್ಪಡುತ್ತಿದ್ದ ಅವರು, ಎರಡು ಬಾರಿ ಪಾಲಿಕೆ ಸದಸ್ಯರಾಗಿ ಚುನಾಯಿತರಾಗಿದ್ದರು. ದೇವರಾಜ ಮಾರುಕಟ್ಟೆಯಲ್ಲಿ ಗಾಯತ್ರಿ ಫ್ಲವರ್ ಸ್ಟಾಲ್ ಹೊಂದಿದ್ದ ನಾರಾಯಣಪ್ಪ, ದಸರಾ ಜಂಬೂ ಸವಾರಿ ವೇಳೆ ಚಿನ್ನದ ಅಂಬಾರಿಗೆ ಹೂವಿನ ಅಲಂಕಾರ ಮಾಡುವ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದರು.

ಸಂತಾಪ: ಎಂ.ನಾರಾಯಣಪ್ಪ ಅವರ ನಿಧನಕ್ಕೆ ಮೇಯರ್ ಶಿವಕುಮಾರ್, ಶಾಸಕರಾದ ತನ್ವೀರ್ ಸೇಠ್, ಎಲ್.ನಾಗೇಂದ್ರ, ಪಾಲಿಕೆ ಸದಸ್ಯರಾದ ಎಂ.ಸತೀಶ್, ರಂಗಸ್ವಾಮಿ, ಆರ್.ರವೀಂದ್ರ, ಉಷಾ ನಾರಾಯಣಪ್ಪ, ಲೋಕೇಶ್‌ಪಿಯಾ, ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಕಾರ್ಯದರ್ಶಿ ಹೆಚ್.ಜಿ.ಗಿರಿಧರ್, ಮಾಜಿ ಮೇಯರ್ ಎಸ್.ಸಂದೇಶ್‌ಸ್ವಾಮಿ, ಮುಖಂಡರಾದ ದ್ಯಾವಪ್ಪನಾಯಕ, ಪಡುವಾರಹಳ್ಳಿ ರಾಮಕೃಷ್ಣ ದೇವರಾಜ್ ಕಾಟೂರ್, ಜಗದೀಶ್, ಮಹದೇವನಾಯಕ, ಕೆ.ಜೆ.ಶ್ರೀಧರನಾಯಕ, ಮಹದೇವಯ್ಯ, ಗೋವಿಂದ ರಾಜು, ಎಂ.ರಾಮಚಂದ್ರ, ಸಿ.ಎಸ್.ಸುರೇಶನಾಯಕ ಸೇರಿದಂತೆ ಹಲವರು ಸಂತಾಪ ಸೂಚಿಸಿದ್ದಾರೆ.

ಕೊಡಗಲ್ಲಿ ಮತ್ತೆ ಆರಂಭವಾದ ಮಳೆ

ಮಂಜು ಮುಸುಕಿದ ವಾತಾವರಣ, ಮೈ ಕೊರೆಯುವ ಚಳಿ

- ಕೆಲವೆಡೆ ಭೂ ಕುಸಿತ, ಮನೆಗಳಿಗೆ ಹಾನಿ
- ಸ್ಥಳಕ್ಕೆ ಶಾಸಕ ಅಪ್ಪಚ್ಚು ರಂಜನ್ ಭೇಟಿ



ಮಡಿಕೇರಿ, ಸೆ.11– ಕೆಲ ದಿನಗಳ ಕಾಲ ಬಿಡುವು ನೀಡಿದ್ದ ವರುಣ ಮತ್ತೆ ಮುಂದು ವರೆದಿದ್ದು, ಸದ್ಯಕ್ಕೆ ಮಳೆಗೆ ಪೂರ್ಣ ವಿರಾಮ ಸಿಗುವ ಲಕ್ಷಣ ಕಂಡು ಬರುತ್ತಿಲ್ಲ. ಜಿಲ್ಲೆಯ ವಿವಿಧ ಭಾಗಗಳಲ್ಲಿ ಸಾಧಾರಣ ಮಳೆ ಸುರಿಯುತ್ತಿದ್ದು, ದಟ್ಟ ಮಂಜು ಮುಸುಕಿದ ವಾತಾವರಣದ ನಡುವೆ ಮೈ ಕೊರೆಯುವ ಚಳಿ ಕಂಡು ಬರುತ್ತಿದೆ.

ಮಾದಾಪುರ ವ್ಯಾಪ್ತಿಯಲ್ಲಿ ಸುರಿದ ಮಳೆಯಿಂದ ಮುವತ್ತೊಕ್ಲು ಗ್ರಾಮದ ಮಂಡೀರ ಬಿದ್ದಪ್ಪ ಹಾಗೂ ಮಂಡೀರ ಪೊನ್ನಪ್ಪ ಎಂಬವರ ಮನೆಯ ಹಿಂಬದಿಯಲ್ಲಿ ಅಲ್ಪ ಪ್ರಮಾಣದ ಭೂ ಕುಸಿತವಾಗಿದೆ. ಪರಿಣಾಮ ಮನೆಯ ಗೋಡೆಗಳಿಗೆ ಹಾನಿಯಾಗಿದ್ದು, ಮತ್ತೆ ಭೂ ಕುಸಿದು ಬೀಳುವ ಸಂಭವ ಎದುರಾಗಿದೆ. ಮನೆಯ ಮೇಲ್ಭಾಗ 2018ರಲ್ಲಿ ಉಂಟಾದ ಭೂ ಕುಸಿತದ ಸಂದರ್ಭ ಭಾರೀ ಬಿರುಕು ಮೂಡಿದ್ದು, ಮಳೆ ಮುಂದುವರೆದಲ್ಲಿ ಮತ್ತೆ ಅನಾಹುತ ಸಂಭವಿಸುವ ಆತಂಕ ಮನೆ ಮಂದಿಯನ್ನು ಕಾಡುತ್ತಿದೆ.

ಘಟನಾ ಸ್ಥಳಕ್ಕೆ ಶಾಸಕ ಅಪ್ಪಚ್ಚು ರಂಜನ್, ಕಂದಾಯ ಇಲಾಖೆ ಅಧಿಕಾರಿಗಳು ಮತ್ತು ಪಂಚಾಯಿತಿ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಭಾಗದಲ್ಲಿರುವ ಮನೆಗಳು, ಬಿರುಕು ಬಿಟ್ಟ ಪ್ರದೇಶ, ನೀಡಲಾಗಿರುವ ನೋಟೀಸ್‌ಗಳ ಕುರಿತು ಕಂದಾಯ ಇಲಾಖೇ ಅಧಿಕಾರಿಗಳಿಂದ ಶಾಸಕ ರಂಜನ್ ಮಾಹಿತಿ ಪಡೆದರು.

ಮಳೆಗಾಲ ಮನೆ ಖಾಲಿ ಮಾಡಿ ಸುರಕ್ಷಿತ ಸ್ಥಳಗಳಿಗೆ ತೆರಳುತ್ತೇವೆ. ಮಳೆ ಕಡಿಮೆಯಾದ ಬಳಿಕ ಮನೆಗೆ ಮರಳುತ್ತೇವೆ. 2 ವಾರದ ಹಿಂದೆಯಷ್ಟೇ ಮನೆಗೆ ಮರಳಿದ್ದೇವೆ. 2018ರಿಂದಲೂ ಭಯದಿಂದಲೇ ದಿನ ದೂಡುತ್ತಿರುವುದಾಗಿ ಇದೇ ಸಂದರ್ಭ ಮನೆ ಮಂದಿ ಶಾಸಕರಲ್ಲಿ ಅಳಲು ತೋಡಿಕೊಂಡರು.

ಈ ಕುರಿತು ಮಾತನಾಡಿದ ಶಾಸಕ ಅಪ್ಪಚ್ಚು ರಂಜನ್, ಈ ಪ್ರದೇಶ ವಾಸಕ್ಕೆ ಯೋಗ್ಯವಿಲ್ಲ ಎಂದು 2018ರಲ್ಲಿ ಸರಕಾರವೇ ವರದಿ ನೀಡಿದೆ. ಈ ಹಿನ್ನೆಲೆಯಲ್ಲಿ ಅಪಾಯ ಕಾರಿ ಸ್ಥಳದಲ್ಲಿರುವ 18 ಮನೆಗಳ ನಿವಾಸಿ ಗಳಿಗೆ ಪ್ರತಿ ವರ್ಷ ನೋಟೀಸ್ ನೀಡಲಾಗು ತ್ತಿದೆ. ಇದಕ್ಕೆ ಶಾಶ್ವತ ಪರಿಹಾರ ಒದಗಿಸುವ ಸಲುವಾಗಿ ಇಲ್ಲಿನ ನಿವಾಸಿಗಳಿಗೆ ಪರ್ಯಾಯ ನಿವೇಶನ ನೀಡಲು ಜಿಲ್ಲಾಧಿಕಾರಿ ಮತ್ತು ಸಂಬಂಧಿಸಿದ ಸಚಿವರ ಜೊತೆ ಚರ್ಚಿಸುತ್ತೇನೆ. ಪ್ರತ್ಯೇಕ ಬಡಾವಣೆ ನಿರ್ಮಿಸಿ ಅಲ್ಲಿ ಆಶ್ರಯ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತದೆ. ಪ್ರಸ್ತುತ ಮಳೆ ಕಡಿಮೆ ಇರುವ ಹಿನ್ನೆಲೆಯಲ್ಲಿ ಅಪಾಯ ಎದುರಾಗುವ ಸನ್ನಿವೇಶ ಕಂಡು ಬರುತ್ತಿಲ್ಲ. ಮಳೆ ಹೆಚ್ಚಾದಲ್ಲಿ ಸುರಕ್ಷಿತ ಸ್ಥಳದಲ್ಲಿ ಆಶ್ರಯ ನೀಡಲು ಕೂಡ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಶಾಸಕ ಅಪ್ಪಚ್ಚು ರಂಜನ್ ಹೇಳಿದರು.

ಇಂದಿನಿಂದ ಬೆಂಗಳೂರಲ್ಲಿ ಮಾಜಿ ಸೈನಿಕರ ಪ್ರತಿಭಟನೆ

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹ



ಪೊನ್ನಂಪೇಟೆ, ಸೆ.11– ತಮ್ಮ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಸೆ.12 ಮತ್ತು 13ರಂದು ಧರಣಿ ಸತ್ಯಾಗ್ರಹ ನಡೆಸಲಾಗುವುದು ಎಂದು ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಕೊಡಗು ಜಿಲ್ಲಾ ಶಾಖೆ ಅಧ್ಯಕ್ಷ ಕೊಟ್ಟುಕತ್ತೀರ ಸೋಮಣ್ಣ ತಿಳಿಸಿದರು.


ಪಟ್ಟಣದಲ್ಲಿ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶಕ್ಕಾಗಿ ಪ್ರಾಣದ ಹಂಗನ್ನು ಬಿಟ್ಟು ಸಂಸಾರದಿಂದ ದೂರ ಉಳಿದು ನಿಸ್ವಾರ್ಥ ಸೇವೆ ಸಲ್ಲಿಸಿ ನಿವೃತ್ತರಾದ ಮಾಜಿ ಸೈನಿಕರ ಬೇಡಿಕೆ ಈಡೇರಿಕೆಗೆ ರಾಜ್ಯ ಸರ್ಕಾರ ಮುಂದಾಗುತ್ತಿಲ್ಲ. ಮಾಜಿ ಸೈನಿಕರಿಗೆ ನೀಡಿದ ಭರವಸೆ ಹಾಗೇ ಉಳಿದಿರುವುದು ನೋವಿನ ಸಂಗತಿ ಎಂದರು.

ಈ ಹಿಂದೆ ಮಾಜಿ ಸೈನಿಕರಿಗೆ ಯಾವುದೇ ಮಾನದಂಡ ಅನುಸರಿಸದೇ ತಲಾ 5 ಎಕರೆ ಜಮೀನನ್ನು ಸಾಗುವಳಿಗೆ ನೀಡಲಾಗುತ್ತಿತ್ತು. ಆದರೆ ಇದೀಗ ಮಾಜಿ ಸೈನಿಕರಿಗೆ ಜನಸಾಮಾನ್ಯರಿಗೆ ಅನ್ವಯವಾಗುವ ಕಾನೂನು ಪ್ರಕಾರ ಜಮೀನು ಮಂಜೂರು ಮಾಡಲಾಗುತ್ತಿದೆ. ಇದರಿಂದ ಮಾಜಿ ಸೈನಿಕರು ಜಮೀನು ಪಡೆಯುವುದರಿಂದ ವಂಚಿತರಾಗುತ್ತಿದ್ದಾರೆ. ಅಲ್ಲದೇ ಸರ್ಕಾರಿ ನೇಮಕಾತಿಯಲ್ಲಿ ಒಟ್ಟು ಹುದ್ದೆಗಳ ಪೈಕಿ ಶೇ.10ರಷ್ಟನ್ನು ಮಾಜಿ ಸೈನಿಕರಿಗೆ ಮೀಸಲಿರಿಸುತ್ತಿದ್ದರು. ಆದರೆ ನಿಯಮಾನುಸಾರ ನೇಮಕಾತಿಯಲ್ಲಿ ಅವಕಾಶ ನೀಡುತ್ತಿಲ್ಲ ಎಂದು ಆಪಾದಿಸಿದರು.

ಸರ್ಕಾರಿ ಕಚೇರಿಗಳಲ್ಲಿ ಮಾಜಿ ಸೈನಿಕರೆಂಬ ಕನಿಷ್ಠ ಗೌರವವನ್ನೂ ಕೊಡದೇ ಅಧಿಕಾರಿಗಳು ನಿರ್ಲಕ್ಷ್ಯದಿಂದ ವರ್ತಿಸುತ್ತಾರೆ. ಇದರಿಂದ ಮನಸ್ಸಿಗೆ ನೋವುಂಟಾಗುತ್ತಿದೆ. ಹೀಗಾಗಿ ಕರ್ನಾಟಕ ಸರ್ಕಾರವನ್ನು ಎಚ್ಚರಿಸುವ ಸಲುವಾಗಿ ಮಾಜಿ ಸೈನಿಕರು ಸೆ.12 ಮತ್ತು 13 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ರಾಜ್ಯಾಧ್ಯಕ್ಷ ಶಿವಣ್ಣ ನೇತೃತ್ವದಲ್ಲಿ ಧರಣಿ ಸತ್ಯಾಗ್ರಹ ನಡೆಸಲಾಗುವುದು. ಕೊಡಗಿನ ಎಲ್ಲಾ ಮಾಜಿ ಸೈನಿಕ ಬಂಧುಗಳು ಈ ಧರಣಿ ಸತ್ಯಾಗ್ರಹದಲ್ಲಿ ಭಾಗವಹಿಸಿ ಯಶಸ್ವಿಗೊಳಿಸುವಂತೆ ಒತ್ತಾಯಿಸಿದರು. ಗೋಷ್ಠಿಯಲ್ಲಿ ಬೊಟ್ಟಂಗಡ ಜಪ್ಪು, ಹೆಚ್.ಬಿ.ಬೋಜಮ್ಮ, ಸೋಮೆಂಗಡ ಗಣೇಶ್ ತಿಮ್ಮಯ್ಯ ಉಪಸ್ಥಿತರಿದ್ದರು.

ಸಂವಿಧಾನ ಉಳಿವಿಗೆ ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕು

ಬಿಜೆಪಿ, ಜೆಡಿಎಸ್ ಮುಖಂಡರು, ಕಾರ್ಯಕರ್ತರು ಕಾಂಗ್ರೆಸ್ ಸೇರ್ಪಡೆ



ವಿರಾಜಪೇಟೆ, ಸೆ.11– ದೇಶದ ಸಂವಿಧಾನ ಉಳಿಸಲು ಕಾಂಗ್ರೆಸ್ ಪಕ್ಷ ಮತ್ತೆ ಅಧಿಕಾರಕ್ಕೆ ಬರಬೇಕು. ಕಾರ್ಯಕರ್ತರ ಸಮಸ್ಯೆಗಳೇನೇ ಇದ್ದರು ಮಾತುಕತೆಯಿಂದ ಬಗೆಹರಿಸಿಕೊಳ್ಳಬೇಕು. ಯಾವುದೇ ಕಾರಣಕ್ಕೂ ಪಕ್ಷದ ಮೇಲೆ ತೋರಿಸಬಾರದು. ಸಂಘಟಿತರಾಗಿ ಒಗ್ಗಟ್ಟಿನಿಂದ ಪಕ್ಷವನ್ನು ಬಲಪಡಿಸುವಂತೆ ಹಿರಿಯ ವಕೀಲರಾದ ಕೆಪಿಸಿಸಿ ಕಾನೂನು ಘಟಕದ ರಾಜ್ಯ ಅಧ್ಯಕ್ಷ ಎ.ಎಸ್.ಪೊನ್ನಣ್ಣ ಕರೆ ನೀಡಿದರು.

ಬ್ಲಾಕ್ ಕಾಂಗ್ರೆಸ್ ವತಿಯಿಂದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿಯಿರುವ ಮಹಾವಿಷ್ಣು ಆರ್ಕೆಡ್ ಸಭಾಂಗಣದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ನಗರ ಕಾಂಗ್ರೆಸ್ ಕಛೇರಿ ಉದ್ಘಾಟನೆ ಹಾಗೂ ಜೆಡಿಎಸ್ ಮತ್ತು ಬಿಜೆಪಿ ಕಾರ್ಯಕರ್ತರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡು ಮಾತನಾಡಿ, 2023 ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಗೆಲುವು ಸಾಧಿಸಿ ಮತ್ತೆ ಅಧಿಕಾರಕ್ಕೆ ಬರಲು ಕಾರ್ಯಕರ್ತರು ಸಂಘಟಿತರಾಗಿ ಒಗ್ಗಟ್ಟಿನಿಂದ ಪಕ್ಷದ ಏಳಿಗೆಗೆ ತಳಮಟ್ಟದಿಂದ ಕೆಲಸ ಮಾಡಬೇಕು ಎಂದರು.

ನಮಗೆ ಎದುರಾಳಿಗಳಿದ್ದರೂ ನಾವು ಯಾರನ್ನು ದ್ವೇಶಿಸುವುದಿಲ್ಲ. ಆದರೆ ಎಲ್ಲಂದರಲ್ಲಿ ನಡೆಯುತ್ತಿರುವ ಭ್ರಷ್ಟಾಚಾರವನ್ನು ಹೋಗಲಾಡಿಸುವ ಮೂಲಕ ಕೊಡಗು ಜಿಲ್ಲೆಯನ್ನು ಕಟ್ಟಲು ಶ್ರಮಿಸೋಣ ಎಂದರು.

ಪಕ್ಷದ ಜಿಲ್ಲಾ ಅಧ್ಯಕ್ಷ ಧರ್ಮಜಾ ಉತ್ತಪ್ಪ ಮಾತನಾಡಿ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಸಮಸ್ಯೆಗಳೇನೆ ಇದ್ದರು ನೇರವಾಗಿ ಬಗೆಹರಿಸಿಕೊಳ್ಳುವ ಮೂಲಕ ಬಿನ್ನಭಿಪ್ರಾಯ ದೂರ ಮಾಡಿ ಒಗ್ಗಟ್ಟಿನಿಂದ ಪಕ್ಷವನ್ನು ಬೂತ್ ಮಟ್ಟದಿಂದ ಬಲಪಡಿಸುವ ನಿಟ್ಟಿನಲ್ಲಿ ಸಂಘಟಿತರಾಗಬೇಕಾಗಿದೆ. ಕಾಂಗ್ರೆಸ್ ಪಕ್ಷದಲ್ಲಿ ಜಾತಿಯ ಬೇಧ-ಭಾವಗಳಿಲ್ಲ ಎಲ್ಲರೂ ಒಂದೆ ಎಂಬ ಭಾವನೆಯಿಂದ ದೇಶದ ಏಳಿಗೆಗಾಗಿ ಒಗ್ಗಟ್ಟಿನಿಂದ ಕೆಲಸ ಮಾಡುವಂತೆ ಕಾರ್ಯ ಕರ್ತರಿಗೆ ಕಿವಿಮಾತು ಹೇಳಿದರು.

ನಾಪೊಕ್ಲು ಬ್ಲಾಕ್ ಕಾಗ್ರೆಸ್ ಅಧ್ಯಕ್ಷ ಇಸ್ಮಾಯಿಲ್ ಪಕ್ಷದ ಬೆಳವಣಿಗೆ ಬಗ್ಗೆ ಮಾತನಾಡಿದರು.

ಸುಮಾರು 26 ವರ್ಷಗಳ ಕಾಲ ಜೆಡಿಎಸ್ ಪಕ್ಷದಲ್ಲಿದ್ದು ಜಿಲ್ಲಾ ಕಾರ್ಯಾಧ್ಯಕ್ಷನಾಗಿ ಸೇವೆ ಸಲ್ಲಿಸುತ್ತ ಮೂರು ಬಾರಿ ಚುನಾವಣೆಯಲ್ಲಿ ಜಯಗಳಿಸಿ ಪುರಸಭೆ ಸದಸ್ಯನಾಗಿರುವ ಎಸ್.ಹೆಚ್.ಮತೀನ್ ಹಾಗೂ ಅವರ 73 ಬೆಂಬಲಿಗರು ಜೆಡಿಎಸ್ ತೊರೆದು ಕಾಂಗ್ರೆಸ್ ಸೇರ್ಪಡೆಗೊಂಡರು. ಇದೇ ರೀತಿ ಬಿಜೆಪಿ ಮುಖಂಡರು, ಕಾರ್ಯಕರ್ತರು ಪಕ್ಷ ತೊರೆದು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಿ.ರಂಜಿ ಪೂಣಚ್ಚ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವೇದಿಕೆಯಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಎಂ.ಪಿ. ತಿಮ್ಮಯ್ಯ, ಕಾಂಗ್ರೆಸ್ ಮುಖಂಡ ಸಿ.ಎ. ನಾಶೀರ್, ಅಲ್ಪ ಸಂಖ್ಯಾತರ ಘಟಕದ ಕೆ.ರಫೀಕ್, ಪಕ್ಷಕ್ಕೆ ಸೇರ್ಪಡೆಗೊಂಡ ಅಮ್ಮತ್ತಿಯ ಎ.ಡಿ. ದಿನೇಶ್, ರಾಜೇಶ್ ನಾಯರ್ ವೇದಿಕೆಯಲ್ಲಿದ್ದರು.

ಸಿದ್ದಾಪುರದ ಬಳಿ ಹುಲಿ ದಾಳಿಗೆ ಹಸು ಬಲಿ

ಹುಲಿ ಸೆರೆಗೆ ಒತ್ತಾಯ, ಅರಣ್ಯ ಇಲಾಖೆ ಅಧಿಕಾರಿಗಳ ತರಾಟೆ



ಸಿದ್ದಾಪುರ, ಸೆ.11– ಮುಖ್ಯ ರಸ್ತೆಯಲ್ಲಿ ಹಸು ಮೇಯಿಸುತ್ತಿದ್ದ ಸಂದರ್ಭದಲ್ಲಿ ಕಾಫಿ ತೋಟದಿಂದ ದುತ್ತನೆ ಬಂದ ಭಾರೀ ಗಾತ್ರದ ಹುಲಿಯೊಂದು ಹಠಾತ್ತನೆ ಹಸುವಿನ ಮೇಲೆ ದಾಳಿ ಮಾಡಿ ಬಲಿ ತೆಗೆದುಕೊಂಡ ಘಟನೆ ಕಾರ್ಮಿಕನ ಕಣ್ಣೆದುರಲ್ಲೇ ಮಾಲ್ದಾರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಾಡಗ ಬಾಣಂಗಾಲ ಹುಂಡಿರಸ್ತೆಯ ಮಾರ್ಗೊಲ್ಲಿಯಲ್ಲಿ ಸಂಭವಿಸಿದೆ.

ಕಾರ್ಮಿಕ ಶೇಖ್ ಎಂಬಾತ ಪೂವಪ್ಪ ಅವರಿಗೆ ಸೇರಿದ 3 ಹಸುಗಳನ್ನು ಹುಂಡಿ ಘಟ್ಟದಳ ಮುಖ್ಯ ರಸ್ತೆ ಬದಿಯಲ್ಲಿ ಮೇಯಿಸುತ್ತಿದ್ದ. ಸಂಜೆ ವೇಳೆ ಕಾಫಿ ತೋಟದಿಂದ ದುತ್ತನೆ ಬಂದ ಭಾರೀ ಗಾತ್ರದ ಹುಲಿಯೊಂದು ಕಾರ್ಮಿಕನ ಕಣ್ಣೆದುರಲ್ಲೇ ಹಸು ಮೇಲೆ ದಾಳಿ ಮಾಡಿ ಕೊಂದು ಪರಾರಿಯಾಯಿತು.

ಇದನ್ನು ಕಂಡ ಕಾರ್ಮಿಕ ಭಯಭೀತನಾಗಿ ಓಡಿ ಪಾರಾಗಿದ್ದಾರೆ. ತಕ್ಷಣ ಮಾಲೀಕರಿಗೆ ಮಾಹಿತಿ ನೀಡಿ ಸ್ಥಳಕ್ಕೆ ಆಗಮಿಸುವಷ್ಟರಲ್ಲಿ ಹುಲಿ ದಾಳಿಯಿಂದ ಹಸು ಬಲಿಯಾಗಿರುವುದು ಕಂಡು ಬಂದಿತು. ವಿಷಯ ತಿಳಿದ ಸುತ್ತಮುತ್ತಲ ಕಾರ್ಮಿಕರು, ಬೆಳೆಗಾರರು ಸ್ಥಳಕ್ಕಾಗಮಿಸಿ ಅರಣ್ಯ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೂಡಲೇ ಹುಲಿ ಸೆರೆ ಹಿಡಿಯಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಪೂವಪ್ಪ ಎಂಬವರ ಮತ್ತೊಂದು ಹಸು ಒಂದು ತಿಂಗಳ ಹಿಂದೆ ಹುಲಿ ದಾಳಿಗೆ ಬಲಿಯಾಗಿತ್ತು. ಇದೀಗ ಎರಡನೇ ಹಸುವನ್ನು ಬಲಿ ತೆಗೆದುಕೊಂಡಿದೆ.

ಹಸುಗಳನ್ನು ಸಾಕಿ ಹಾಲು ಮಾರಿ ಜೀವನ ನಡೆಸುತ್ತಿದ್ದ ಕುಟುಂಬ ಇದೀಗ ಸಂಕಷ್ಟದಲ್ಲಿದೆ. ಇತ್ತೀಚೆಗಷ್ಟೆ ಸಾಲ ಮಾಡಿ ಹಸುವನ್ನು ಖರೀದಿಸಿ ತಂದಿದ್ದರು. ಮಾಲ್ದಾರೆ ವ್ಯಾಪ್ತಿಯಲ್ಲಿ ಸುಮಾರು 3 ತಿಂಗಳಿನಿಂದ ಹತ್ತಕ್ಕೂ ಹೆಚ್ಚು ಜಾನು ವಾರುಗಳು ಬಲಿಯಾಗಿದ್ದು, ಕಾರ್ಮಿಕರು ಬೆಳೆಗಾರರಿಗೆ ಹುಲಿ ಹಗಲಿಯಲ್ಲೂ ಕಾಣಿಸಿಕೊಂಡಿದೆ.

ಹುಲಿ ದಾಳಿ ಸ್ಥಳಕ್ಕೆ ವಲಯಾರಣ್ಯಾಧಿಕಾರಿ ಅಶೋಕ್ ಸೇರಿದಂತೆ ಸಿಬ್ಬಂದಿಗಳು ಭೇಟಿ ನೀಡಿದ ಸಂದರ್ಭದಲ್ಲಿ ಸ್ಥಳೀಯರು ತರಾಟೆಗೆ ತೆಗೆದುಕೊಂಡು ತಕ್ಷಣ ಹುಲಿಯನ್ನು ಸೆರೆ ಹಿಡಿಯಬೇಕು. ಕಾಡಾನೆ ಸೇರಿದಂತೆ ಪ್ರಾಣಿಗಳ ದಾಳಿಯನ್ನು ತಡೆಗಟ್ಟಬೇಕು ಎಂದು ಆಗ್ರಹಿಸಿದರು. ಕೂಡಲೇ ಕಾರ್ಯಾಚರಣೆ ನಡೆಸದಿದ್ದಲ್ಲಿ ಪ್ರತಿಭಟನೆ ಮಾಡುವ ಎಚ್ಚರಿಕೆ ನೀಡಿದರು. ಸ್ಥಳಕ್ಕೆ ಶಾಸಕ ಕೆ.ಜಿ.ಬೋಪಯ್ಯ ಭೇಟಿ ನೀಡಿ ಹುಲಿ ಸೆರೆ ಹಿಡಿಯಲು ಅಧಿಕಾರಿಗಳಿಗೆ ಸೂಚನೆ ನೀಡಿದರು. ಗ್ರಾಪಂ ಅಧ್ಯಕ್ಷ ಸಮೀರ್ ಸೇರಿದಂತೆ ಸದಸ್ಯರ ಕಾರ್ಮಿಕರು ಬೆಳೆಗಾರರು ಸ್ಥಳದಲ್ಲಿ ಹಾಜರಿದ್ದರು.

ಅನುದಾನ ಬಿಡುಗಡೆ

ಮಡಿಕೇರಿ, ಸೆ.11– ಶಾಸಕ ಕೆ.ಜಿ.ಬೋಪಯ್ಯ ಅವರ ಶಿಫಾರಸಿನಂತೆ ಕೊಡಗು ಜಿಲ್ಲೆ ಮಡಿಕೇರಿ ತಾಲೂಕಿನ ನಾಪೋಕ್ಲು ಗ್ರಾಮದ ನೂರಂಬಡ ಮಠದ ಪರಿಶಿಷ್ಟ ಜಾತಿ ಕಾಲೋನಿಯ ಬಳಿ ಸಮುದಾಯ ಭವನ ನಿರ್ಮಾಣಕ್ಕೆ 50 ಲಕ್ಷ ರೂ. ಬಿಡುಗಡೆ ಮಾಡಲಾಗಿದೆ.

ಕಲ್ಯಾಣಿ ನಿಧನ



ಸೋಮವಾರಪೇಟೆ, ಸೆ.11– ಸಮೀಪದ ತಣ್ಣೀರುಹಳ್ಳ–ದೊಡ್ಡ ಬ್ಯೂರು ಗ್ರಾಮದ ನಿವಾಸಿ ದಿ. ಕೊರಗಪ್ಪ ಮೇಸ್ತ್ರಿಯವರ ಪತ್ನಿ ಕಲ್ಯಾಣಿ(92) ಶನಿವಾರ ನಿಧನರಾದರು.

ಮೃತರು ಓರ್ವ ಪುತ್ರ, ಪುತ್ರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಭಾನುವಾರ ಸ್ವಗ್ರಾಮದಲ್ಲಿ ನಡೆಯಿತು.

ಸಚಿವ ವಿ.ಸೋಮಣ್ಣರಿಂದ ಪೂರ್ವ ಸಿದ್ಧತಾ ಸಭೆ, ಅಭಿವೃದ್ಧಿ ಕಾಮಗಾರಿಗಳ ಪರಿಶೀಲನೆ

ಮಹದೇಶ್ವರಬೆಟ್ಟದಲ್ಲಿ ಅದ್ದೂರಿ ಜಾತ್ರಾ ಮಹೋತ್ಸವಗಳ ಸಿದ್ಧತೆಗೆ ಸೂಚನೆ



ಮಹದೇಶ್ವರಬೆಟ್ಟದಲ್ಲಿ ವಸತಿಗೃಹ ನಿರ್ಮಾಣ ಕಾಮಗಾರಿಯನ್ನು ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಪರಿಶೀಲಿಸಿದರು.

ಚಾಮರಾಜನಗರ,ಸೆ.11–ಜಿಲ್ಲೆಯ ಯಾತ್ರಾ ಕ್ಷೇತ್ರ ಮಲೆ ಮಹದೇಶ್ವರಬೆಟ್ಟದಲ್ಲಿ ಮಹಾಲಯ ಅಮಾವಾಸ್ಯೆ, ದಸರಾ, ದೀಪಾವಳಿ, ಕಾರ್ತಿಕ ಸೋಮವಾರ ಜಾತ್ರಾ ಮಹೋತ್ಸವಗಳು ಅದ್ದೂರಿಯಾಗಿ ನೆರವೇರಲು ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಸೂಚಿಸಿದರು.

ಮಲೆ ಮಹದೇಶ್ವರಬೆಟ್ಟದ ನಾಗಮಲೆ ಭವನ ಸಭಾಂಗಣದಲ್ಲಿ ಭಾನುವಾರ ನಡೆದ ಜಾತ್ರಾ ಕಾರ್ಯಕ್ರಮಗಳ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಎರಡು ವರ್ಷಗಳಲ್ಲಿ ಕೋವಿಡ್ ಕಾರಣದಿಂದ ಕ್ಷೇತ್ರದಲ್ಲಿ ಜಾತ್ರೆಗಳು ಅದ್ದೂರಿಯಾಗಿ ನಡೆದಿರಲಿಲ್ಲ. ಹೀಗಾಗಿ ಈ ಬಾರಿ ನಡೆಯುವ ಜಾತ್ರಾ ಮಹೋತ್ಸವಗಳಿಗೆ ಹೆಚ್ಚಿನ ಭಕ್ತಾದಿಗಳು ಆಗಮಿಸುವ ನಿರೀಕ್ಷೆ ಇದ್ದು, ಸೌಲಭ್ಯ ಕೊರತೆಯಾಗಬಾರದು. ಕುಡಿಯುವ ನೀರು, ಭಕ್ತಾದಿಗಳ ಸ್ನಾನ ಸೌಲಭ್ಯಕ್ಕೆ 24X7 ನೀರು ಪೂರೈಕೆಯಾಗಬೇಕು. ಆಗಿಂದ್ದಾಗ್ಗೆ ಸ್ನಾನಗೃಹಗಳು ಸ್ವಚ್ಛಗೊಳಿಸುತ್ತಿರಬೇಕು. ಭಕ್ತರಿಗೆ ನೆರಳಿನ ವ್ಯವಸ್ಥೆಗೆ ಅವಶ್ಯವಿದ್ದೆಡೆ ಶಾಮಿಯಾನ ಅಳವಡಿಸಬೇಕು ಎಂದು ಸಚಿವರು ನಿರ್ದೇಶನ ನೀಡಿದರು.

ರಾಜ್ಯ ಹಾಗೂ ಹೊರರಾಜ್ಯಗಳಿಂದಲೂ ಜಾತ್ರೆಗಳಿಗೆ ಭಕ್ತಾದಿಗಳು ಬರಲು ಕೆಎಸ್‌ಆರ್‌ಟಿಸಿ ಬಸ್‌ಗಳನ್ನು ಹೆಚ್ಚಾಗಿ ನಿಯೋಜಿಸಬೇಕು. ಖಾಸಗಿ ವಾಹನಗಳಿಗೂ ಪಾರ್ಕಿಂಗ್ ಕಲ್ಪಿಸಬೇಕು. ಸಂಚಾರ ದಟ್ಟಣೆಯಾಗದಂತೆ ಪೊಲೀಸ್, ಪ್ರಾದೇಶಿಕ ಸಾರಿಗೆ ಇಲಾಖೆ ಅಧಿಕಾರಿಗಳು ನಿಗಾ ವಹಿಸಬೇಕು. ಜಾತ್ರಾ ದಿನಗಳಲ್ಲಿ ದಾಸೋಹ ಆರೋಗ್ಯ ಸೇವೆ ಲಭ್ಯವಿರಬೇಕು. ಹೆಚ್ಚಿನ ಪೊಲೀಸ್ ಬಂದೋಬಸ್ತ್ ಮಾಡಬೇಕು. ಅಬಕಾರಿ ಇಲಾಖೆ ಮದ್ಯ ಸಾಗಣೆ ತಡೆಗೆ ತಾಳಬೆಟ್ಟದಿಂದ ಪಾಲಾರ್‌ವರೆಗೆ ತಪಾಸಣೆ ಕೈಗೊಳ್ಳಬೇಕು ಎಂದು ಸಲಹೆ ನೀಡಿದರು.

ಕಾಮಗಾರಿಗಳನ್ನು ಪೂರ್ಣಗೊಳಿಸಿ: ಸಭೆಗೂ ಮುನ್ನ ಕ್ಷೇತ್ರದಲ್ಲಿ 400ಕ್ಕೂ ಹೆಚ್ಚು ಕೊಠಡಿಗಳುಳ್ಳ ವಸತಿಗೃಹ ನಿರ್ಮಾಣ ಸ್ಥಳಕ್ಕೆ ಭೇಟಿ ನೀಡಿದ ಸಚಿವರು, ಕಾಮಗಾರಿ ವಿಳಂಬಕ್ಕೆ ತೀವ್ರ ಅಸಮಧಾನ ವ್ಯಕ್ತಪಡಿಸಿದರಲ್ಲದೆ, ಶೀಘ್ರವಾಗಿ ಪೂರ್ಣಗೊಳಿಸಲು ತಾಕೀತು ಮಾಡಿದರು.

ಅಂತರಗಂಗೆ ಬಳಿ ತೆರಳಿ ಪರಿಶೀಲಿಸಿದ ಸಚಿವರು, ನೀರಿನ ಸ್ವಚ್ಛತೆ ಹಾಗೂ ಮೆಟ್ಟಿಲುಗಳ ರೇಲಿಂಗ್ಸ್ ದುರಸ್ತಿಗೊಳಿಸುವಂತೆ ಸೂಚಿಸಿದರಲ್ಲದೆ, ತ್ಯಾಜ್ಯ ನೀರು ಸಂಸ್ಕರಣಾ ಘಟಕಕ್ಕೆ ಕಾಮಗಾರಿ ವಿಳಂಬಕ್ಕೆ ಕಿಡಿಕಾರಿದರು. ನಂತರ ದೀಪದಗಿರಿ ಒಡ್ಡುವಿನಲ್ಲಿ ನಿರ್ಮಿಸುತ್ತಿರುವ ಮಹದೇಶ್ವರರ ಪ್ರತಿಮೆ ಕಾಮಗಾರಿ ವೀಕ್ಷಿಸಿದ ಸಚಿವರು, ನಿರ್ಮಾಣ ಕಾರ್ಯ ಚುರುಕುಗೊಳಿಸಲು ಸೂಚಿಸಿದರು.

ಶಾಸಕ ಎನ್.ಮಹೇಶ್, ಡಿಸಿ ಚಾರುಲತಾ ಸೋಮಲ್, ಶ್ರೀ ಮಲೈ ಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ, ಎಡಿಸಿ ಎಸ್.ಕಾತ್ಯಾಯಿನಿದೇವಿ, ಜಿಪಂ ಸಿಇಒ ಕೆ.ಎಂ.ಗಾಯತ್ರಿ, ಎಸ್‌ಪಿ ಟಿ.ಪಿ.ಶಿವಕುಮಾರ್, ಎಎಸ್‌ಪಿ ಸುಂದರ ರಾಜು, ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ್, ಪ್ರಾದೇಶಿಕ ಸಾರಿಗೆ ಅಧಿಕಾರಿ ಸುಧಾಮಣಿ, ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಸಂತೋಷ್ ಕುಮಾರ್, ಸಹಾಯಕ ಅರಣ್ಯಾಧಿಕಾರಿ ಭಾಗ್ಯಲಕ್ಷ್ಮಿ, ಲೋಕೋಪಯೋಗಿ ಇಲಾಖೆ ಇಇ ವಿನಯ್‌ಕುಮಾರ್, ಡಿವೈಎಸ್‌ಪಿ ನಾಗರಾಜು, ಹನೂರು ತಹಸೀಲ್ದಾರ್ ಆನಂದಯ್ಯ, ತಾಲೂಕು ಆರೋಗ್ಯಾಧಿಕಾರಿ ಡಾ.ಪ್ರಕಾಶ್ ಇನ್ನಿತರ ಅಧಿಕಾರಿಗಳು ಸಭೆಯಲ್ಲಿದ್ದರು.

ಧ್ರುವನಾರಾಯಣ್‌ರಿಂದ ಮಳೆಹಾನಿ ಪ್ರದೇಶಗಳ ಪರಿಶೀಲನೆ



ಚಾಮರಾಜನಗರ ತಾಲೂಕಿನ ಕಣ್ಣೇಗಾಲದಲ್ಲಿ ಮನೆಗೋಡೆ ಕುಸಿದು ಬಿದ್ದಿರುವುದನ್ನು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ವೀಕ್ಷಿಸಿದರು.

ಚಾಮರಾಜನಗರ, ಸೆ.11–ಸತತವಾಗಿ ಸುರಿದ ಮಹಾಮಳೆಗೆ ಜಿಲ್ಲೆಯ ಗ್ರಾಮಗಳಲ್ಲಿ ಆಸ್ತಿಪಾಸ್ತಿ ಹಾನಿಯಾದ್ದು, ಮಳೆ ಹಾನಿ ಪ್ರದೇಶಗಳಿಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಭೇಟಿ ನೀಡಿ ಪರಿಶೀಲಿಸಿದರು.

ತಾಲೂಕಿನ ಕಣ್ಣೇಗಾಲ, ಆಲೂರು ಹೊಮ್ಮ, ಯಳಂದೂರು ತಾಲೂಕಿನ ಅಂಬಳೆ ಸೇರಿದಂತೆ ಇನ್ನಿತರ ಗ್ರಾಮಗಳಿಗೆ ಭೇಟಿ ನೀಡಿ ಪರಿಶೀಲಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ನಿರಂತರವಾಗಿ ಸುರಿದ ಮಳೆ, ಪ್ರವಾಹದಿಂದ ಅಪಾರ ಪ್ರಮಾಣದಲ್ಲಿ ಹಾನಿಯಾಗಿದೆ. ಜಿಲ್ಲೆಯಲ್ಲಿ ತಗ್ಗುಪ್ರದೇಶದ ಅನೇಕ ಮನೆಗಳಿಗೆ ಹಾನಿಯಾಗಿದ್ದು, ಬೆಳೆಗಳಿಗೂ ಸಂಪೂರ್ಣವಾಗಿ ನಾಶವಾಗಿದೆ. ಮರಗಳು ಉರುಳಿ ಬಿದ್ದಿವೆ. ರಸ್ತೆಗಳು, ನಾಲೆಗಳು, ಕಾಲುವೆಗಳು ಹಾಳಾಗಿದ್ದು, ಜನತೆ ಸಂಕಷ್ಟದಲ್ಲಿದ್ದಾರೆ. ಗ್ರಾಮ ಲೆಕ್ಕಿಗರು ಮತ್ತು ಇನ್ನಿತರ ಅಧಿಕಾರಿಗಳಿಗೆ ಸರಕಾರಕ್ಕೆ ವಸ್ತುನಿಷ್ಠ ವರದಿ ನೀಡಿ, ಸೂಕ್ತ ಪರಿಹಾರ ಕೊಡಿಸಲು ಪ್ರಾಮಾಣಿಕ ಪ್ರಯತ್ನ ಮಾಡಬೇಕಿದೆ ಎಂದರು.

ಈ ಸಂದರ್ಭದಲ್ಲಿ ಮಾಜಿ ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಎಸ್.ಜಯಣ್ಣ, ಎಸ್.ಬಾಲರಾಜು, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹೆಚ್.ವಿ.ಚಂದ್ರ, ಜಿಪಂ ಮಾಜಿ ಸದಸ್ಯರಾದ ಕೆ.ಪಿ.ಸದಾಶಿವಮೂರ್ತಿ, ಯೋಗೇಶ್, ಗ್ರಾಪಂ ಸದಸ್ಯ ಆರ್.ಮಾದೇಶ್, ಮುಖಂಡ ಪುಟ್ಟಸ್ವಾಮಿ ಇತರರಿದ್ದರು.

ಕೊಳ್ಳೇಗಾಲದಲ್ಲಿ ಕರುನಾಡ ವಿಜಯ ಸೇನೆ ಅಸ್ತಿತ್ವಕ್ಕೆ



ಕೊಳ್ಳೇಗಾಲ, ಸೆ.11–ಕರ್ನಾಟಕ ಗಡಿ, ನೆಲ–ಜಲ ವಿವಾದ ಉಂಟಾದಾಗ ಜಿಲ್ಲೆಯವರೇ ಆದ ವರನಟ ಡಾ.ರಾಜ್‌ಕುಮಾರ್ ಗೋಕಾಕ್ ಚಳವಳಿ ಮೂಲಕ ಕನ್ನಡಿಗರ ಪರ ನಿಂತು ಕನ್ನಡಿಗರ ಸಂಘಟನೆಗೆ ಶ್ರಮಿಸಿದರು ಎಂದು ಕರ್ನಾಟಕ ಗ್ರಾಮೀಣ ಮೂಲ ಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ರುದ್ರೇಶ್ ಸ್ಮರಿಸಿದರು. ಪಟ್ಟಣದ ವೆಂಕಟೇಶ್ವರ ಮಹಲ್‌ನಲ್ಲಿ ಕರುನಾಡ ವಿಜಯ ಸೇನೆ ಸಂಘಟನೆ ಉದ್ಘಾಟಿಸಿ ಮಾತನಾಡಿದ ಅವರು, ರಾಜಣ್ಣ ಹುಟ್ಟಿದ ಇಂತಹ ಪುಣ್ಯ ಭೂಮಿಯಲ್ಲಿ ದೀಪಕ್ ಅವರ ನೇತೃತ್ವದಲ್ಲಿ ಕರ್ನಾಟಕದಲ್ಲಿ ಯುವಶಕ್ತಿಯನ್ನು ಸಂಘಟಿಸಲು ಕರುನಾಡ ವಿಜಯ ಸೇನೆ ಅಸ್ತಿತ್ವಕ್ಕೆ ಬಂದಿದೆ. ಈ ಸಂಘಟನೆಯ ಬೆಳವಣಿಗೆಗೆ ನಾವೆಲ್ಲ ಬೆನ್ನೆಲುಬಾಗಿ ನಿಲ್ಲೋಣ ಎಂದರು.

ಮಾಜಿ ಶಾಸಕ ಜಿ.ಎನ್.ನಂಜುಂಡ ಸ್ವಾಮಿ ಮಾತನಾಡಿದರು. ಬಿಜೆಪಿ ಯುವ ಮುಖಂಡ, ನಿತ್ಯ ನೂತನ ಸಂಸ್ಥೆ ಅಧ್ಯಕ್ಷ ಬಿ.ಕೆ.ಶಿವಕುಮಾರ್ ಮಾತನಾಡಿದರು. ಈ ವೇಳೆ ಕರುನಾಡ ವಿಜಯಸೇನೆ ಸಂಸ್ಥಾಪಕ ರಾಜ್ಯಾಧ್ಯಕ್ಷ ಹೆಚ್.ಎನ್.ದೀಪಕ್, ಬೆಂಗಳೂರು ಜಿಪಂ ಮಾಜಿ ಅಧ್ಯಕ್ಷ ಮರಿಸ್ವಾಮಿ, ಬಂಡಳ್ಳಿ ಮಠದ ಫಲಹಾರ ಪ್ರಭುದೇವಸ್ವಾಮಿ, ಚಿಕ್ಕಂದುವಾಡಿ ಮಠದ ಬಾಲಷಡಕ್ಷರಿ, ಬಿಜೆಪಿ ಜಿಲ್ಲಾ ಯುವ ಘಟಕ ಪ್ರಧಾನ ಕಾರ್ಯದರ್ಶಿ ಲೋಕೇಶ್ ನಂಜುಂಡ ಸ್ವಾಮಿ, ಬೆಂಗಳೂರು ಜಿಲ್ಲಾಧ್ಯಕ್ಷ ವಿಜಯ ಕುಮಾರ್, ಚಾ.ನಗರ ಜಿಲ್ಲಾಧ್ಯಕ್ಷ ನವೀನ್ ಕುಮಾರ್, ಬ್ಯಂಗೇಶ್ ಇನ್ನಿತರರಿದ್ದರು.

ಮಾಟ–ಮಂತ್ರದ ಬೆದರಿಕೆ ಒಡ್ಡಿ ಸುಲಿಗೆ ಮಾಡಿದ್ದ ಜ್ಯೋತಿಷಿ, ಬಾಲಕ ಬಂಧನ

ಚಾಮರಾಜನಗರ, ಸೆ.11– ಮಾಟ–ಮಂತ್ರದ ಹೆಸರಿನಲ್ಲಿ ಗೃಹಿಣಿಯೊಬ್ಬರಿಂದ ನಗದು ಹಾಗೂ ಚಿನ್ನಾಭರಣ ಸುಲಿಗೆ ಮಾಡಿದ್ದ ಜ್ಯೋತಿಷಿ ಹಾಗೂ ಬಾಲಕನೋರ್ವನನ್ನು ಚಾಮರಾಜನಗರ ಸೆನ್ ಪೊಲೀಸರು ಬಂಧಿಸಿದ್ದಾರೆ.

ಹುಬ್ಬಳ್ಳಿ ಮೂಲದ ಅಶೋಕ್ ಭಟ್ಟ(27) ಹಾಗೂ 17 ವರ್ಷದ ಬಾಲಕ ಬಂಧಿತರು. ಇವರಿಂದ 41,700 ರೂ. ಮೌಲ್ಯದ ಚಿನ್ನಾಭರಣ, 29,500 ರೂ. ನಗದು ಹಾಗೂ 2 ಮೊಬೈಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ತಿ.ನರಸೀಪುರದ ಎಂ.ಕಾವ್ಯ(20) ಯೂಟ್ಯೂಬ್ ಜ್ಯೋತಿಷ್ಯದ ಜಾಹೀರಾತು ನೋಡಿ, ಅಲ್ಲಿದ್ದ ಮೊಬೈಲ್ ನಂಬರ್‌ಗೆ ಕರೆ ಮಾಡಿ, ತಮ್ಮ ಕಷ್ಟ ತಿಳಿಸಿದ್ದಾರೆ. ಈ ವೇಳೆ ತನ್ನನ್ನು ಪಂಡಿತ್ ಸಚ್ಚಿದಾನಂದ ಗುರೂಜೀ ಎಂದು ಪರಿಚಯಿಸಿಕೊಂಡ ವಂಚಕ ನಿಮಗೆ ದೋಷವಿದೆ. ನಿಮ್ಮ ಹಾಗೂ ನಿಮ್ಮ ಗಂಡನ ನಡುವೆ ಹೊಂದಾಣಿಕೆ ಇಲ್ಲ. ನಿಮ್ಮ ಗಂಡ ಮನೆಯವರನ್ನೆಲ್ಲ ಕೊಲೆ ಮಾಡುತ್ತಾರೆ. ಇದಕ್ಕೆ ದೋಷ ಪರಿಹರಿಸಬೇಕು ಎಂದು ವಿವಿಧ ಹಂತಗಳಲ್ಲಿ 32,800 ರೂ. ಆನ್‌ಲೈನ್ ಮೂಲಕ ವರ್ಗಾವಣೆ ಮಾಡಿಸಿಕೊಂಡು, ಚಾಮರಾಜನಗರ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೆ ಆಕೆಯನ್ನು ಕರೆಸಿಕೊಂಡು 13 ಗ್ರಾಂ ತೂಕದ ಚಿನ್ನಾಭರಣ ಪಡೆದು ವಂಚಿಸಿದ್ದ. ಈ ಸಂಬಂಧ ಕಾವ್ಯ ಚಾಮರಾಜನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ಫೋನ್ ನಂಬರ್ ಮೂಲಕ ಗುರುತು ಪತ್ತೆ ಹಚ್ಚಿ ತನಿಖೆ ಕೈಗೊಂಡ ಪೊಲೀಸರು, ಅಶೋಕ್ ಭಟ್ಟ ಹಾಗೂ 17 ವರ್ಷದ ಬಾಲಕನನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದರು. ವಂಚಕ ಜ್ಯೋತಿಷಿಗೆ ನ್ಯಾಯಾಧೀಶರು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಬಾಲ ಆರೋಪಿಯನ್ನು 1 ದಿನ ಬಳಿಕ ಷರತ್ತಿನ ಮೇಲೆ ಬಿಡುಗಡೆಗೊಳಿಸಲಾಗಿದೆ. ಈ ಕುರಿತು ಸೆ.8 ರಂದು 'ಮೈಸೂರುಮಿತ್ರ' ಪತ್ರಿಕೆ ಪುಟ 2ರಲ್ಲಿ ಮಾಟ–ಮಂತ್ರ ಭೀತಿ ಹುಟ್ಟಿಸಿ ನಗದು, ಚಿನ್ನಾಭರಣ ಸುಲಿಗೆ ಶೀರ್ಷಿಕೆಯಡಿ ವರದಿ ಪ್ರಕಟಿಸಿರುವುದನ್ನು ಇಲ್ಲಿ ಸ್ಮರಿಸಬಹುದು.

ಬಂಡೀಪುರದಲ್ಲಿ ಅರಣ್ಯ ಹುತಾತ್ಮರ ದಿನಾಚರಣೆ



ಗುಂಡ್ಲುಪೇಟೆ, ಸೆ.11–ಅರಣ್ಯ ರಕ್ಷಣೆಯಲ್ಲಿ ಸಿಬ್ಬಂದಿಗಳ ಪಾತ್ರ ಮಹತ್ವದ್ದು ಎಂದು ಪಟ್ಟಣದ ಹಿರಿಯ ಸಿವಿಲ್ ಹಾಗೂ ಜೆಎಂಎಫ್‌ಸಿ ನ್ಯಾಯಾಧೀಶ ಬಸವರಾಜ ತಳವಾರ್ ಮೆಚ್ಚುಗೆ ವ್ಯಕ್ತಪಡಿಸಿದರು.

ತಾಲೂಕಿನ ಬಂಡೀಪುರ ಸ್ವಾಗತ ಕೇಂದ್ರದ ಬಳಿ ಆಯೋಜಿಸಿದ್ದ ಅರಣ್ಯ ಹುತಾತ್ಮರ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಅರಣ್ಯ ಸಿಬ್ಬಂದಿ ಮೂಲ ಸೌಕರ್ಯಗಳಿಲ್ಲದ ಅರಣ್ಯದಲ್ಲಿ ಕೆಲಸ ಮಾಡುತ್ತಾ ಅರಣ್ಯ ಸಂರಕ್ಷಿಸುತ್ತಿದ್ದಾರೆ. ಅರಣ್ಯ ರಕ್ಷಣೆ ಸವಾಲಾಗಿದ್ದು, ಸಂರಕ್ಷಣಾ ಅಧಿಕಾರಿ ಹಾಗೂ ಸಿಬ್ಬಂದಿ ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ ಎಂದರು.

ಕಳ್ಳಬೇಟೆಗಾರರಿಗೆ ಕಾಡು, ವನ್ಯಜೀವಿಗಳಿಗೆ ಭಾರೀ ಅಪಾಯ ಎದುರಾಗುತ್ತಿದೆ. ಅರಣ್ಯ ಅಪರಾಧಿಗಳನ್ನು ಬಂಧಿಸಿ ಜೈಲಿಗೆ ಕಳಿಸಿದರೂ ಸಾಕ್ಷ್ಯಾಧಾರದ ಕೊರತೆಯಿಂದ ಹೊರ ಬರುತ್ತಿರುವುದು ವಿಷಾದನೀಯ ಎಂದರು.

ಪ್ರಧಾನ ಸಿವಿಲ್ ಹಾಗೂ ಜೆಎಂಎಫ್‌ಸಿ ನ್ಯಾಯಾಧೀಶ ಶಿವಕುಮಾರ್, ರಾಜ್ಯದ ನಿವೃತ್ತ ಮುಖ್ಯಕಾರ್ಯದರ್ಶಿ ಹಾಗೂ ವಿದ್ಯುತ್ ನಿಯಂತ್ರಣ ಆಯೋಗದ ಅಧ್ಯಕ್ಷ ರವಿಕುಮಾರ್, ಬಂಡೀಪುರ ಹುಲಿ ಯೋಜನೆ ನಿರ್ದೇಶಕ ಡಾ.ಪಿ.ರಮೇಶ್ ಕುಮಾರ್ ಮಾತನಾಡಿದರು. ಹುತಾತ್ಮ ಸ್ಮಾರಕಕ್ಕೆ ಪುಷ್ಪಗುಚ್ಛ ಅರ್ಪಿಸಲಾಯಿತು. ಕರ್ತವ್ಯ ವೇಳೆ ಸಾವಿಗೀಡಾದ ನೌಕರರ ಕುಟುಂಬಕ್ಕೆ ಪರಿಹಾರ ನೀಡಲಾಯಿತು. ಬಂಡೀಪುರ ಉಪವಿಭಾಗದ ಎಸಿಎಫ್ ನವೀನ್, ಗುಂಡ್ಲುಪೇಟೆ ಉಪವಿಭಾಗದ ರವೀಂದ್ರ ಹೆಡಿಯಾಲ ಉಪವಿಭಾಗದ ಕೆ.ಪರಮೇಶ್, ಆರ್‌ಎಫ್‌ಓಗಳಾದ ಶಶಿಧರ್, ಎನ್.ಪಿ.ನವೀನ್ ಕುಮಾರ್, ಡಾ.ಲೋಕೇಶ್, ಶ್ರೀನಿವಾಸ ನಾಯ್ಕ, ನಾಗೇಂದ್ರ ನಾಯ್ಕ, ಪುಟ್ಟರಾಜು ಸೇರಿದಂತೆ ಡಿಆರ್‌ಎಫ್‌ಓಗಳಿದ್ದರು.

ಜಿಲ್ಲಾಸ್ಪತ್ರೆಯಲ್ಲಿ ಇಂದಿನಿಂದ ಮತ್ತೆ ಓಪಿಡಿ ಸೇವೆ

ಚಾಮರಾಜನಗರ, ಸೆ.11–ನಗರದ ಜೋಡಿ ರಸ್ತೆಯಲ್ಲಿರುವ ಹಳೆ ಜಿಲ್ಲಾಸ್ಪತ್ರೆಯಲ್ಲಿ ಸೋಮವಾರದಿಂದ ಹೊರ ರೋಗಿ ವಿಭಾಗ ಮತ್ತೆ ಆರಂಭವಾಗಲಿದೆ.

ಸಾರ್ವಜನಿಕರ ಒತ್ತಾಯ ಹಾಗೂ ಸಚಿವರ ಸೂಚನೆ ಮೇರೆಗೆ ಸಿಮ್ಸ್ ಆಡಳಿತ ಸೋಮವಾರದಿಂದ ನಗರದ ಹಳೆ ಕಟ್ಟಡದಲ್ಲಿ ಹೊರ ರೋಗಿಗಳ ವಿಭಾಗ ಆರಂಭಿಸಲಿದೆ ಎಂದು ಜಿಲ್ಲಾಸ್ಪತ್ರೆ ಸರ್ಜನ್ ಡಾ.ಕೃಷ್ಣಪ್ರಸಾದ್ ಮಾಹಿತಿ ನೀಡಿದ್ದಾರೆ.

ಬೇಗೂರಿನಲ್ಲಿ ಬಸ್ ಹರಿದು ಬೈಕ್ ಸವಾರ ಸಾವು

ಬೇಗೂರು, ಸೆ.11–ಆಯತಪ್ಪಿ ಬಿದ್ದ ವೇಳೆ ಬಸ್ ಹರಿದ ಪರಿಣಾಮ ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಗುಂಡ್ಲುಪೇಟೆ ತಾಲೂಕಿನ ಬೇಗೂರು ಠಾಣೆ ಬಳಿ ಭಾನುವಾರ ನಡೆದಿದೆ.

ಗುಂಡ್ಲುಪೇಟೆ ತಾಲೂಕಿನ ಯಡವನಹಳ್ಳಿ ನಿವಾಸಿ ಗೋವಿಂದ ನಾಯ್ಕ(36) ಮೃತರು. ಇವರು ಬೇಗೂರಿನಿಂದ ಭಾನುವಾರ ಸಂಜೆ ಸ್ವಗ್ರಾಮಕ್ಕೆ ತಮ್ಮ ಬೈಕ್‌ನಲ್ಲಿ ತೆರಳುತ್ತಿದ್ದಾಗ ಗ್ರಾಮದ ಠಾಣೆ ಬಳಿ ನಿಯಂತ್ರಣ ತಪ್ಪಿ ಬೈಕ್‌ನಿಂದ ಕೆಳಗೆ ಬಿದ್ದಿದ್ದಾರೆ. ಈ ವೇಳೆ ಕೇರಳದತ್ತ ಸಂಚರಿಸುತ್ತಿದ್ದ ಬಸ್ ರಸ್ತೆಯಲ್ಲಿ ಬಿದ್ದ ಗೋವಿಂದ ನಾಯ್ಕ ಮೇಲೆ ಹರಿದಿದೆ. ಇದರಿಂದ ಸ್ಥಳದಲ್ಲೇ ಅಸುನೀಗಿದ್ದಾರೆ. ಘಟನೆ ಬಳಿಕ ಬಸ್ ಚಾಲಕ ವಾಹನ ನಿಲ್ಲಸದೆ ಪರಾರಿಯಾಗಿದ್ದಾನೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದು, ವಾಹನ ಗುರುತು ಪತ್ತೆಯಾಗಿಲ್ಲ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಲಾಗಿದ್ದು, ಸ್ಥಳ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿರುವ ಬೇಗೂರು ಠಾಣೆ ಪೊಲೀಸರು, ಮುಂದಿನ ಕ್ರಮ ಕೈಗೊಂಡಿದ್ದಾರೆ.



ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪಡೆದ ಗುಂಡ್ಲುಪೇಟೆ ತಾಲೂಕಿನ ತೊಂಡವಾಡಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕ ಸಿದ್ದರಾಜು ಅವರನ್ನು ತಾಲೂಕು ಪ್ರಾಥಮಿಕ ಶಿಕ್ಷಕರ ಸಂಘದಿಂದ ಅಭಿನಂದಿಸಲಾಯಿತು.

ಟಾರ್ಗೆಟ್ ಲಿಸ್ಟ್‌ನಲ್ಲಿದ್ದ ಸಲ್ಮಾನ್ ಖಾನ್



ಚಂಡೀಗಢ, ಸೆ.11– ಖ್ಯಾತ ಪಂಜಾಬಿ ಗಾಯಕ ಸಿಧು ಮೂಸೆವಾಲಾ ಹತ್ಯೆಗೆ ಸಂಚು ರೂಪಿಸಿದ್ದ ಹಾಗೂ ಈಗಾಗಲೇ ಜೈಲು ಪಾಲಾಗಿರುವ ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯ್ ಟಾರ್ಗೆಟ್ ಲಿಸ್ಟ್‌ನಲ್ಲಿ ಬಾಲಿವುಡ್ ನಟ ಸಲ್ಮಾನ್ ಖಾನ್ ಅವರಿದ್ದರು ಎಂದು ಪಂಜಾಬ್ ಪೊಲೀಸ್ ಮಹಾನಿರ್ದೇಶಕ ಗೌರವ್ ಯಾದವ್ ಬಹಿರಂಗ ಮಾಡಿದ್ದಾರೆ. ಬಾಲಿವುಡ್ ನಟ ಸಲ್ಮಾನ್ ಖಾನ್ ಟಾರ್ಗೆಟ್ ಮಾಡಿದ್ದ ಗ್ಯಾಂಗ್‌ನವರು ಮುಂಬೈನಲ್ಲಿ ಸಾಕಷ್ಟು ಸಮಯವನ್ನು ಕಳೆದಿದ್ದಾರೆ. ಅಲ್ಲದೇ, ಸಾಕಷ್ಟು ಸಂಚಾರ ಕೂಡ ಮಾಡಿದ್ದಾರೆ ಎಂಬುದು ನಮ್ಮ ತನಿಖೆಯಲ್ಲಿ ಬೆಳಕಿಗೆ ಬಂದಿದೆ.

ಅಲ್ಲದೇ, ಸಲ್ಮಾನ್ ಖಾನ್ ಅವರನ್ನು ಗುರಿಯಾಗಿಸಿಕೊಂಡಿರುವ ಕಾರಣವಿನ್ನೂ ಪ್ರಾಥಮಿಕವಾಗಿ ದೃಢೀಕರಿಸಲ್ಪಟ್ಟಿಲ್ಲ. ಮುಂಬೈಗೆ ತಂಡವನ್ನು ನಾವು ಕಳುಹಿಸಲು ತೀರ್ಮಾನಿಸಿದ್ದೇವೆ ಎಂದರು. ಯುವ ಅಕಾಲಿ ದಳದ ನಾಯಕ ವಿಕ್ಕಿ ಮಿದ್ದುಖೇರಾ ಹತ್ಯೆಗೆ ಪ್ರತೀಕಾರ ತೀರಿಸಿಕೊಳ್ಳಲು ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್‌ನ ಸೂಚನೆ ಮೇರೆಗೆ ಮೂಸೆವಾಲಾ ಹತ್ಯೆಗೆ ಈ ಹಿಂದೆಯೂ ಉದ್ದೇಶಿಸಲಾಗಿತ್ತು ಎಂದು ಪಂಡಿತ್ ವಿಚಾರಣೆ ವೇಳೆ ಬಹಿರಂಗಪಡಿಸಿದ್ದಾನೆ ಎಂದು ಡಿಜಿಪಿ ಗೌರವ್ ಯಾದವ್ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಫಿರಂಗಿ ತಾಲೀಮು

ಅರಮನೆಗೆ ಬರಮಾಡಿಕೊಳ್ಳಲಾಗಿತ್ತು. ಎರಡನೇ ಗಜಪಡೆ ತಂಡವನ್ನು ಅರಣ್ಯ ಸಚಿವ ಉಮೇಶ್ ಕತ್ತಿ ನಿಧನದ ಹಿನ್ನೆಲೆ ಗಜಪಡೆ ಸ್ವಾಗತ ಕಾರ್ಯಕ್ರಮ ರದ್ದಾಗಿತ್ತು. ಈ ಹಿನ್ನೆಲ್ಲೆಯಲ್ಲಿ ಸೆ.7ರಂದು ಶ್ರೀರಾಮ, ವಿಜಯ, ಸುಗ್ರೀವ, ಪಾರ್ಥಸಾರಥಿ ಸೇರಿ ಗೋಪಿ ನೇತೃತ್ವದ ಐದು ಆನೆಗಳನ್ನು ಸರಳವಾಗಿ ಬರಮಾಡಿಕೊಳ್ಳಲಾಗಿತ್ತು.

ವಿವಿಧ ಹಂತದ ತಾಲೀಮು: ಮೊದಲ ಹಂತದಲ್ಲಿ ಆಗಮಿಸಿದ ಗಜಪಡೆಗೆ ಆ.11ರ ಬೆಳಗ್ಗೆ ತೂಕ ಪರೀಕ್ಷೆ ಮಾಡಲಾಯಿತು. ನಂತರ ಆ.12ರಿಂದ ಅರಮನೆ ಆವರಣದಲ್ಲೇ ಎರಡು ದಿನಗಳ ಕಾಲ ಪ್ರತಿದಿನ ಬೆಳಗ್ಗೆ ಹಾಗೂ ಸಂಜೆ ತಾಲೀಮು ಆರಂಭಿಸಲಾಗಿತ್ತು. ಆ.14ರಂದು ಗಜಪಡೆಯನ್ನು ಅರಮನೆ ಹೊರಭಾಗದಲ್ಲಿ ಆರಂಭವಾದ ತಾಲೀಮು ಚಾಮರಾಜ ಒಡೆಯರ್ ಸರ್ಕಲ್, ಆಲ್ಬರ್ಟ್ ವಿಕ್ಟರ್ ರೋಡ್, ಕೆ.ಆರ್.ಸರ್ಕಲ್, ಬಂಬೂ ಬಜಾರ್, ಹೈವೆ ಸರ್ಕಲ್ ಮೂಲಕ ಬನ್ನಿಮಂಟಪದ ಪಂಜಿನಕವಾಯತ್ ಮೈದಾನದವರೆಗೂ ಒಂದು ವಾರಗಳ ಕಾಲ ತಾಲೀಮು ನಡೆಸಿದ್ದು, ಈ ವೇಳೆ ಆನೆಗಳು ಯಾವುದೇ ಅಳುಕಿಲ್ಲದೆ ರಾಜ ಬೀದಿಯಲ್ಲಿ ಸರಗವಾಗಿ ಹೆಜ್ಜೆ ಹಾಕಿ ಸೈ ಎನಿಸಿಕೊಂಡಿದ್ದವು. ಜಂಬೂಸವಾರಿ ಸಾಗುವ ಮಾರ್ಗದಲ್ಲಿ ಕೆಲವು ದಿನ ತಾಲೀಮು ನಡೆಸಿ ಆ ನಂತರ ಹಂತ ಹಂತವಾಗಿ ಭಾರ ಹೊರುವ ತಾಲೀಮು ಆರಂಭಿಸಿ ನಂತರ ಮರದ ಅಂಬಾರಿ ಹೊರುವ ತಾಲೀಮು ಆರಂಭಿಸಲಾಗಿತ್ತು. ಈ ವೇಳೆಗೆ ಗಜಪಡೆಯ ಎರಡನೇ ತಂಡವು ಆಗಮಿಸಿ ಮೊದಲ ತಂಡ ಸೇರಿಕೊಂಡು ಕೆಲ ದಿನಗಳ ನಂತರ ಒಟ್ಟಿಗೆ ತಾಲೀಮು ಆರಂಭಿಸಿ. 14 ಆನೆಗಳು ಅರಮನೆಯಿಂದ ಬನ್ನಿಮಂಟಪದ ವರೆಗೂ ಸರಾಗವಾಗಿ ಹೆಜ್ಜೆ ಹಾಕಿ ಸೈ ಎನಿಸಿಕೊಂಡಿವೆ.

ಇಂದು ಫಿರಂಗಿ ತಾಲೀಮು: ದಸರಾ ಜಂಬೂಸವಾರಿಗೆ ಗಜಪಡೆಗಳ ತಾಲೀಮು ಭರದಿಂದ ನಡೆಯುತ್ತಿರುವ ಬೆನ್ನಲ್ಲೇ ಜಂಬೂಸವಾರಿಯಲ್ಲಿ ಪಾಲ್ಗೊಳ್ಳಲಿರುವ ಗಜಪಡೆ ಮತ್ತು ಅಶ್ವರೋಹಿ ದಳದ ಕುದುರೆಗಳು ಭಾರೀ ಶಬ್ದಗಳಿಗೆ ಬೆಚ್ಚದಂತೆ ಫಿರಂಗಿ ತಾಲೀಮು ನಡೆಸುವ ಕಾರ್ಯಕ್ಕೆ ಸಿದ್ಧತೆ ಆರಂಭವಾಗಿದ್ದು, ಅರಮನೆಯಲ್ಲಿದ್ದ ಹನ್ನೊಂದು ಫಿರಂಗಿಗಾಡಿಗಳನ್ನು ಹೊರತೆಗೆದು ಅವುಗಳನ್ನು ಸ್ವಚ್ಛಗೊಳಿಸಿದ ಬಳಿಕ ಸಂಪ್ರದಾಯದಂತೆ ಪೂಜೆ ಸಲ್ಲಿಸಲಾಗಿದ್ದು, ಕೋಟೆ ಮಾರಮ್ಮ ದೇವಾಲಯದ ಆವರಣದಲ್ಲಿ ಇಂದು 12 ಗಂಟೆಗೆ ಮೂರು ಸುತ್ತಿನ ಕುಶಾಲತೋಪು ಸಿಡಿಸುವ ಮೂಲಕ ಆನೆ ಮತ್ತು ಕುದುರೆಗಳಿಗೆ ಸಿಡಿಮದ್ದಿನ ತಾಲೀಮನ್ನು ನಡೆಸಲಾಗುತ್ತದೆ.

ಪಿಯುಸಿ ಪೂರಕ ಫಲಿತಾಂಶ ಪ್ರಕಟ

ವಿಷಯದಲ್ಲಿ ಮತ್ತು ಒಟ್ಟಾರೆಯಾಗಿ ಕನಿಷ್ಠ 35 ಪ್ರತಿಶತ ಗಳಿಸಿರುವುದು ಕಡ್ಡಾಯವಾಗಿದೆ. ವಿದ್ಯಾರ್ಥಿಗಳು ಸರ್ಕಾರದ ಅಧಿಕೃತ ವೆಬ್‌ಸೈಟ್ karresults. nic.in, pue. karnataka.gov.in ಅಥವಾ pue.kar.nic.in ವೆಬ್‌ಸೈಟ್‌ನಲ್ಲಿ ಫಲಿತಾಂಶ ನೀಡಬಹುದು. ಮೊದಲು ವೆಬ್‌ಸೈಟ್‌ಗೆ ಭೇಟಿ ನೀಡಿ. ನಂತರ ನೋಂದಣಿ ಸಂಖ್ಯೆ, ಹುಟ್ಟಿದ ದಿನಾಂಕ ಮತ್ತು ವಿಷಯ ಸಂಯೋಜನೆ ವಿವರಗಳನ್ನು ನಿಗದಿತ ಸ್ಥಳದಲ್ಲಿ ಹಾಕಬೇಕು. ಅಲ್ಲಿ ಕರ್ನಾಟಕ ದ್ವಿತೀಯ ಪಿಯುಸಿ ಪೂರಕ ಫಲಿತಾಂಶವು ಎಂದು ತೋರಿಸುತ್ತದೆ. ಅದರ ಮೇಲೆ ಕ್ಲಿಕ್ ಮಾಡಿ ಅಂಕಪಟ್ಟಿಯನ್ನು ಡೌನ್‌ಲೋಡ್ ಮಾಡಬಹುದು. ಜತೆಗೆ ಅಂಕಪಟ್ಟಿಯನ್ನು ಡೌನ್‌ಲೋಡ್ ಮಾಡಿಕೊಂಡು ಪ್ರಿಂಟ್ ತೆಗೆದುಕೊಳ್ಳಲು ಸಹ ಸರ್ಕಾರ ಅವಕಾಶ ಮಾಡಿಕೊಟ್ಟಿದೆ. ಕರ್ನಾಟಕ 2ನೇ ಪಿಯುಸಿ ಪೂರಕ ಪರೀಕ್ಷೆಯು ಕಳೆದ ತಿಂಗಳೂ ಆಗಸ್ಟ್ 12ರಿಂದ 25ರವರೆಗೆ ನಡೆದಿತ್ತು. 6,84,255 ವಿದ್ಯಾರ್ಥಿಗಳು ಪರೀಕ್ಷೆಗೆ ಹೆಸರು ನೋಂದಾಯಿಸಿಕೊಂಡಿದ್ದರು. ಈ ಪೈಕಿ 6,83,563 ಮಂದಿ ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಿದ್ದರು.

ಪರಿಹಾರದ ಮೊತ್ತ 50 ಲಕ್ಷಕ್ಕೆ ಏರಿಕೆ

ಜೊತೆ ಇರಬೇಕಿತ್ತು, ಜನಸೇವೆ ಮಾಡಬೇಕಿತ್ತು ಎಂದು ಸಿಎಂ ಸ್ಮರಿಸಿದರು.



ಈ ವರ್ಷ ಅರಣ್ಯ ಹೆಚ್ಚಿಸಲು ವಿಶೇಷ ಕಾರ್ಯಕ್ರಮಗಳನ್ನು ಇಲಾಖೆ ಮಾಡಿದೆ. 21% ಅರಣ್ಯವನ್ನು 30%ಗೆ ಹೆಚ್ಚಿಸೋದು ನಮ್ಮ ಗುರಿ. ಬಂಜರು ಭೂಮಿ, ಗುಡ್ಡಗಾಡುಗಳಲ್ಲಿ ಗಿಡಮರ ಬೆಳೆಸಲು ಇದೇ ವೇಳೆ ಸಿಎಂ ಮನವಿ ಮಾಡಿದರು. 'ಒಂದು ವರ್ಷದಲ್ಲಿ ಆಗುವ ಪರಿಸರ ನಷ್ಟವನ್ನು ಅದೇ ವರ್ಷ ತುಂಬುವ ಕೆಲಸ ಮಾಡಬೇಕು. ಪರಿಸರ ಆಯವ್ಯಯ ರೂಪಿಸಿದ ಪ್ರಥಮ ರಾಜ್ಯ ನಮ್ಮದು. 100 ಕೋಟಿಯನ್ನು ಇದಕ್ಕೆ ಮೀಸಲಿಡಲಾಗಿದೆ. ಈಗಾಗಲೇ ಪರಿಸರ ಆಯವ್ಯಯ ಮಾಡುವ ಬಗೆಯನ್ನು ಇಲಾಖೆ ರೂಪಿಸಿದೆ. ಸರ್ಕಾರ ಕ್ರಿಯಾಯೋಜನೆಗೆ ಅನುಮೋದನೆ ಕೂಡ ನೀಡಿದೆ. ಈ ವರ್ಷ 100 ಕೋಟಿಯಲ್ಲಿ ಅರಣ್ಯೀಕರಣ ಹೆಚ್ಚಿಗೆ ಮಾಡಲಾಗುವುದು. ಅರಣ್ಯ ಸೂಕ್ಷ್ಮ ಪ್ರದೇಶಗಳನ್ನು ಉಳಿಸಿಕೊಳ್ಳಲು ವಿಶೇಷ ಕಾರ್ಯಕ್ರಮವನ್ನು ಅರಣ್ಯ ಇಲಾಖೆ ಮಾಡಿದೆ. ಈ ವರ್ಷ ಕ್ರಿಯಾಯೋಜನೆಯನ್ನು ಅನುಷ್ಠಾನ ಮಾಡುವ ಮೂಲಕ ಹೊಸ ಮಾದರಿಯನ್ನು ಸಿದ್ಧಪಡಿಸಿ ಬರುವ ದಿನಗಳಲ್ಲಿ ಅರಣ್ಯ ಪ್ರದೇಶ ಹೆಚ್ಚಿಸಬಹುದು' ಎಂದರು. ಅರಣ್ಯ ಹುತಾತ್ಮರ ದಿನಾಚರಣೆಯಲ್ಲಿ ಉಮೇಶ್ ಕತ್ತಿಯವರಿಗೆ 1 ನಿಮಿಷ ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಅರ್ಪಿಸಲಾಯಿತು.

ವಿದ್ಯಾರ್ಥಿ ನಿಗೂಢ ನಾಪತ್ತೆ

ಕೆರಗೋಡು ಠಾಣೆ ಪೊಲೀಸರು ನಾಪತ್ತೆಯಾದ ವಿದ್ಯಾರ್ಥಿ ಪತ್ತೆಗೆ ಹುಡುಕಾಡ ನಡೆಸಿದ್ದಾರೆ.

ವಿವರ: ಪಾಂಡವಪುರ ತಾಲೂಕು ಹಿರೇಮಾರನಹಳ್ಳಿ ಗ್ರಾಮದ ಈರೇಗೌಡ ಎಂಬುವರ ಪುತ್ರ ಹೆಚ್.ಜಿ.ಕಿಶೋರ್(14) ನಿಗೂಢವಾಗಿ ಕಣ್ಮರೆಯಾದವನಾಗಿದ್ದು, ಕಳೆದ ಮೂರು ವರ್ಷದಿಂದ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ 9ನೇ ತರಗತಿ ವಿದ್ಯಾರ್ಥಿಯಾದ ಈತನನ್ನು ತಂದೆ ಈರೇಗೌಡರು ಜುಲೈ 29ರಂದು ಶಾಲೆಯಿಂದ ತಮ್ಮ ಮನೆಗೆ ಕರೆದೊಯ್ದು, ಆ.10ರಂದು ಬೆಳಗ್ಗೆ 11.50ರ ಸುಮಾರಿನಲ್ಲಿ ವಾಪಸ್ ಶಾಲೆಗೆ ಕರೆತಂದು ಬಿಟ್ಟಿದ್ದಾರೆ. ನಂತರ ಗೌರಿ ಹಬ್ಬಕ್ಕೆ ಮಗನನ್ನು ಕರೆದೊಯ್ಯಲು ಆ.29ರಂದು ಅವರು ಶಾಲೆಗೆ ಬಂದಾಗ ಪ್ರಾಂಶುಪಾಲರು, ನಿಮ್ಮ ಮಗ ಶಾಲೆಗೇ ಬಂದಿಲ್ಲ ಎಂದು ಉತ್ತರಿಸಿದ್ದಾರೆ.

ಇದರಿಂದ ಆತಂಕಗೊಂಡ ಈರೇಗೌಡರು, ತಾವು ಆ.10ರಂದು ಶಾಲೆಗೆ ಆತನನ್ನು ಬಿಟ್ಟು ಹೋಗಿದ್ದಾಗಿ ತಿಳಿಸಿದ್ದಾರೆ. ತಕ್ಷಣವೇ ಸಿಸಿ ಕ್ಯಾಮರಾ ದೃಶ್ಯಗಳನ್ನು ಪರಿಶೀಲಿಸಿದಾಗ ವಿದ್ಯಾರ್ಥಿ ಕಿಶೋರ್ ಶಾಲೆ ಪ್ರವೇಶಿಸಿರುವುದು ಕಂಡು ಬಂದಿದೆ. ಆತನ ಕೊಠಡಿ ಪರಿಶೀಲನೆ ನಡೆಸಿದ ವೇಳೆ ಬಟ್ಟೆ ಹಾಗೂ ಪುಸ್ತಕಗಳ ಜೊತೆ ಪತ್ರವೊಂದು ದೊರೆತಿದೆ. ಈ ಪತ್ರದಲ್ಲಿ 'ನನಗೆ ಈ ಶಾಲೆಯಲ್ಲಿ ಓದಲು ಇಷ್ಟವಿಲ್ಲ. ಸಾಕಷ್ಟು ಸಲ ಹೇಳಲು ಪ್ರಯತ್ನಿಸಿದ್ದೇನೆ. ಅಪ್ಪ–ಚಿಕ್ಕಪ್ಪ ನನ್ನನ್ನು ಹುಡಕಬೇಡಿ' ಎಂದು ಬರೆಯಲಾಗಿದೆ. ಆದರೆ ಈ ಪತ್ರ ತಮ್ಮ ಪುತ್ರನದು ಅಲ್ಲ ಎಂದು ಈರೇಗೌಡರು ನಿರಾಕರಿಸಿದರೆ, ಶಾಲೆ ಶಿಕ್ಷಕರಂತೂ ಪತ್ರದಲ್ಲಿರುವ ಕೈಬರಹ ಕಿಶೋರ್‌ನದ್ದೇ ಎಂದು ಹೇಳುತ್ತಿದ್ದಾರೆ.

ವಿದ್ಯಾರ್ಥಿ ಕಿಶೋರ್ ಆ.10ರಂದು ಶಾಲೆಗೆ ಬಂದಿದ್ದಾನೆ. ನಂತರ ಆತ ನಾಪತ್ತೆಯಾಗಿದ್ದಾನೆ. ಆದರೆ ವಿದ್ಯಾರ್ಥಿಯೋರ್ವ ನಾಪತ್ತೆಯಾಗಿರುವ ವಿಚಾರ ಹಾಸ್ಟೆಲ್‌ನ ವಾರ್ಡನ್ ಅಥವಾ ಸಿಬ್ಬಂದಿ ಗಮನಕ್ಕೇ ಬಂದಿಲ್ಲ. ವಿದ್ಯಾರ್ಥಿಯ ತಂದೆ ಹೋಗಿ ವಿಚಾರಿಸಿದ ನಂತರವೇ ಆತ ನಾಪತ್ತೆಯಾಗಿರುವುದು ವಾರ್ಡನ್ ಗಮನಕ್ಕೆ ಬಂದಿದೆ. ವಿದ್ಯಾರ್ಥಿಯೋರ್ವ ಸತತ 19 ದಿನ ಗೈರು ಹಾಜರಾಗಿದ್ದರೂ, ಶಾಲೆಯ ಪ್ರಾಂಶುಪಾಲರಾಗಲೀ, ಶಿಕ್ಷಕರಾಗಲೀ ಅದನ್ನು ಗಂಭೀರವಾಗಿ ಪರಿಗಣಿಸಲೇ ಇಲ್ಲ ಎಂಬುದು ಆತಂಕಕಾರಿ ವಿಚಾರವಾಗಿದೆ. ವಿದ್ಯಾರ್ಥಿ ತಮ್ಮದೇ ಹಾಸ್ಟೆಲ್‌ನಿಂದ ನಾಪತ್ತೆಯಾಗಿರುವುದು ತಿಳಿದ ನಂತರವೂ ವಾರ್ಡನ್ ಆಗಲೀ, ಮೊರಾರ್ಜಿ ವಸತಿ ಶಾಲೆಯ ಪ್ರಾಂಶುಪಾಲರಾಗಲೀ ಪೊಲೀಸರಿಗೆ ದೂರನ್ನೇ ಸಲ್ಲಿಸಿಲ್ಲ. ಬದಲಾಗಿ ವಿದ್ಯಾರ್ಥಿಯ ತಂದೆ ಈರೇಗೌಡರೇ ಆ.30ರಂದು ಮಧ್ಯಾಹ್ನ ಕೆರಗೋಡು ಠಾಣೆಗೆ ಹೋಗಿ ದೂರು ನೀಡಿದ್ದಾರೆ.

ಕಾಂಗ್ರೆಸ್ ಆಡಳಿತಾವಧಿಯಲ್ಲಿ 100 ಪರ್ಸೆಂಟ್ ಕಮಿಷನ್ ಆರೋಪ

ಧೈರ್ಯವಿದ್ದರೆ ಸಿಬಿಐ ತನಿಖೆಗೆ ಆದೇಶಿಸಿ

● ಸಿಎಂಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಸವಾಲು ● ಚುನಾವಣೆಗೆ ಆರೇಳು ತಿಂಗಳು ಇರುವಾಗ ಹೇಳುವ ನೀವು, ವಿಪಕ್ಷ ಸ್ಥಾನದಲ್ಲಿದ್ದಾಗ ಏನು ಮಾಡುತ್ತಿದ್ರಿ?



ಮೈಸೂರು,ಸೆ.11(ಪಿಎಂ)– ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ 100 ಪರ್ಸೆಂಟ್ ಕಮಿಷನ್ ಇತ್ತೆಂಬ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆರೋಪದ ವಿರುದ್ಧ ಕಿಡಿಕಾರಿದ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಚುನಾವಣೆಗೆ ಆರೇಳು ತಿಂಗಳು ಇರುವಾಗ ಹೀಗೆ ಹೇಳುತ್ತಿದ್ದೀರಲ್ಲಾ. ವಿಪಕ್ಷ ಸ್ಥಾನದಲ್ಲಿದ್ದಾಗ ಏನು ಮಾಡುತ್ತಿದ್ರಿ? ನಿಮಗೆ ಧೈರ್ಯವಿದ್ದರೆ ಈ ಬಗ್ಗೆ ಸಿಬಿಐ ತನಿಖೆಗೆ ಆದೇಶಿಸಿ ಎಂದು ಸವಾಲು ಹಾಕಿದರು.

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದೊಡ್ಡಬಳ್ಳಾಪುರದ ಬಿಜೆಪಿ ಜನಸ್ಪಂದನ ಸಮಾವೇಶ ಕೇವಲ ಕಾಂಗ್ರೆಸ್ ಟೀಕೆಗೆ ಸೀಮಿತವಾಗಿತ್ತು. ಮುಖ್ಯಮಂತ್ರಿಯಾದಿಯಾಗಿ ಕಾಂಗ್ರೆಸ್ ವಿರುದ್ಧ ಟೀಕಾ ಪ್ರಹಾರ ನಡೆಸಿದ್ದು ಬಿಟ್ಟರೆ, ಜನರ ಸಮಸ್ಯೆ ಆಲಿಸಿ, ಸ್ಪಂದಿಸಿ ಪರಿಹಾರಕ್ಕೆ ಪೂರಕ ಕಾರ್ಯಕ್ರಮ ರೂಪಿಸುವ ಯಾವುದೇ ಲಕ್ಷಣ ಅಲ್ಲಿ ಗೋಚರಿಸಲಿಲ್ಲ. ನಾಮಕಾವಸ್ತೆಯ ಜನಸ್ಪಂದನ ಸಮಾವೇಶ ಇದಾಗಿತ್ತು. ಕಾಂಗ್ರೆಸ್ ಗುರಿಯಾಗಿಸಿ ಟೀಕಾಪ್ರಹಾರ ನಡೆಸಲು ಸಮಾವೇಶ ಸೀಮಿತವಾಗಿತ್ತು ಎಂದು ಖಂಡಿಸಿದರು.

100 ಪರ್ಸೆಂಟ್ ಅನ್ನು ನಮ್ಮ ಸರ್ಕಾರದ ಅವಧಿಯಲ್ಲಿ ತೆಗೆದುಕೊಂಡಿದ್ದರೆ, ನೀವು ಅಧಿಕಾರಕ್ಕೆ ಬಂದು 3 ವರ್ಷವಾಗಿದ್ದು, ಈ ಅವಧಿಯಲ್ಲಿ ನಿಮ್ಮ ಡಬಲ್ ಇಂಜಿನ್ ಸರ್ಕಾರ ಏಕೆ ಕ್ರಮ ಕೈಗೊಳ್ಳಲಿಲ್ಲ. ಏಕೆ ತನಿಖೆಗೆ ಆದೇಶಿಸಲಿಲ್ಲ. ಸಿಎಂ ಬಸವರಾಜ ಬೊಮ್ಮಾಯಿ ಅವರು 'ನಿಮಗೆ ತಾಕತ್ತು ಇದ್ದರೆ, ಧಮ್ ಇದ್ದರೆ' ಎಂಬ ಪದ ಪ್ರಯೋಗದ ಮೂಲಕ 2023ಕ್ಕೆ ಬಿಜೆಪಿ ಅಧಿಕಾರಕ್ಕೆ ಬರುವುದನ್ನು ತಡೆಯಲಿ ನೋಡೋಣ ಎಂದು ಸವಾಲು ಹಾಕಿದ್ದಾರೆ. ಮುಖ್ಯಮಂತ್ರಿ ಸ್ಥಾನದಲ್ಲಿದ್ದೂ ಈ ರೀತಿ ಪದ ಪ್ರಯೋಗ ಆ ಸ್ಥಾನಕ್ಕೆ ತಕ್ಕದಲ್ಲ ಎಂದು ಕಿಡಿಕಾರಿದರು.

ರೋಮ್ ದೊರೆಯಂತಹ ಸರ್ಕಾರವಿದು: ರೋಮ್ ಹೊತ್ತಿ ಉರಿಯುತ್ತಿದ್ದಾಗ ಅಲ್ಲಿನ ದೊರೆ ಪಿಟೀಲು ಬಾರಿಸುತ್ತಿದ್ದ ನಂತೆ. ಅದೇ ರೀತಿಯಾಗಿ ಈ ರಾಜ್ಯ ಬಿಜೆಪಿ ಸರ್ಕಾರ ವರ್ತಿಸುತ್ತಿದೆ. ಪ್ರವಾಹದ ಹಿನ್ನೆಲೆಯಲ್ಲಿ ರಾಜ್ಯದ ಜನತೆ ಸಂಕಷ್ಟದಲ್ಲಿದ್ದು, ಇಂತಹ ಪರಿಸ್ಥಿತಿಯಲ್ಲಿ ಜನಸ್ಪಂದನ ಸಮಾವೇಶದಲ್ಲಿ ಪರಿಹಾರ ಕ್ರಮಗಳ ಬಗ್ಗೆ ಮಾತನಾಡುವುದು ಬಿಟ್ಟು ಡ್ಯಾನ್ಸ್, ಮೋಜು ಮಾಡಿದ್ದಾರೆ ಎಂದು ಟೀಕಿಸಿದರು.

ಚಾಮರಾಜನಗರ, ಯಳಂದೂರು ತಾಲೂಕುಗಳಲ್ಲಿ ನಿನ್ನೆ ಪ್ರವಾಸ ಕೈಗೊಂಡಿದ್ದೆ. ಅಲ್ಲಿ ಜನತೆಯ ಸಂಕಷ್ಟ ಮನಕುಲುಕಿತು. ಬೆಳೆ ನಷ್ಟದಲ್ಲಿ ರೈತರು ತತ್ತರಿಸಿದ್ದಾರೆ. ಪರಿಹಾರ ಸಂಬಂಧ ಯಾವುದೇ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿಲ್ಲ. ಮನೆ ಕಳೆದುಕೊಂಡವರಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಂತೆ ಹೇಳಿರುವುದು ಬಿಟ್ಟರೆ, ಪರಿಹಾರ ನೀಡಲು ಕ್ರಮ ವಹಿಸಿಲ್ಲ. ಇದೇ ಪರಿಸ್ಥಿತಿ ಇಡೀ ರಾಜ್ಯದಲ್ಲಿದೆ ಎಂದರು.

ಸಿಎಂ ಬಸವರಾಜ ಬೊಮ್ಮಾಯಿಯವರು ಅನ್ನಭಾಗ್ಯ ಯೋಜನೆ ಸಂಬಂಧ ಕೇಂದ್ರ ಸರ್ಕಾರ ಕೊಡುವ ಅಕ್ಕಿಗೆ ಸಿದ್ದರಾಮಯ್ಯ ಅವಧಿಯಲ್ಲಿ ಕೇವಲ ಚೀಲ ಮಾತ್ರ ಕೊಡುತ್ತಿದ್ದರು ಎಂದು ಟೀಕಿಸಿದ್ದಾರೆ. ಕೇಂದ್ರದಲ್ಲಿ ಯುಪಿಎ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಅಂದಿನ ಪ್ರಧಾನಿ ಡಾ.ಮನಮೋಹನ್ ಸಿಂಗ್, ಆಹಾರ ಭದ್ರತಾ ಕಾಯ್ದೆ ಜಾರಿಗೊಳಿಸಿ, ಇಡೀ ದೇಶದಾದ್ಯಂತ ಎಲ್ಲಾ ಬಿಪಿಎಲ್ ಕುಟುಂಬಗಳಿಗೆ ಮೂರು ರೂ.ಗೆ ಕೆಜಿ ಅಕ್ಕಿ ಮತ್ತು ಗೋದಿ ಕೊಡಲು ಚಾಲನೆ ನೀಡದರು. ಅದನ್ನೇ ಸಿದ್ದರಾಮಯ್ಯ ಅವಧಿಯಲ್ಲಿ ಉಚಿತವಾಗಿ ಅಕ್ಕಿ ಕೊಡುವುದನ್ನು ಆರಂಭಿಸಲಾಯಿತು. ಅದನ್ನು ಮೋದಿಯವರು ಕೊಟ್ಟ ಅಕ್ಕಿ ಎಂದು ಹೇಳುತ್ತೀರಾಲ್ಲ ಎಂದು ಕಿಡಿಕಾರಿದರು.

ಯೋಗ್ಯತೆಯಿಂದಲ್ಲ, ಯೋಗದಿಂದ ಸಿಎಂ ಸ್ಥಾನ: ಮುಖ್ಯಮಂತ್ರಿ ಸ್ಥಾನಕ್ಕೆ ನೀವು ಯೋಗದಿಂದ ಬಂದವರು. ಯೋಗ್ಯತೆಯಿಂದ ಅಲ್ಲ. ಯೋಗ್ಯತೆಯಿಂದ ಬರುವುದು ಎಂದೂ ಶಾಶ್ವತ. ಯೋಗದಿಂದ ಬರುವುದು ಶ್ವಾತವಲ್ಲ ಎಂದು ಬಸವರಾಜ ಬೊಮ್ಮಾಯಿ ವಿರುದ್ಧ ಟೀಕಾಪ್ರಹಾರ ನಡೆಸಿದರು.

ಕಾಂಗ್ರೆಸ್–ಬಿಜೆಪಿ ಸರ್ಕಾರದ ಅವಧಿಯ ಹೋಲಿಕೆಯೊಂದಿಗೆ ಶ್ವೇತಪತ್ರ ಹೊರಡಿಸಲಿ

ಮೈಸೂರು,ಸೆ.11(ಪಿಎಂ)– ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಅವಧಿ ಹಾಗೂ ತಮ್ಮ ಸರ್ಕಾರದ ಅವಧಿಯನ್ನು ಹೋಲಿಕೆ ಮಾಡಿ ರಾಜ್ಯದ ಪ್ರತಿಯೊಬ್ಬ ವ್ಯಕ್ತಿಯ ಆದಾಯ ಮಟ್ಟ ಹಾಗೂ ಕಾರ್ಯಕ್ರಮಗಳ ಬಗ್ಗೆ ಧೈರ್ಯವಿದ್ದರೆ ಶ್ವೇತಪತ್ರ ಹೊರಡಿಸಿ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಆರ್.ಧ್ರುವನಾರಾಯಣ್ ಸವಾಲೊಡ್ಡಿದರು.

ಕಾಂಗ್ರೆಸ್ ಸರ್ಕಾರ ಬಡಜನತೆಗಾಗಿ ನೀಡಿದ ಕಾರ್ಯಕ್ರಮಗಳನ್ನು ನಿಮ್ಮ ಸರ್ಕಾರ ರದ್ದು ಮಾಡಿದೆ. ಎಸ್‌ಸಿ, ಎಸ್‌ಟಿ, ಹಿಂದುಳಿದ ವರ್ಗ, ಅಲ್ಪಸಂಖ್ಯಾತ ಸಮುದಾಯಗಳಿಗೆ ನೀಡಿದ್ದ ಅನುದಾನ ಕಡಿತ ಮಾಡಿದೆ. ನಿಮಗೆ ಯಾವ ನೈತಿಕತೆ ಇದೆ ಎಂದು ಕಿಡಿಕಾರಿದರು. ಇವರದು ಜನಸ್ಪಂದನ ಅಲ್ಲ. ಮೋಜಿನ ಔತಣಕೂಟವಾಗಿತ್ತು. ಬೇಜವಾಬ್ದಾರಿತನ ಇವರಲ್ಲಿದ್ದು, ಜನಪ್ರತಿನಿಧಿಗಳಾಗಲು ಇವರು ಲಯಾಕಲ್ಲ. 2023ರ ಚುನಾವಣೆಯಲ್ಲಿ ರಾಜ್ಯದ ಜನತೆ ಇವರಿಗೆ ತಕ್ಕ ಉತ್ತರ ನೀಡಲಿದ್ದಾರೆ. ಇವರ ವೈಫಲ್ಯಗಳ ಸರಮಾಲೆಯೇ ಇದ್ದು, ಭ್ರಷ್ಟಾಚಾರ ವ್ಯಾಪಕವಾಗಿದೆ. ಇದೆಲ್ಲವನ್ನು ಜನತೆ ಗಮನಿಸುತ್ತಿದ್ದು, ಮುಂದಿನ ಚುನಾವಣೆಯಲ್ಲಿ ಜನತೆ ಕಾಂಗ್ರೆಸ್ ಕೈ ಹಿಡಿಯುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಟೀಲ್ ಭಜನಾ ಮಂಡಲಿ ಅಧ್ಯಕ್ಷರಾಗುವುದು ಒಳ್ಳೆಯದು: ಯಡಿಯೂರಪ್ಪ ಸಾರಥ್ಯ, ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಬಿಜೆಪಿ ಮುಂದಿನ ಚುನಾವಣೆ ಎದುರಿಸಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲ್ ಹೇಳಿದ್ದಾರೆ. ಹಾಗಾದರೆ ರಾಜ್ಯಾಧ್ಯಕ್ಷರಾಗಿ ಇವರ ಪಾತ್ರ ವೇನು? ಎಂದು ಪ್ರಶ್ನಿಸಿದರಲ್ಲದೆ, ಭಜನಾ ಮಂಡಲಿ ಅಧ್ಯಕ್ಷರಾಗುವುದು ತಮಗೆ ಒಳ್ಳೆಯ ಹುದ್ದೆ ಎಂದು ನಳೀನ್‌ಕುಮಾರ್ ಕಟೀಲ್ ವಿರುದ್ಧ ಟೀಕಾಪ್ರಹಾರ ನಡೆಸಿದರು.

ಸಮಾವೇಶದಲ್ಲಿ ಕೇಂದ್ರ ಸಚಿವೆ ಸ್ಮೃತಿ ಇರಾನಿಯವರು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ಟೀಕಾಪ್ರಹಾರ ನಡೆಸಿದ್ದಾರೆ. ಇವರು ಹೆಚ್‌ಆರ್‌ಡಿ ಸಚಿವರಾಗಿದ್ದಾಗ ತಮ್ಮ ವಿದ್ಯಾಭ್ಯಾಸ ಸಂಬಂಧ ಸುಳ್ಳು ಪ್ರಮಾಣಪತ್ರ ಕೊಟ್ಟಿದ್ದರು. ಇವರಿಗೆ ರಾಹುಲ್ ಗಾಂಧಿ ಬಗ್ಗೆ ಮಾತನಾಡುವ ನೈತಿಕತೆ ಇದೆಯೇ? ವಿರುದ್ಧ ಕಿಡಿಕಾರಿದರು.

ಮೋದಿ ಡಿಸ್‌ಲೈಕ್ ಆರಂಭ ಎಲ್ಲೆಡೆ ಪ್ರಧಾನಿ ನರೇಂದ್ರ ಮೋದಿಯವರ ಬಗ್ಗೆ ಡಿಸ್‌ಲೈಕ್ ಪ್ರಾರಂಭವಾಗಿದೆ. ಮೊನ್ನೆ ಮಂಗಳೂರಿಗೆ ಅವರು ಭೇಟಿ ನೀಡಿದ್ದಾಗ ಅಂತಹ ಜನಸ್ತೋಮವೇ ಇರಲಿಲ್ಲ. ಇವರ 'ಮನ್ ಕಿ ಬಾತ್' ಅಸ್ತಿತ್ವ ಕಳೆದುಕೊಂಡು 'ಮಂಕಿ ಬಾತ್' ಆಗಿದೆ ಎಂದರು. ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಮುಡಾ ಮಾಜಿ ಸದಸ್ಯ ಭಾಸ್ಕರ್‌ಗೌಡ ಗೋಷ್ಠಿಯಲ್ಲಿದ್ದರು.

ಬ್ರಾಹ್ಮಣರಿಗೆ ಸರ್ಕಾರದ ಸವಲತ್ತು ತಲುಪಿಸಲು

ಬ್ರಾಹ್ಮಣ ಜನಪ್ರತಿನಿಧಿಗಳ, ವಿಪ್ರ ಮುಖಂಡರ ನಿಯೋಗ ರಚಿಸಲು ಮನವಿ



ಮೈಸೂರು, ಸೆ.11(ಆರ್‌ಕೆಬಿ)– ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ ಅವರಿಗೆ ಮೈಸೂರು ಬ್ರಾಹ್ಮಣ ಯುವ ವೇದಿಕೆ ವತಿಯಿಂದ ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಹೊಯ್ಸಳ ಕರ್ನಾಟಕ ಆವರಣದಲ್ಲಿ 'ಅಶೋಕಾಭಿನಂದನಾ ಕಾರ್ಯಕ್ರಮ'ದಲ್ಲಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ವೇದಿಕೆ ವತಿಯಿಂದ ಅಶೋಕ್ ಹಾರನಹಳ್ಳಿ ಅವರಿಗೆ ಮನವಿ ಪತ್ರ ಸಲ್ಲಿಸಿ, ಸರ್ಕಾರದ ಸವಲತ್ತು ಸಮುದಾಯಕ್ಕೆ ತಲುಪಿಸಲು ಜನಪ್ರತಿನಿಧಿಗಳ ಮತ್ತು ವಿಪ್ರ ಮುಖಂಡರ ನಿಯೋಗ ರಚಿಸಬೇಕೆಂದು ಮನವಿಯಲ್ಲಿ ತಿಳಿಸಿದ್ದಾರೆ.

ಕೇಂದ್ರ ಸರ್ಕಾರದ ಯೋಜನೆ ಮೇಲ್ವರ್ಗದ ಬಡವರಿಗೆ ಶೇ.10 ಮೀಸಲಾತಿ ಇನ್ನೂ ಕರ್ನಾಟಕದಲ್ಲಿ ಜಾರಿಗೆ ಬಂದಿಲ್ಲ. ಬ್ರಾಹ್ಮಣರಿಗೆ ಜಾತಿ ಪ್ರಮಾಣ ಪತ್ರವೇ ಸಿಗುತ್ತಿಲ್ಲ. ಆರ್ಥಿಕವಾಗಿ ಹಿಂದುಳಿದವರು ಎಂಬ ಪ್ರಮಾಣಪತ್ರ ಕರ್ನಾಟಕ ಬ್ರಾಹ್ಮಣ ಮಂಡಳಿ ಯೋಜನೆಗೆ ಮಾತ್ರ ಸೀಮಿತವಾಗಿದೆ. ಸಮುದಾಯದ ಬಡವರಿಗೆ ಬ್ರಾಹ್ಮಣ ಮಂಡಳಿ ಯೋಜನೆಯೂ ಸಹ ತಲುಪುತ್ತಿಲ್ಲ. ಕೆಲವು ಅವೈಜ್ಞಾನಿಕ ಕಾನೂನಾತ್ಮಕ ತೊಡಕಿದೆ. ಜಾತಿ ಪ್ರಮಾಣ ಪತ್ರ ಪಡೆಯಲು ಶಾಲಾ ವ್ಯಾಸಾಂಗದ ವರ್ಗಾವಣೆ ಪತ್ರ ಕಡ್ಡಾಯವಾಗಿದೆ ಎಂದು ವೇದಿಕೆಯ ಪದಾಧಿಕಾರಿಗಳು ತಿಳಿಸಿದರು.

50 ವರ್ಷ ಮೇಲ್ಪಟ್ಟವರಿಗೆ ಯಾವುದೇ ವೈದ್ಯಕೀಯ ಯೋಜನೆಗಳಿಲ್ಲ., ಬ್ರಾಹ್ಮಣ ಸಮುದಾಯಕ್ಕೆ ಜೀವಿತಾವಧಿ ಜಾತಿಪ್ರಮಾಣ ಪತ್ರ ನೀಡಲು ಸರ್ಕಾರ ಮುಂದಾಗಬೇಕಿದೆ. ಇದರಿಂದ ಶಿಕ್ಷಣ, ಆರೋಗ್ಯ, ಉದ್ಯೋಗ ವಿಚಾರವಾಗಿ ಬ್ರಾಹ್ಮಣರಿಗೆ ಉಪಯುಕ್ತವಾಗುತ್ತದೆ. ಹಾಗಾಗಿ ವಿಪ್ರ ಸಮುದಾಯದ ಜನಪ್ರತಿನಿಧಿಗಳು, ಕಾನೂನು ತಜ್ಞರು, ಸಮುದಾಯದ ಮುಖಂಡರು ಒಳಗೊಂಡ ವಿಪ್ರನಿಯೋಗ ರಚಿಸಿ ಸರ್ಕಾರದ ಗಮನ ಸೆಳೆದು ಸಮುದಾಯಕ್ಕೆ ಸವಲತ್ತು ತಲುಪಿಸಲು ಶ್ರಮಿಸಬೇಕಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಈ ಸಂದರ್ಭದಲ್ಲಿ ಸಂಸದ ಪ್ರತಾಪ್ ಸಿಂಹ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಹೊಯ್ಸಳ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷ ಕೆ.ಆರ್.ಸತ್ಯನಾರಾಯಣ್, ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ನಗರಪಾಲಿಕೆ ಸದಸ್ಯ ಮಾ.ವಿ.ರಾವ್ ಪ್ರಸಾದ್, ಮೈಸೂರು ಬ್ರಾಹ್ಮಣ ಯುವ ವೇದಿಕೆಯ ಸಂಘಟನಾ ಕಾರ್ಯದರ್ಶಿ ಅಜಯ್ ಶಾಸ್ತ್ರಿ, ಜಯಸಿಂಹ ಶ್ರೀಧರ್, ರಂಗನಾಥ್, ವಿಜಯ್ ಕುಮಾರ್, ಜಗದೀಶ್, ಪ್ರಶಾಂತ್, ಸುಚೀಂದ್ರ, ಚಕ್ರಪಾಣಿ ಉಪಸ್ಥಿತರಿದ್ದರು.



ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ಆನೆಚೌಕೂರು ವ್ಯಾಪ್ತಿಯಲ್ಲಿ ಬಹಿರ್ದೆಸೆಗೆ ತೆರಳಿದ್ದ ಹುಣಸೂರಿನ ಲಿಂಗಾಪುರ ಗಿರಿಜನ ಹಾಡಿಯ ರಾಮಚಂದ್ರ ಎಂಬುವರ ಮೇಲೆ ಕರಡಿ ದಾಳಿ ನಡೆಸಿದ್ದು, ತೀವ್ರ ಗಾಯಗೊಂಡ ಅವರನ್ನು ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ.

ದಾರ್ಶನಿಕ ಪರಂಪರೆಯಲ್ಲಿ

ಶ್ರೀನಾರಾಯಣ ಗುರು ವಿಶೇಷ ಕಾರ್ಯಕ್ರಮ



ಮೈಸೂರು, ಸೆ.11(ಆರ್‌ಕೆಬಿ)– ಮೈಸೂರಿನ ಜೀವಧಾರ ರಕ್ತನಿಧಿ ಕೇಂದ್ರ ಹಾಗೂ ಮಂಡಿ ಮೊಹಲ್ಲಾ ನಾಗರಿಕ ವೇದಿಕೆ ವತಿಯಿಂದ ಭಾನುವಾರ ಮೈಸೂರಿನ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಜೀವಧಾರ ರಕ್ತನಿಧಿ ಕೇಂದ್ರದ ಸಭಾಂಗಣದಲ್ಲಿ ಭಾರತೀಯ ದಾರ್ಶನಿಕ ಪರಂಪರೆಯಲ್ಲಿ ಶ್ರೀನಾರಾಯಣ ಗುರು ಎಂಬ ವಿಶೇಷ ಕಾರ್ಯಕ್ರಮ ಅಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಭಾಗವಹಿಸಿ, ಬ್ರಹ್ಮಶ್ರೀ ನಾರಾಯಣ ಗುರುಗಳ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್ ಅವರು, ವಿವಿಧತೆಯಲ್ಲಿ ಏಕತೆ ಹೊಂದಿದ ಭಾರತದಲ್ಲಿ ನಾರಾಯಣ ಗುರುಗಳ ಚಿಂತನೆ ಸಮಾಜದ ಅಭಿವೃದ್ಧಿಗೆ ಪೂರಕವಾಗಿದೆ ಎಂದು ಹೇಳಿದರು.

ಶ್ರೀಮಂತಿಕೆಯಿಂದ ಕೂಡಿರುವ ಭಾರತೀಯ ದಾರ್ಶನಿಕ ಪರಂಪರೆಯಲ್ಲಿ ದಾರ್ಶನಿಕರಿಗೆ ಅಪಾರ ಗೌರವ ಸ್ಥಾನಮಾನ ನೀಡಲಾಗಿದೆ. ನಾರಾಯಣ ಗುರು ಅವರು ಸಮಾಜ ಚಿಂತಕರಾಗಿ, ದಾರ್ಶನಿಕರಾಗಿ, ಅಪ್ರತಿಮ ಹೋರಾಟಗಾರರಾಗಿ ಸಮಾಜಪರ ಕಾಳಜಿ ಉಳ್ಳವರಾಗಿದ್ದರು. ಸಮಾಜದ ಅನಿಷ್ಟ ಪದ್ಧತಿಗಳು, ತಾರತಮ್ಯ, ಮೂಢನಂಬಿಕೆ ಮತ್ತು ಅಸಮಾನತೆ ವಿರುದ್ಧ ಹೋರಾಟ ನಡೆಸಿದರು. ಕೆಳ ವರ್ಗದವರಿಗೆ ಧಾರ್ಮಿಕ ಶಿಕ್ಷಣ ನೀಡುವ ಮೂಲಕ ವಿದ್ಯೆಯಿಂದ ಸ್ವಾತಂತ್ರ್ಯ, ಸಂಘಟನೆಯಿಂದ ಶಕ್ತಿ ಎಂಬ ಧೋರಣೆಯನ್ನು ಮೂಡಿಸಿದರು. ಭಾರತದಲ್ಲಿ ಬೇರೆ ಬೇರೆ ಧರ್ಮಗಳಿದ್ದರೂ ಅಂತಿಮವಾಗಿ ಜ್ಞಾನ ಒಂದೇ. ಪ್ರಸ್ತುತ ಸಂದರ್ಭದಲ್ಲಿ ನಾರಾಯಣ ಗುರುಗಳ ಚಿಂತನೆಗಳು ಸಮಾಜದ ಅಭಿವೃದ್ಧಿಗೆ ಪೂರಕವಾಗಿವೆ. ಪ್ರತಿಯೊಬ್ಬರು ತಮ್ಮನ್ನು ತಾವೇ ಸುಧಾರಿಸಿಕೊಂಡರೆ ಇಡೀ ಸಮಾಜವೇ ಬದಲಾಗುತ್ತದೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮಾತನಾಡಿ, 12ನೇ ಶತಮಾನದ ಬಸವಣ್ಣನವರ ವಿಚಾರ ಧಾರೆಗಳನ್ನು 19ನೇ ಶತಮಾನ ಮರು ಆಚರಣೆಗೆ ಒಡ್ಡಿದ ಕ್ರಾಂತಿ ಪುರುಷ ಬ್ರಹ್ಮರ್ಷಿ ನಾರಾಯಣ ಗುರುಗಳು. ಜಾತಿ ಹೇಳಬೇಡಿ, ಕೇಳಬೇಡಿ ಎನ್ನುವ ಪದವೇ ಅಮಾನವೀಯ. ಶಾಲಾ ಗ್ರಂಥಾಲಯಗಳನ್ನು ನಿರ್ಮಿಸಿದ ನೇರ ಕ್ರಾಂತಿ ಪುರುಷ ಎಂದು ತಿಳಿಸಿದರು. ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಚಾಮರಾಜ ಕ್ಷೇತ್ರದ ಬಿಜೆಪಿ ಉಪಾಧ್ಯಕ್ಷ ಕುಮಾರ್‌ಗೌಡ, ಕೃಷ್ಣಮೂರ್ತಿ, ಸೂರಜ್, ಸದಾಶಿವ, ಚಂದ್ರು, ಹೇಮಂತ್, ಮಧು, ಸಂತೋಷ್ ಇನ್ನಿತರರು ಉಪಸ್ಥಿತರಿದ್ದರು.

ಉಪಕಾರ ಸ್ಮರಣೆಯಿಂದಾಗಿ ತಾತಯ್ಯನವರು ಇಂದಿಗೂ ಜೀವಂತವಾಗಿದ್ದಾರೆ

● ಚಿಂತಕ ರೋಹಿತ್ ಚಕ್ರತೀರ್ಥ ಸ್ಮರಣೆ ● ಶಿಕ್ಷಣ ತಜ್ಞ ಡಾ.ಎಸ್.ಮುರುಳಿ ಅವರಿಗೆ ತಾತಯ್ಯ ಪ್ರಶಸ್ತಿ ಪ್ರದಾನ ● ಉಪಕಾರದ ಮಹತ್ವ ವಿಶ್ವಕ್ಕೆ ಸಾರಿದ ದೇಶ ನಮ್ಮದು



ಮೈಸೂರು, ಸೆ.11(ಎಂಕೆ)– ಪರೋಪಕಾರವೇ ಮೂಲ ತತ್ವವಾಗಿರುವ ಪುಣ್ಯಭೂಮಿಯಲ್ಲಿ ತಾತಯ್ಯ (ಎಂ.ವೆಂಕಟಕೃಷ್ಣಯ್ಯ) ಅವರು, ಉಪಕಾರ ಸ್ಮರಣೆಯ ಮೂಲಕ ಇಂದಿಗೂ ಜೀವಂತವಾಗಿದ್ದಾರೆ ಎಂದು ಚಿಂತಕ ರೋಹಿತ್ ಚಕ್ರತೀರ್ಥ ಅಭಿವ್ಯಕ್ತಪಡಿಸಿದರು.

ನಗರದ ನಾರಾಯಣ ರಸ್ತೆಯಲ್ಲಿರುವ ತಾತಯ್ಯನವರ ಅನಾಥಾಲಯದ ಆವರಣದಲ್ಲಿ ಆಯೋಜಿಸಿದ್ದ 'ಎಂ.ವೆಂಕಟಕೃಷ್ಣಯ್ಯ ಅವರ 178ನೇ ಜಯಂತ್ಯೋತ್ಸವ ಹಾಗೂ ಎಂ.ವೆಂಕಟಕೃಷ್ಣಯ್ಯ ಪ್ರಶಸ್ತಿ ಪ್ರದಾನ' ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ಹತ್ತಾರು ಕಥೆಗಳ ಮೂಲಕ ಉಪಕಾರದ ಮಹತ್ವ ಹಾಗೂ ಅದರ ಸ್ಮರಣೆ ಕುರಿತು ತಿಳಿಸಿಕೊಟ್ಟರು.

ಉಪಕಾರ ಮಾಡಬೇಕು ಎಂದು ವಿಶ್ವಕ್ಕೆ ಹೇಳಿಕೊಟ್ಟ ದೇಶದಲ್ಲಿ ನಾವಿದ್ದೇವೆ. ನಾವು ಮಾಡುವ ಸಣ್ಣ ಸೇವೆ, ದೇವರ ಹೊರತು ಮತ್ತ್ಯಾರಿಗೂ ತಿಳಿಯಬಾರದು ಎಂದು ಮಾಡುವ ಸೇವೆ ನಿಜವಾದ ಸೇವೆಯಾಗಿರುತ್ತದೆ. ನಾನು ಸೇವೆ ಮಾಡುತ್ತಿದ್ದೇನೆ ಎಂದು ಹೇಳಿಕೊಂಡು, ಪ್ರಚಾರಕ್ಕಾಗಿ ಮಾಡುವ ಸೇವೆ ಒಂದರ್ಥದಲ್ಲಿ ಸೇವೆಯಂತೆ ಕಂಡರು, ಅದರಲ್ಲಿ ನಿಸ್ವಾರ್ಥಕ್ಕಿಂತ ಸ್ವಾರ್ಥವೇ ಹೆಚ್ಚಾಗಿರುತ್ತದೆ ಎಂದರು.

ಎಲ್ಲಿಯೋ, ಯಾವ ರೂಪದಲ್ಲೋ ದೊರೆಯುವ ಸಹಾಯ ಜೀವನದ ದಿಕ್ಕನ್ನೇ ಬದಲಾಯಿಸಬಹುದು. ಸಹಾಯದಿಂದ ಉಪಕಾರವಾಗಿರಬೇಕೇ ಹೊರತು ಅಪಕಾರವಾಗಬಾರದು. ರಾಜಕಾರಣಿಗಳು ಚುನಾವಣೆ ಸಂದರ್ಭದಲ್ಲಿ ಸಾಕಷ್ಟು ಸೇವೆಗೆ ಮುಂದಾಗುತ್ತಾರೆ. ಹಣ ಖರ್ಚು ಮಾಡುತ್ತಾರೆ. ಅದು ಮತ ನೀಡಲಿ ಎಂಬ ಸ್ವಾರ್ಥದಿಂದ ಹೊರತು ನಿಸ್ವಾರ್ಥದಿಂದಲ್ಲ. ಅಲ್ಲದೆ ಅದು ಸೇವೆ ಎನಿಸಿಕೊಳ್ಳುವುದಿಲ್ಲ. ಕೆಲವೊಮ್ಮೆ ದಾನ ಪಡೆಯುವವರು ತಮ್ಮ ಬುದ್ಧಿಶಕ್ತಿ ತೋರುವ ಮೂಲಕ ಒಂದಕ್ಕಿಂತ ಹೆಚ್ಚು ಬಾರಿ ಸಹಾಯ ಪಡೆಯುವುದನ್ನು ಗಮನಿಸಬಹುದಾಗಿದೆ ಎಂದು ಹೇಳಿದರು.

ಉಪಕಾರ ಸ್ಮರಣೆ: ಉಪಕಾರ ಪಡೆಯುವುದಷ್ಟೇ ಅಲ್ಲ ಅದರ ಸ್ಮರಣೆ ಅತ್ಯಂತ ಮುಖ್ಯವಾಗಿದೆ. ಸ್ಮರಿಸುವುದರಿಂದ ಉಪಕಾರ ಮಾಡಿದವರು ನಮ್ಮೊಡನೇ ಜೀವಂತವಾಗಿರುತ್ತಾರೆ. ಸಾವಿರಾರು ಮಕ್ಕಳ ಬಾಳಿಗೆ ಬೆಳಕಾಗಿರುವ ತಾತಯ್ಯ ಅವರು ಸ್ಮರಣೆಯ ಮೂಲಕ ಸದಾ ನಮ್ಮೊಂದಿಗಿದ್ದಾರೆ ಎಂದರು.

ಸಾಧನೆಗೆ 'ಸರಿಗಮಪದನಿ' ಅಳವಡಿಸಿಕೊಳ್ಳಿ: ಇದಕ್ಕೂ ಮುನ್ನ ಎಂ.ವೆಂಕಟಕೃಷ್ಣಯ್ಯ ಪ್ರಶಸ್ತಿ ಸ್ವೀಕರಿಸಿದ ಶಿಕ್ಷಣ ತಜ್ಞ ಡಾ.ಎಸ್.ಮುರುಳಿ ಮಾತನಾಡಿ, ಪ್ರತಿಯೊಬ್ಬರು ಜೀವನವನ್ನು 'ಸರಿಗಮಪದನಿ' ಯಿಂದ ಆರಂಭಿಸಿದರೆ ಒಳ್ಳೆಯದು. 'ಸ' ಎಂದರೆ ಉತ್ತಮರ ಸಹವಾಸ. 'ರಿ'– ಮಾಡುವ ಕೆಲಸವನ್ನು ರಿಕ್ತಾ ಮನಸ್ಸಿನಿಂದ ಮಾಡುವುದು. 'ಗ'– ಮಾಡುವ ಕೆಲಸ ಹಾಗೂ ಜೀವನದ ಪ್ರತಿಯೊಂದು ಘಳಿಗೆಯನ್ನು ಗಮನಿಸುವುದು. 'ಮ'–ಮನೋಲ್ಲಾಸದಿಂದ ಇಷ್ಟ ಪಟ್ಟು ಕೆಲಸ ಮಾಡುವುದು. 'ಪ'– ಸೇವೆಯ ಮೂಲಕ ಪದೋನ್ನತಿ ಪಡೆಯುವುದು. 'ದ'– ದಕ್ಷತೆಯಿಂದ ಕೆಲಸದಲ್ಲಿ ತೊಡಗಿಕೊಳ್ಳುವುದು ಹಾಗೂ 'ನಿ'–ಜೀವನದಲ್ಲಾಗಲೀ, ಮಾಡುವ ಕೆಲಸದಲ್ಲಾಗಲೀ ನಿಯಮಗಳನ್ನು ಅಳಸಿಕೊಳ್ಳುವುದು ಸಾಧನೆಗೆ ಸಹಕಾರಿಯಾಗುತ್ತದೆ ಎಂದು ತಿಳಿಸಿಕೊಟ್ಟರು.

ತಾತಯ್ಯ ಅನಾಥಾಲಯದ ಅಧ್ಯಕ್ಷ ಸಿ.ವಿ.ಗೋಪಿನಾಥ್, ಕಾರ್ಯದರ್ಶಿ ಅಶ್ವಥ್ ನಾರಾಯಣ್, ಹೆಚ್.ರಾಮಚಂದ್ರ ಮತ್ತಿತರರು ಉಪಸ್ಥಿತರಿದ್ದರು.

> “ಎಂ.ವೆಂಕಟಕೃಷ್ಣಯ್ಯ ಅವರ ಹೆಸರಿನಲ್ಲಿ ಪ್ರಶಸ್ತಿ ಪಡೆದಿರುವುದು ನನ್ನ ಜವಾಬ್ದಾರಿಯನ್ನು ಮತ್ತಷ್ಟು ಹೆಚ್ಚಿಸಿದ್ದು, ಪ್ರಶಸ್ತಿಯಲ್ಲಿ ನೀಡಿರುವ 25 ಸಾವಿರ ರೂ.ಗಳ ಜೊತೆಗೆ 75 ಸಾವಿರ ರೂ. ಸೇರಿಸಿ, ಒಟ್ಟು 1 ಲಕ್ಷ ರೂ.ಗಳನ್ನು ನನ್ನೂರಿನ ಸರ್ಕಾರಿ ಶಾಲೆ ಅಭಿವೃದ್ಧಿಗೆ ನೀಡುತ್ತಿದ್ದೇನೆ.
> – ಡಾ.ಎಸ್.ಮುರುಳಿ

ಮೈಸೂರು ಮಿತ್ರ

ಚುಂಚನಕಟ್ಟೆ ಶ್ರೀರಾಮ ಸಕ್ಕರೆ ಕಾರ್ಖಾನೆಯಲ್ಲಿ ಬಾಯ್ಲರ್‌ಗೆ ಅಗ್ನಿಸ್ಪರ್ಶ

ಸೆ.16ರಿಂದ ಕಬ್ಬು ಅರೆಯುವ ಕಾರ್ಯ ಆರಂಭ: ಸಾರಾ



ಚುಂಚನಕಟ್ಟೆ, ಸೆ.11– ಚುಂಚನಕಟ್ಟೆ ಶ್ರೀರಾಮ ಸಹಕಾರ ಸಕ್ಕರೆ ಕಾರ್ಖಾನೆ ಗುತ್ತಿಗೆ ಪಡೆದಿರುವ ನಿರಾಣಿ ಶುಗರ್ಸ್‌ನವರು ಸೆ.16ರಿಂದ ಕಬ್ಬು ಅರೆಯುವ ಕಾರ್ಯ ಆರಂಭಿಸಲಿದ್ದಾರೆ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.

ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆ ಶ್ರೀರಾಮ ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬು ಅರೆಯುವ ಕಾರ್ಯಕ್ಕೆ ಪೂರ್ವಭಾವಿಯಾಗಿ ಬಾಯ್ಲರ್‌ಗೆ ಅಗ್ನಿಸ್ಪರ್ಶ ಮಾಡಿ ಮಾತನಾಡಿದ ಅವರು, ಕಳೆದ 12 ವರ್ಷಗಳಿಂದ ಕಬ್ಬು ಅರೆಯುವ ಕಾರ್ಯ ಸ್ಥಗಿತಗೊಳಿಸಿದ್ದ ಕಾರ್ಖಾನೆ ಪ್ರಸಕ್ತ ತಿಂಗಳಲ್ಲಿ ಕಾರ್ಯಾರಂಭ ಮಾಡಲಿದೆ ಎಂದು ಹರ್ಷ ವ್ಯಕ್ತಪಡಿಸಿದ ಅವರು ಕಾರ್ಖಾನೆಯವರು ರೈತರಿಗೆ ಯಾವುದೇ ತೊಂದರೆ ನೀಡಬಾರದು ಎಂದು ಆಡಳಿತ ಮಂಡಳಿಗೆ ಸೂಚಿಸಿದರು.

ಕಾರ್ಖಾನೆ ನಿತ್ಯ 1,250 ಟನ್ ಕಬ್ಬು ಅರೆಯಲಿದ್ದು, ಮುಂದಿನ ದಿನಗಳಲ್ಲಿ ಕನಿಷ್ಠ 5 ಸಾವಿರ ಟನ್ ಕಬ್ಬು ಅರೆಯಲಿದೆ. ಇದರಿಂದ ರೈತರು ಮತ್ತು ಕಾರ್ಮಿಕರಿಗೆ ಅನುಕೂಲವಾಗಲಿದೆ ಎಂದರು.

ಶ್ರೀರಾಮ ಸಹಕಾರ ಸಕ್ಕರೆ ಕಾರ್ಖಾನೆ ವ್ಯಾಪ್ತಿಯಲ್ಲಿ ಉತ್ತಮ ನೀರಾವರಿ ಮತ್ತು ರಸ್ತೆ ವ್ಯವಸ್ಥೆ ಇದ್ದು ರೈತರು ಕಬ್ಬು ಬೆಳೆದು ಲಾಭ ಗಳಿಸಬೇಕೆಂದು ಕಿವಿಮಾತು ಹೇಳಿದರು.

ಕಾರ್ಖಾನೆ ಕಬ್ಬು ಅರೆಯುವ ಕಾರ್ಯ ಆರಂಭಿಸುವುದರಿಂದ ಈ ಭಾಗದ ಮತ್ತು ಇತರ ತಾಲೂಕುಗಳ ಸಾವಿರಾರು ಮಂದಿ ರೈತರು ಮತ್ತು ಕಾರ್ಮಿಕರಿಗೆ ಉದ್ಯೋಗ ಸಿಗಲಿದ್ದು ಇದು ಹಲವು ಜನರ ಜೀವನಕ್ಕೆ ದಾರಿಯಾಗಲಿದೆ ಎಂದರು.

ಸಮ್ಮಿಶ್ರ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿದ್ದ ಹೆಚ್.ಡಿ.ಕುಮಾರಸ್ವಾಮಿ ಅವರು ಕಾರ್ಖಾನೆಯನ್ನು ಖಾಸಗಿಯವರಿಗೆ ಗುತ್ತಿಗೆ ನೀಡುವ ಪ್ರಕ್ರಿಯೆ ಆರಂಭಿಸಿದ್ದು, ಆನಂತರ ಬಂದ ಬಿಜೆಪಿ ಸರ್ಕಾರದ ಸಿಎಂ ಬಿ.ಎಸ್.ಯಡಿಯೂರಪ್ಪ ಮತ್ತು ಈಗಿನ ಸಿಎಂ ಬಸವರಾಜ ಬೊಮ್ಮಾಯಿಯವರು ಎಲ್ಲಾ ಸಹಕಾರ ನೀಡಿದ್ದಾರೆ ಎಂದು ಅವರು ಕೃತಜ್ಞತೆ ವ್ಯಕ್ತಪಡಿಸಿದರು.

ಕಾರ್ಖಾನೆ ಆರಂಭಿಸಿ ಸ್ಥಳೀಯರಿಗೆ ಉದ್ಯೋಗಾವಕಾಶ ನೀಡುವ ಜೊತೆಗೆ ಕಬ್ಬು ಬೆಳೆಗಾರರ ಹಿತ ಕಾಪಾಡಲು ಆಡಳಿತ ಮಂಡಳಿ ಮೊದಲ ಆದ್ಯತೆ ನೀಡಬೇಕು. ಕಾಲ ಕಾಲಕ್ಕೆ ನನಗೆ ಕಾರ್ಖಾನೆ ಅಭಿವೃದ್ಧಿ ಮತ್ತು ಸ್ಥಿತಿಗತಿಗಳ ಬಗ್ಗೆ ವರದಿ ನೀಡಬೇಕೆಂದು ಶಾಸಕರು ಆದೇಶಿಸಿದರು.

ಆ ನಂತರ ಶಾಸಕರು ಕಾರ್ಖಾನೆಯ ಎಲ್ಲಾ ವಿಭಾಗಗಳನ್ನು ಪರಿಶೀಲಿಸಿ ಅಧಿಕಾರಿಗಳ ಸಭೆ ನಡೆಸಿ ಸೂಕ್ತ ಸಲಹೆ ಮತ್ತು ಸೂಚನೆ ನೀಡಿದರಲ್ಲದೆ ಯಾವುದೇ ಸಮಸ್ಯೆ ಮತ್ತು ದೂರುಗಳಿದ್ದರೆ ತಕ್ಷಣ ನನಗೆ ವರದಿ ನೀಡಬೇಕೆಂದರು.

ಈ ವೇಳೆ ನಿರಾಣಿ ಶುಗರ್ಸ್ ಮುಖ್ಯಸ್ಥ ಯರಗಟ್ಟಿ, ಪ್ರಧಾನ ವ್ಯವಸ್ಥಾಪಕ ಬೋರೇಗೌಡ, ಮುಖ್ಯ ಇಂಜಿನಿಯರ್ ನಾಗೇಗೌಡ, ಕಬ್ಬು ಅಭಿವೃದ್ಧಿ ಅಧಿಕಾರಿ ರವಿಚಂದ್ರನ್, ರಾಜ್ಯ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್ ಜಿಪಂ ಮಾಜಿ ಸದಸ್ಯ ಎಂ. ಟಿ.ಕುಮಾರ್, ಟಿಎಪಿಸಿಎಂಎಸ್ ಮಾಜಿ ನಿರ್ದೇಶಕ ಎಸ್.ಟಿ. ಕೀರ್ತಿ, ರೈತ ಮುಖಂಡರು ಹಾಗೂ ಕಾರ್ಖಾನೆ ಸಿಬ್ಬಂದಿ ಹಾಜರಿದ್ದರು.

ಅಂಬೇಡ್ಕರ್ ಪುತ್ಥಳಿ ಸ್ಥಾಪನೆ, ಗ್ರಂಥಾಲಯ, ಉದ್ಯಾನವನ ನಿರ್ಮಾಣಕ್ಕೆ ಗುದ್ದಲಿ ಪೂಜೆ



ಹುಣಸೂರು, ಸೆ.11– ತಾಲೂಕಿನ ಕಟ್ಟೆಮಳಲವಾಡಿಯಲ್ಲಿ ವಿಶ್ವಜ್ಞಾನಿ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿ ಸ್ಥಾಪನೆ, ಸಾವಿತ್ರಿಬಾಯಿ ಫುಲೆ ಗ್ರಂಥಾಲಯ ಹಾಗೂ ಉದ್ಯಾನವನ ನಿರ್ಮಾಣಕ್ಕೆ ಶಾಸಕದ್ವಯರಾದ ಹೆಚ್.ಪಿ.ಮಂಜುನಾಥ್ ಹಾಗೂ ಜಿ.ಟಿ.ದೇವೇಗೌಡ ಗುದ್ದಲಿ ಪೂಜೆ ನೆರವೇರಿಸಿದರು.

ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿ, ಕಟ್ಟೆಮಳಲವಾಡಿ ಗ್ರಾಮ ನನಗೆ ರಾಜಕೀಯವಾಗಿ ಶಕ್ತಿ ತುಂಬಿದೆ. ಈ ಗ್ರಾಮವನ್ನು ಸಿದ್ದರಾಮಯ್ಯ ಸರ್ಕಾರದ ಅವಧಿಯಲ್ಲಿ 60 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ ಪಡಿಸಿದ್ದೇನೆಂಬ ಆತ್ಮತೃಪ್ತಿ ಇದೆ ಎಂದರು. ಇಲ್ಲಿ ಅಂಬೇಡ್ಕರ್ ಭವನ ಇದ್ದಿದ್ದರಿಂದ ಮತ್ತೊಂದು ಭವನ ನಿರ್ಮಿಸಲು ಸರ್ಕಾರ ಅನುದಾನ ನೀಡಲ್ಲ. ಆದರೂ ಹೋಬಳಿ ಕೇಂದ್ರವಾದ ಗಾವಡಗೆರೆಯಲ್ಲಿ ಅಂಬೇಡ್ಕರ್ ಭವನ ನಿರ್ಮಾಣಕ್ಕಾಗಿ 50 ಲಕ್ಷ ರೂ. ಮಂಜೂರಾಗಿದ್ದು, ಅಲ್ಲಿ ನಿವೇಶನ ಕೊರತೆಯಿಂದ ಅನುದಾನ ಬಾಕಿ ಇದೆ. ಆ ಅನುದಾನವನ್ನು ಇಲ್ಲಿ ಗ್ರಂಥಾಲಯ ನಿರ್ಮಾಣಕ್ಕೆ ವರ್ಗಾಯಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುವೆ. ಪ್ರಮುಖ ಸ್ಥಳದಲ್ಲಿ ನಿವೇಶನ ಗುರುತಿಸಿ ಮಂಜೂರು ಮಾಡಿರುವ ಅಂದಿನ ಗ್ರಾಪಂ ಅಧ್ಯಕ್ಷ ದೇವಯ್ಯನವರ ಕಾಳಜಿಯನ್ನು ಸ್ಮರಿಸಿದರು.

ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ದೇಶಕ್ಕೆ ಅತ್ಯುತ್ತಮ ಸಂವಿಧಾನ ನೀಡಿದ ಅಂಬೇಡ್ಕರ ಪುತ್ಥಳಿಯನ್ನು ಎಲ್ಲರ ಪರಿಶ್ರಮದಿಂದ ಸ್ಥಾಪಿಸುತ್ತಿರುವುದು ಸ್ವಾಗತಾರ್ಹ. ಇಲ್ಲಿ ಅತ್ಯುತ್ತಮ ಗ್ರಂಥಾಲಯ, ಸಂಶೋಧನಾ ಕೇಂದ್ರ ಆರಂಭವಾಗಲೆಂದು ಆಶಿಸಿ, ಸರ್ವ ಜನಾಂಗವಿರುವ ಇದೊಂದು ಆದರ್ಶ ಗ್ರಾಮವಾಗಿದ್ದು, ಈ ಕಾರ್ಯಕ್ಕೆ ಸಹಕಾರ ನೀಡುವೆ ಎಂದರು.

ಇದೇ ವೇಳೆ ಜಿಪಂ ಮಾಜಿ ಸದಸ್ಯ ಅಚ್ಚುತಾನಂದ ಈ ಕಾರ್ಯಕ್ಕೆ ವೈಯಕ್ತಿಕವಾಗಿ 10 ಲಕ್ಷ ರೂ. ನೀಡುವುದಾಗಿ ಘೋಷಿಸಿದರು. ಬಿಆರ್‌ಸಿ ಸಂತೋಷ್ ಕುಮಾರ್, ಅಭಿಯೋಜಕ ರಮೇಶ್ ಬಾಬು, ದಲಿತ ಮುಖಂಡ ಹರಿಹರ ಆನಂದಸ್ವಾಮಿ, ಸಮಿತಿ ಅಧ್ಯಕ್ಷ ನಾಗರಾಜ ಮಲ್ಲಾಡಿ, ಜೆಡಿಎಸ್ ಉಪಾಧ್ಯಕ್ಷ ದೇವರಾಜ ಒಡೆಯರ್, ಮಾಜಿ ಮೇಯರ್ ಪುರುಷೋತ್ತಮ್, ಮಾಜಿ ಸಂಸದ ವಿಜಯಶಂಕರ್, ಜೆಡಿಎಸ್ ಅಧ್ಯಕ್ಷ ಸೋಮಶೇಖರ್, ಹುಡಾ ಅಧ್ಯಕ್ಷ ಗಣೇಶ್ ಕುಮಾರಸ್ವಾಮಿ, ನಗರಸಭೆ ಸದಸ್ಯ ರಮೇಶ್, ಕೆಂಪನಾಯಕ ಮಾತನಾಡಿದರು.

ಈ ವೇಳೆ ಗ್ರಾಪಂ ಅಧ್ಯಕ್ಷೆ ಸುಧಾ, ಸದಸ್ಯರು, ತಾಪಂ ಮಾಜಿ ಅಧ್ಯಕ್ಷೆ ಪದ್ಮಮ್ಮ, ಮೈಸೂರಿನ ಕಲ್ಯಾಣಸಿರಿ ಬಂತೇಜಿ, ತಾಲೂಕು ಬಿಜೆಪಿ ಅಧ್ಯಕ್ಷ ನಾಗಣ್ಣ, ಮುಖಂಡರಾದ ನಟರಾಜ್, ತಗಡಯ್ಯ, ದೇವರಾಜ್, ಶ್ರೀಧರ್, ಬಸವಲಿಂಗಯ್ಯ, ಸಂಜು, ಕೃಷ್ಣಶೆಟ್ಟಿ, ಕೇಶವಮೂರ್ತಿ, ಹರೀಶ್, ಪ್ರಫುಲ್ಲಾ ಮಲ್ಲಾಡಿ ಸೇರಿದಂತೆ ಅನೇಕರಿದ್ದರು.



ಮೈಸೂರು ಮಹಾನಗರ ಪಾಲಿಕೆ ನೂತನ ಮೇಯರ್ ಶಿವಕುಮಾರ್ ಅವರನ್ನು ಹೆಚ್.ಡಿ.ಕೋಟೆ ಬಿಜೆಪಿ ಮುಖಂಡ ಡಾ.ಹೆಚ್.ವಿ.ಕೃಷ್ಣಸ್ವಾಮಿ ಸನ್ಮಾನಿಸಿದರು. ಈ ವೇಳೆ ಬಿಜೆಪಿ ಮೈಸೂರು ಜಿಲ್ಲಾ ಗ್ರಾಮಾಂತರ ಪ್ರಧಾನ ಕಾರ್ಯದರ್ಶಿ ಮಹೇಶ್ ನಾಯಕ್, ಕಾರ್ಯದರ್ಶಿ ಹನುಮಂತ ನಾಯಕ, ಶಿವು, ರಾಜೇಶ್, ವಿರಾಜ್ ನಾಯಕ, ತಾಲೂಕು ಎಸ್‌ಟಿ ಮೋರ್ಚಾ ಅಧ್ಯಕ್ಷ ನಾಗನಾಯ್ಕ ಇತರರಿದ್ದರು.



ತಿ.ನರಸೀಪುರ ತಾಲೂಕಿನ ಬನ್ನೂರು ರೋಟರಿ ಸಂಸ್ಥೆಯಿಂದ ಆರೋಗ್ಯ ಸಿರಿ ಯೋಜನೆಯಡಿ ಕ್ಯಾನ್ಸರ್‌ಗೆ ತುತ್ತಾಗಿರುವ 9ನೇ ತರಗತಿ ವಿದ್ಯಾರ್ಥಿ ಬಿ.ಪಿ.ಶಶಿಧರ್‌ಗೆ ರೋಟರಿ ಸದಸ್ಯರು 81 ಸಾವಿರ ರೂ.ಗಳ ಚೆಕ್ ಅನ್ನು ಬನ್ನೂರು ಆಸ್ಪತ್ರೆ ವೈದ್ಯಾಧಿಕಾರಿ ಡಾ.ರವಿ ಕುಮಾರ್ ಮೂಲಕ ವಿದ್ಯಾರ್ಥಿ ಪೋಷಕರಿಗೆ ವಿತರಿಸಿದರು. ಈ ವೇಳೆ ರೋಟರಿ ಜಿಲ್ಲೆ 3181ರ ಜಿಲ್ಲಾ ಗವರ್ನರ್ ರೊ.ಎನ್.ಪ್ರಕಾಶ್ ಕಾರಂತ್, ಜಿಲ್ಲಾ ಸೆಕ್ರೆಟರಿ ರೊ.ಕೆ.ನಾರಾಯಣ ಹೆಗಡೆ, ವಲಯ 9ರ ಅಸಿಸ್ಟೆಂಟ್ ಗವರ್ನರ್ ಟಿ.ವಾಸುದೇವ, ರೋಟರಿ ಸಂಸ್ಥೆ ಖಜಾಂಚಿ ರೊ.ಜೆ.ಪಿ.ಪ್ರಸನ್ನ, ಸಂಸ್ಥೆಯ ಅಧ್ಯಕ್ಷ ಬಿ.ಎ.ನಾಗರಾಜು, ಕಾರ್ಯದರ್ಶಿ ಕೆಂಪೇಗೌಡ ವಲಯ 9ರ ಪ್ರತಿನಿಧಿ ರೋಟರಿ ಸಂಸ್ಥೆ ಮಾಜಿ ಅಧ್ಯಕ್ಷ ಎನ್.ಎಂ.ರಾಮಚಂದ್ರ ಸೇರಿದಂತೆ ಇನ್ನಿತರರಿದ್ದರು.

ಸರಗೂರಲ್ಲಿ ನಾರಾಯಣ ಗುರು ಜಯಂತಿ



ಸರಗೂರು, ಸೆ.11– ನಾರಾಯಣಗುರು ಒಬ್ಬ ಆಧ್ಯಾತ್ಮಿಕ ವ್ಯಕ್ತಿಯಾಗಿ ಕಂಡರೂ, ತಮ್ಮ ಚಿಂತನೆ ಮತ್ತು ಕೆಲಸಗಳ ಮೂಲಕ ತಾವೊಬ್ಬ ಅದ್ವಿತೀಯ ಸಮಾಜ ಸುಧಾರಕ ಎಂಬುದನ್ನು ಸಾಧಿಸಿ ತೋರಿಸಿದರು ಎಂದು ವರ್ತಕರ ಸಂಘದ ಅಧ್ಯಕ್ಷ ಎಸ್.ಎಂ.ಶ್ರೀನಿವಾಸ್ ತಿಳಿಸಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ನಡೆದ ನಾರಾಯಣಗುರು ಜಯಂತಿಯಲ್ಲಿ ಮಾತನಾಡಿದ ಅವರು, ನಾರಾಯಣ ಗುರುಗಳ ತತ್ವಾದರ್ಶಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ತಹಸೀಲ್ದಾರ್ ರತ್ನಾಂಬಿಕೆ ಮಾತನಾಡಿ, ನಾರಾಯಣಗುರುಗಳು ಜನತೆಯಲ್ಲಿ ಸ್ವಾಭಿಮಾನ ತುಂಬಿದರು. ಅರಿವಿನ ಬೆಳಕು ತೋರಿದರು. ಅವರು ಒಂದೇ ಧರ್ಮ ಎಂದು ಪ್ರತಿಪಾದಿಸಿದ ನಾರಾಯಣ ಗುರುಗಳು ಆದರ್ಶ ಎಲ್ಲರಿಗೂ ಮಾದರಿ ಎಂದರು. ಪಪಂ ಅಧ್ಯಕ್ಷೆ ರಾಧಿಕಾ, ವಿವೇಕಾನಂದ ಆಸ್ಪತ್ರೆ ವೈದ್ಯ ಡಾ.ಡೆನ್ನಿಸ್ ಚೌಹಣ್, ಉಪಾಧ್ಯಕ್ಷ ವಿನಾಯಕ ಪ್ರಸನ್ನ, ಸದಸ್ಯರಾದ ಶ್ರೀನಿವಾಸ್, ನೂರಾಳಸ್ವಾಮಿ, ಚಲುವಕೃಷ್ಣ, ತಾಲೂಕು ಆರ್ಯ ಈಡಿಗ ಸಮಾಜದ ಅಧ್ಯಕ್ಷ ಎಸ್.ಎನ್.ರಂಗೇಗೌಡ, ಗೌರವಾಧ್ಯಕ್ಷ ಎಂ.ಕೆ.ಕೃಷ್ಣಪ್ಪ, ಸರಗೂರು ಯಜಮಾನರಾದ ತಮ್ಮಯ್ಯಣ್ಣ, ರವಿಗೌಡ, ಟಿ.ಕರಿಯಪ್ಪ, ಎಸ್.ಎನ್. ನಾಗರಾಜು, ಎಸ್.ಕೆ.ನಾಗರಾಜು, ಮುಖಂಡರಾದ ಎಸ್.ಕೆ.ರಂಗಣ್ಣ, ನವೀನ್, ಸ್ವಾಮಿ, ರಾಮಣ್ಣ, ಮುತ್ತು ರಾಜು, ಬಾರ್ ಲಕ್ಷ್ಮಣ್, ಅನೀಲ್, ಆರ್ಯ ಈಡಿಗ ಯುವಕ ಸಂಘದವರು ಇದ್ದರು.

ನೀಟ್ ಪರೀಕ್ಷೆಯಲ್ಲಿ ಆಯಿಷಾ ಸದಫ್‌ಗೆ 572 ಅಂಕ



ಹಿರೀಕ್ಯಾತನಹಳ್ಳಿ, ಸೆ.11– ಇತ್ತೀಚೆಗೆ ನಡೆದ ನೀಟ್ ಪರೀಕ್ಷೆಯಲ್ಲಿ ಆಯಿಷಾ ಸದಫ್ 720ಕ್ಕೆ 572 ಅಂಕ ಗಳಿಸುವ ಮೂಲಕ ಕಾಲೇಜಿಗೆ ಕೀರ್ತಿ ತಂದಿದ್ದಾಳೆ ಎಂದು ಹುಣಸೂರು ತಾಲೂಕಿನ ಬಿಳಿಗೆರೆ ಗ್ರಾಮದ ಅನ್ವೇಷಣಾ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಹೆಚ್.ಎನ್.ಗಿರೀಶ್ ತಿಳಿಸಿದ್ದಾರೆ. ಆಲ್ ಇಂಡಿಯಾ ನೀಟ್ ಪರೀಕ್ಷೆಯಲ್ಲಿ ಆಯಿಷಾ ಸದಫ್ 35437ನೇ ರ್‍ಯಾಂಕ್ ಹಾಗೂ ಕ್ಯಾಟಗರಿಯಲ್ಲಿ 15557 ರ್‍ಯಾಂಕ್ ಪಡೆಯುವ ಮೂಲಕ ಕಾಲೇಜಿನ ಕೀರ್ತಿ ಹೆಚ್ಚಿಸಿದ್ದಾಳೆ. ಜೊತೆಗೆ ಇಂಪನ, ಕೀರ್ತನ, ಅಕ್ಷಯ್, ನಿಶ್ಚಿತ ಎಂಬ ವಿದ್ಯಾರ್ಥಿಗಳು ನೀಟ್ ಪರೀಕ್ಷೆಯಲ್ಲಿ ಅರ್ಹತೆ ಹೊಂದಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆ ಸಂಸ್ಥಾಪಕ ಹೆಚ್.ಕೆ.ಚಂದ್ರಮೋಹನ್, ಕಾರ್ಯದರ್ಶಿ ಹೆಚ್.ಸಿ.ಪ್ರಶಾಂತ್ ಹರ್ಷ ವ್ಯಕ್ತಪಡಿಸಿ ಶುಭ ಕೋರಿದ್ದಾರೆ.

ಹಿಂದುಳಿದ ಮಕ್ಕಳು ಮುಖ್ಯವಾಹಿನಿಗೆ ಬನ್ನಿ



ನಂಜನಗೂಡು, ಸೆ.11– ಹಿಂದುಳಿದ ಮಕ್ಕಳು ಮುಖ್ಯವಾಹಿನಿಗೆ ಬರಬೇಕು ಎಂದು ಶಿಕ್ಷಣ ಇಲಾಖೆ ಜಂಟಿ ಉಪ ನಿರ್ದೇಶಕಿ ಭಾರತಿ ತಿಳಿಸಿದರು.

ನಗರದ ನಂದಿ ಕನ್ವೆನ್ಷನ್ ಹಾಲ್‌ನಲ್ಲಿ ತಾಲೂಕು ಪ್ರೌಢಶಾಲೆ ಶಿಕ್ಷಕರ ಸಂಘದಿಂದ ಆಯೋಜಿಸಿದ್ದ ಕಲಿಕಾ ಚೇತರಿಕೆ ಕಾರ್ಯಾಗಾರ ಹಾಗೂ ಎಸ್‌ಎಸ್‌ಎಲ್‌ಸಿ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕಳೆದ 2 ವರ್ಷದಿಂದ ಕೊರೊನಾದಿಂದಾಗಿ ಶಾಲೆಗಳಲ್ಲಿ ಯಾವ ಕಾರ್ಯಕ್ರಮವನ್ನು ಮಾಡಲು ಸಾಧ್ಯವಾಗಿರಲಿಲ್ಲ. ಇದರಿಂದ ಮಕ್ಕಳ ಮನಸ್ಸಿಗೆ ಬೇಸರವಾಗಿತ್ತು. ಹಿಂದುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ಸರ್ಕಾರ ಕಲಿಕಾ ಚೇತರಿಕೆಗೆ ಹೆಚ್ಚು ಒತ್ತು ನೀಡುತ್ತಿದೆ. ಮನೆಯಲ್ಲಿ ಮಕ್ಕಳು ಕಲಿಕೆಗಿಂತ ಟಿವಿಯಲ್ಲಿ ಬರುವ ಧಾರವಾಹಿಗಳ ಬಗ್ಗೆ ಹೆಚ್ಚು ಆಸಕ್ತಿ ಹೊಂದಿದ್ದಾರೆ. ಪೋಷಕರು ಇದಕ್ಕೆ ಅವಕಾಶ ನೀಡಬಾರದು. ಪ್ರತಿಯೊಬ್ಬರು ಇಂತಹ ಕಾರ್ಯಕ್ರಮವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಈ ವೇಳೆ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಉಪನ್ಯಾಸಕ ನಂಜುಂಡ ಆರಾಧ್ಯ, ಪ್ರೌಢಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಅರುಣ್ ಕುಮಾರ್, ಬಿಇಓ ಸಿ.ಎನ್. ರಾಜು, ಸಂಪನ್ಮೂಲ ಅಧಿಕಾರಿ ಕೆ.ಜಿ. ಮಹೇಶ್, ಪ್ರೌಢಶಾಲಾ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಬಸವಣ್ಣ, ಧರ್ಮ ರತ್ನಾಕರ್, ಕಾರ್ಯ ದರ್ಶಿ ಕಾರಯ್ಯ, ಉಪಾಧ್ಯಕ್ಷ ಚಂದ್ರಶೇಖರ್, ಮಹದೇವ ನಾಯಕ, ಮಹೇಶ್, ರಾಜ್ಯ ಪರಿಷತ್ ಸದಸ್ಯ ಪ್ರಭು, ಜಿಲ್ಲಾ ಉಪಾಧ್ಯಕ್ಷ ಮಹೇಶ್ ಕುಮಾರ್ ಸೇರಿದಂತೆ ಇತರರಿದ್ದರು.

ಸರ್ಕಾರಿ ಯೋಜನೆಗಳನ್ನು ಸದ್ಬಳಕೆ ಮಾಡಿಕೊಳ್ಳಿ: ಮಹದೇವ್



ಬೆಟ್ಟದಪುರ, ಸೆ.11– ಪ್ರತಿಯೊಬ್ಬರೂ ಸರ್ಕಾರಿ ಯೋಜನೆಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಶಾಸಕ ಕೆ.ಮಹದೇವ್ ತಿಳಿಸಿದರು.

ಪಿರಿಯಾಪಟ್ಟಣ ತಾಲೂಕು ಬೆಟ್ಟದಪುರ ಹೋಬಳಿ ವ್ಯಾಪ್ತಿಗೆ ಸೇರಿದ ಸಂಗರಶೆಟ್ಟಿಹಳ್ಳಿ ಗ್ರಾಮದ ಸಮುದಾಯ ಭವನದಲ್ಲಿ ಕೃಷಿ ಇಲಾಖೆಯಿಂದ ಆಯೋಜಿಸಿದ್ದ 2022–23ನೇ ಸಾಲಿನ ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಯಡಿ ರಾಗಿ ಬೆಳೆ ಪ್ರಾತ್ಯಕ್ಷತೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ತಾಲೂಕಿನಲ್ಲಿ ಈ ಯೋಜನೆಗೆ ಪ್ರತಿ ವರ್ಷದಂತೆ ಕಿರುನಲ್ಲಿ, ಆಲನಹಳ್ಳಿ, ಸಂಗರಶೆಟ್ಟಹಳ್ಳಿ ಹಾಗೂ ಸೂಳೇಕೋಟೆ ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ. ಆದ್ದರಿಂದ ಈ ಭಾಗದ ರೈತರು ಇಲಾಖೆಯಿಂದ ನೀಡುತ್ತಿರುವ ರಾಗಿ ಬಿತ್ತನೆ ಬೀಜ, ಔಷಧಿ ಹಾಗೂ ಗೊಬ್ಬರ ಬಳಕೆ ಮಾಡಿಕೊಂಡು ಹೆಚ್ಚಿನ ರಾಗಿ ಇಳುವರಿ ತೆಗೆಯಿರಿ. ಈ ವರ್ಷ ರಾಗಿ ಬೆಲೆ ಕ್ವಿಂಟಾಲ್‌ಗೆ 3778 ರೂ. ಇದೆ ಎಂದು ತಿಳಿಸಿದರು.

ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಪ್ರಸಾದ್ ರೈತರಿಗೆ ಈ ಯೋಜನೆ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಅತ್ತಿಗೋಡು ಗ್ರಾಪಂ ಮಾಜಿ ಅಧ್ಯಕ್ಷ ನಟೇಶ್, ತಾಪಂ ಮಾಜಿ ಸದಸ್ಯ ಮಲ್ಲಿಕಾರ್ಜುನ್, ಬೆಟ್ಟದತುಂಗ ಗ್ರಾಪಂ ಅಧ್ಯಕ್ಷ ದೇವರಾಜು, ಅತ್ತಿಗೋಡು ಗ್ರಾಪಂ ಸದಸ್ಯರಾದ ಮುರುಳಿ, ಬಸವರಾಜು, ಮುಖಂಡರಾದ ಸ್ವಾಮಿಗೌಡ, ಮಂಜುನಾಥ್, ಪುಟ್ಟರಾಜೇಗೌಡ, ಪಿಡಿಒ ಮನು ಸೇರಿದಂತೆ ಗ್ರಾಮದ ರೈತ ಮುಖಂಡರು ಹಾಜರಿದ್ದರು.

ಬಡ ಮಕ್ಕಳಿಗಾಗಿ ವಿದ್ಯಾಸಂಸ್ಥೆಗಳ ಆರಂಭಿಸಿದ ಚೇತನ ಟಿ.ಎಸ್.ಸುಬ್ಬಣ್ಣ

ಶಾಸಕ ಸಿ.ಎಸ್.ನಿರಂಜನ ಕುಮಾರ್ ವರ್ಣನೆ



ತಿ.ನರಸೀಪುರ, ಸೆ.11– ಮಹಾತ್ಮ ಗಾಂಧೀಜಿಯವರ ಪ್ರೇರಣೆಯಿಂದ ಗ್ರಾಮೀಣ ಬಡಮಕ್ಕಳ ಶಿಕ್ಷಣಕ್ಕಾಗಿ ಹಲವು ವಿದ್ಯಾಸಂಸ್ಥೆ ಪ್ರಾರಂಭಿಸಿದ ಮಹಾನ್ ಚೇತನ ಟಿ.ಎಸ್.ಸುಬ್ಬಣ್ಣ ಎಂದು ಶಾಸಕ ಸಿ.ಎಸ್. ನಿರಂಜನ ಕುಮಾರ್ ವರ್ಣಿಸಿದರು.

ವರುಣಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ತಾಯೂರು ಗ್ರಾಮದ ಟಿ.ಎಸ್.ಸುಬ್ಬಣ್ಣ ಸಾರ್ವಜನಿಕ ವಿದ್ಯಾಸಂಸ್ಥೆ ಆವರಣದಲ್ಲಿ ನಡೆದ ಸಂಸ್ಥೆ ನಿರ್ಮಾತೃ ಟಿ.ಎಸ್. ಸುಬ್ಬಣ್ಣ ಅವರ 31ನೇ ವರ್ಷದ ಸಂಸ್ಮರಣೆ ಹಾಗೂ ಶಾಲಾ ಸುತ್ತುಗೋಡೆ ಉದ್ಘಾಟನೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಟಿ.ಎಸ್.ಸುಬ್ಬಣ್ಣನವರು ಯಾವುದೇ ಸ್ವಾರ್ಥವಿಲ್ಲದೇ ಮಕ್ಕಳ ವಿದ್ಯಾಭ್ಯಾಸಕ್ಕಾಗಿ 11 ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿದರು. ಹಳ್ಳಿ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದೆಂದು ಪರಿಶ್ರಮ ಪಟ್ಟು, ಎಲ್ಲ ವರ್ಗದವರನ್ನು ಕ್ರೋಢೀಕರಿಸಿ, ವಂತಿಕೆ ಸಂಗ್ರಹಿಸಿ ತೆರೆದ ಸಂಸ್ಥೆ ಇಂದು ಹೆಮ್ಮರವಾಗಿ ಬೆಳೆದಿದೆ ಎಂದರು.

ಈ ಶಾಲೆಯಲ್ಲಿ ಓದಿದ ಮಕ್ಕಳು ಉನ್ನತ ಸ್ಥಾನಕ್ಕೇರಿ ದೊಡ್ಡ ಹುದ್ದೆ ಅಲಂಕರಿಸಿದ್ದಾರೆ. ಶಾಲೆಯಲ್ಲಿ ವ್ಯಾಸಾಂಗ ಮಾಡಿದ ವಿದ್ಯಾರ್ಥಿಗಳು ಉನ್ನತ ಸ್ಥಾನಕ್ಕೆ ಹೋದಾಗ ತಾವು ಓದಿದ ಶಾಲೆಗೆ ತಮ್ಮದೇ ಆದ ಕೊಡುಗೆ ನೀಡುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಬದಲಾವಣೆ ತರುವ ಉದ್ದೇಶ: ಮುಂಬರುವ ದಿನಗಳಲ್ಲಿ ಬಹಳಷ್ಟು ಬದಲಾವಣೆ ತರಲು ಧರ್ಮದರ್ಶಿ ಮಂಡಳಿ ಪ್ರಯತ್ನಿಸುತ್ತಿದೆ. 11 ಶಾಲೆಗಳಲ್ಲೂ ಈಗಾಗಲೇ ಕೆಲ ಬದಲಾವಣೆ ಆಗಿದೆ. ಹಳೇ ಕಟ್ಟಡಗಳ ನವೀಕರಣ, ಕೊರತೆ ಇರುವ ಶಾಲೆಯಲ್ಲಿ ಶಿಕ್ಷಕರನ್ನು ತುಂಬುವ ಕೆಲಸ ಮಾಡುತ್ತೇವೆ. ಸಂಸ್ಥೆಗೆ ಆದಾಯದ ಮೂಲಗಳು ಇಲ್ಲದಿದ್ದರಿಂದ ಸಮಾಜವನ್ನು ಕ್ರೋಢೀಕರಿಸಿ ಅಭಿವೃದ್ಧಿ ಕೆಲಸ ಮಾಡಬೇಕಿದೆ. ಆ ಪ್ರಯತ್ನ ಪ್ರಗತಿಯಲ್ಲಿದೆ ಎಂದರು.

ವಾಲ್ಮೀಕಿ ನಾಯಕ ಸಂಘಗಳ ಒಕ್ಕೂಟದ ಜಿಲ್ಲಾಧ್ಯಕ್ಷ ತಾಯೂರು ಪ್ರಕಾಶ್ ಮಾತನಾಡಿ, ಟಿ.ಎಸ್.ಸುಬ್ಬಣ್ಣನವರ ಅಸ್ತಿಯನ್ನು ವಿಸರ್ಜನೆ ಮಾಡುವ ಧೈರ್ಯ ಯಾರಿಗೂ ಇರಲಿಲ್ಲ. ಆದರೆ 31 ವರ್ಷಗಳ ನಂತರ ವಿಸರ್ಜನೆ ಮಾಡಲು ಮುಂದಾದ ಶಾಸಕ ನಿರಂಜನ್ ಕುಮಾರ್ ಕಾರ್ಯ ಶ್ಲಾಘನೀಯ ಎಂದರು.

ನಿವೃತ್ತ ಮುಖ್ಯ ಶಿಕ್ಷಕ ಮಹೇಶ್ ಪೂಜ್ಯರಿಗೆ ನುಡಿನಮನ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಲಾಯಿತು. ದಾನಿಗಳಿಗೆ ಗೌರವ ಸಮರ್ಪಣೆ ನಡೆಯಿತು.

ಕಾರ್ಯಕ್ರಮದಲ್ಲಿ ಪುರಸಭಾಧ್ಯಕ್ಷ ಎಸ್.ಮದನ್ ರಾಜ್, ಗ್ರಾಪಂ ಅಧ್ಯಕ್ಷ ಎಂ.ಬಸವರಾಜು, ಎಸ್‌ಡಿಎಂಸಿ ಅಧ್ಯಕ್ಷ ಟಿ.ಬಿ.ಮಲ್ಲಣ್ಣ, ಉಪಾಧ್ಯಕ್ಷ ಕಾಳನಾಯಕ, ಸದಸ್ಯ ಶಾಂತಪ್ಪ, ಧರ್ಮದರ್ಶಿ ಮಂಡಳಿ ಕಾರ್ಯದರ್ಶಿ ಸಿ.ರಾಜಣ್ಣ, ಡಾ.ಪಿ.ಎನ್. ಹರೀಶ್, ವಸಂತಮ್ಮ, ಡಿ.ಜಿ.ಸೋಮಶೇಖರಮೂರ್ತಿ, ಡಿ.ನಾಗುನಾಯ್ಕ್, ಶಾಲೆ ಮುಖ್ಯ ಶಿಕ್ಷಕ ಜಯಪ್ಪ, ಸಹ ಶಿಕ್ಷಕರಾದ ಎಸ್.ಪಿ. ಗಿರಿ ಪ್ರಸಾದ್, ಡಿ.ನಾಗರಾಜು, ಎಸ್.ಜಯಶಂಕರ್, ರಮೇಶ್, ರಶ್ಮಿ, ಸುಧಾಮಣಿ, ವಿರೂಪಾಕ್ಷ, ದೈಹಿಕ ಶಿಕ್ಷಕ ಟಿ.ಆರ್. ಮಂಜುನಾಥ್ ಸೇರಿದಂತೆ ಮತ್ತಿತರರಿದ್ದರು.

ಕೊಠಡಿ ನಿರ್ಮಾಣದ ಭರವಸೆ

ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ನನ್ನ ಅನುದಾನದಲ್ಲಿ ಶಾಲೆಗೆ ಒಂದು ಕೊಠಡಿ ಕಟ್ಟಿಸಿ ಕೊಡಲು ಬದ್ಧನಾಗಿದ್ದೇನೆ. ಅಲ್ಲದೇ ಶಾಲೆಗೆ ಇನ್ನು ಹೆಚ್ಚುವರಿ ಕೊಠಡಿ ಅವಶ್ಯಕತೆ ಇದ್ದು ಸಿಎಸ್‌ಆರ್ ಫಂಡ್ ಇದ್ದರೆ ಯಾವುದಾದರೂ ಕಂಪನಿಯಿಂದ ನಿರ್ಮಿಸಿಕೊಡಲು ಪ್ರಯತ್ನಿಸುತ್ತೇನೆ ಎಂದು ಭರವಸೆ ನೀಡಿದರು.

ಕ್ಷೇತ್ರದ ಅಭಿವೃದ್ಧಿಯೇ ನನ್ನ ಗುರಿ



ಮಲ್ಕುಂಡಿ, ಸೆ.11– ಕ್ಷೇತ್ರದ ಅಭಿವೃದ್ಧಿಯೇ ನನ್ನ ಗುರಿ ಎಂದು ಶಾಸಕ ಬಿ.ಹರ್ಷವರ್ಧನ್ ಹೇಳಿದರು.

ಇಲ್ಲಿಗೆ ಸಮೀಪದ ಮಲ್ಲಹಳ್ಳಿಯಲ್ಲಿ ಲೋಕೋಪಯೋಗಿ ಇಲಾಖೆಯ 5 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಕ್ಷೇತ್ರದ ಗ್ರಾಮಗಳಿಗೆ ಮೂಲ ಸೌಕರ್ಯ ಕಲ್ಪಿಸಲು ನಾನು ಶಾಸಕನಾದ ಬಳಿಕ ಸರ್ಕಾರದ ಮೇಲೆ ಒತ್ತಡ ಹೇರಿ ಸಾಕಷ್ಟು ಅನುದಾನ ತಂದಿದ್ದೇನೆ. ಕ್ಷೇತ್ರದ ಪ್ರತಿ ಗ್ರಾಮಗಳನ್ನು ಹಂತ ಹಂತವಾಗಿ ಅಭಿವೃದ್ಧಿ ಪಡಿಸಲಾಗುವುದು. ಕೊರೊನಾ ಹಿನ್ನೆಲೆಯಲ್ಲಿ ಕಾಮಗಾರಿ ಸ್ವಲ್ಪ ವಿಳಂಬವಾಗಿತ್ತು. ಸುಮಾರು ವರ್ಷಗಳಿಂದ ಹದಗೆಟ್ಟಿದ ಮಲ್ಲಹಳ್ಳಿ ರಸ್ತೆಯನ್ನು ನಾನು ಚುನಾವಣೆ ಸಂದರ್ಭ ಗ್ರಾಮಸ್ಥರಿಗೆ ನೀಡಿದ ಭರವಸೆಯಂತೆ ಸರ್ಕಾರದಿಂದ 5 ಕೋಟಿ ರೂ. ಅನುದಾನ ತಂದು ಅಭಿವೃದ್ಧಿ ಪಡಿಸುತ್ತಿದ್ದೇನೆ. ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿ ನಡೆಸಬೇಕು ಎಂದು ಸಲಹೆ ನೀಡಿದರು.

ಈ ವೇಳೆ ಜಿಪಂ ಮಾಜಿ ಸದಸ್ಯ ಚಿಕ್ಕರಂಗನಾಯಕ, ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ, ಬಿಜೆಪಿ ರಾಜ್ಯ ಕಾರ್ಯಕಾರಣಿ ಸದಸ್ಯ ಕುಂಬ್ರಳ್ಳಿ ಸುಬ್ಬಣ್ಣ, ಹುರ ಗ್ರಾಪಂ ಅಧ್ಯಕ್ಷ ಚಂದ್ರು, ಹಲ್ಲರೆ ಗ್ರಾಪಂ ಅಧ್ಯಕ್ಷ ಮಹದೇವಸ್ವಾಮಿ, ತಾಪಂ ಮಾಜಿ ಸದಸ್ಯ ಎಸ್.ಬಸವರಾಜ್, ಹೊಸವೀಡು ಶಿವರುದ್ರ, ಅಬ್ದುಲ್ ರಜಾಕ್, ಪುಟ್ಟಸ್ವಾಮಿ, ಜಗದೀಶ್, ಎಂ.ಜಿ.ಮಹದೇವಸ್ವಾಮಿ, ಮಹದೇವಯ್ಯ, ಇಂಜಿನಿಯರ್ ಜಯಕುಮಾರ್ ಸೇರಿದಂತೆ ಇತರರಿದ್ದರು.

ವೈ.ಆರ್.ಪ್ರಭಾಕರ್ ನಿಧನ



ಕೆ.ಆರ್.ನಗರ, ಸೆ.11– ಪಟ್ಟಣದ ವಾಣಿಜ್ಯೋದ್ಯಮಿ ವೈ.ಆರ್.ಪ್ರಭಾಕರ್(68) ಶನಿವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಪಟ್ಟಣದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಿನಲ್ಲಿ ಅರಣ್ಯ ಹುತಾತ್ಮರ ದಿನಾಚರಣೆ




ಮೈಸೂರಿನ ಅಶೋಕಪುರಂನಲ್ಲಿರುವ ಅರಣ್ಯ ಭವನದ ದಿ.ವೆಂಕಟಸ್ವಾಮಿ ಉದ್ಯಾನವನದಲ್ಲಿ ಭಾನುವಾರ ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನಾಚರಣೆಯಲ್ಲಿ ಎಪಿಸಿಸಿಎಫ್ ಜಗತ್‌ರಾಮ್, ಡಿಸಿಎಫ್ ಕಮಲಾ ವಿ.ಕರಿಕಾಳನ್ ಮತ್ತಿತರ ಅಧಿಕಾರಿಗಳು ಹುತಾತ್ಮ ಅರಣ್ಯ ಸಿಬ್ಬಂದಿಗೆ ಗೌರವ ಸಮರ್ಪಿಸಿದರು.

ಮೈಸೂರು, ಸೆ.10(ಎಸ್‌ಬಿಡಿ)– ಮೈಸೂರಿನ ಅಶೋಕಪುರಂನಲ್ಲಿರುವ ಅರಣ್ಯ ಭವನದ ಆವರಣದಲ್ಲಿ ಭಾನುವಾರ ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನಾಚರಣೆ ನಡೆಸಲಾಯಿತು.

ಅರಣ್ಯ ಭವನದ ಆವರಣದ ಲೇ.ವೆಂಕಟಸ್ವಾಮಿ ಉದ್ಯಾನವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 1966ರಿಂದ ಈವರೆಗೆ ಕರ್ತವ್ಯದ ವೇಳೆ ರಾಜ್ಯದ ವಿವಿಧೆಡೆ ಹುತಾತ್ಮರಾದ 54 ಅರಣ್ಯ ಇಲಾಖೆ ಅಧಿಕಾರಿ ಹಾಗೂ ಸಿಬ್ಬಂದಿ ಆತ್ಮಕ್ಕೆ ಶಾಂತಿಕೋರಿ ಹುತಾತ್ಮರ ಸ್ಮಾರಕಕ್ಕೆ ಪುಷ್ಪ ನಮನ ಸಮರ್ಪಿಸಲಾಯಿತು.

ಅತಿಥಿಗಳಿಗೆ ಹೂಗುಚ್ಛ ನೀಡಿ ಬರಮಾಡಿಕೊಂಡ ಬಳಿಕ ಪಥ ಸಂಚಲನದ ಮೂಲಕ ಗೌರವ ವಂದನೆ ಸಲ್ಲಿಸಲಾಯಿತು. ಬಳಿಕ ಎಪಿಸಿಸಿಎಫ್ ಜಗತ್ ರಾಮ್, ಮೈಸೂರು ವೃತ್ತದ ಸಿಎಫ್ ಡಾ.ಮಾಲತಿ ಪ್ರಿಯಾ, ಡಿಸಿಎಫ್‌ಗಳಾದ ಕಮಲಾ ವಿ.ಕರಿಕಾಳನ್, ಶ್ರೀಧರ್, ಪ್ರಸನ್ನ ಕುಮಾರ್ ಇನ್ನಿತರ ಅಧಿಕಾರಿಗಳು ಹುತಾತ್ಮರ ಸ್ಮಾರಕಕ್ಕೆ ಗೂಗುಚ್ಛ ಸಮರ್ಪಿಸಿ ನಮಸ್ಕರಿ ಸಿದರು. ಬಳಿಕ ವಿವಿಧ ಕ್ಷೇತ್ರದ ಗಣ್ಯರು, ಮಾಧ್ಯಮ ಪ್ರತಿನಿಧಿಗಳು, ಸಾರ್ವಜನಿಕರು ನಮನ ಸಲ್ಲಿಸಿದರು. ಈ ವೇಳೆ ವಾದ್ಯದಲ್ಲಿ ರಾಷ್ಟ್ರಗೀತೆ ನುಡಿಸಿ ಕೆಲ ಸಮಯ ಮೌನಾಚರಣೆ ಮೂಲಕ ಹುತಾತ್ಮರನ್ನು ಸ್ಮರಿಸಿದ ಬಳಿಕ ಪೊಲೀಸರು ಗಾಳಿಯಲ್ಲಿ ಮೂರು ಸುತ್ತು ಗುಂಡಿ ಹಾರಿಸಿ, ಗೌರವಾರ್ಪಣೆ ನೆರವೇರಿಸಿದರು.

ಡಿಸಿಎಫ್ ಕಮಲಾ ವಿ.ಕರಿಕಾಳನ್, ಕರ್ತವ್ಯ ವೇಳೆ ಹುತಾತ್ಮರಾದ 54 ಅರಣ್ಯ ಸಿಬ್ಬಂದಿ ಪಟ್ಟಿಯನ್ನು ಓದಿ, ಎಲ್ಲರ ಆತ್ಮಕ್ಕೂ ಶಾಂತಿ ಕೋರಿದರೆ, ಹಲವು ಗಣ್ಯರು ಮಾತನಾಡಿ ಹುತಾತ್ಮರ ತ್ಯಾಗಕ್ಕೆ ಬೆಲೆ ಕಟ್ಟಲಾಗದು. ಕಡಿಮೆ ಸಂಖ್ಯೆಯಲ್ಲಿದ್ದರೂ ನಮ್ಮ ಹಸಿರು ಸೇನಾನಿಗಳು ಅರಣ್ಯ ಸಂಪತ್ತು ರಕ್ಷಣೆಗೆ ಹಗಲಿರುಳು ಶ್ರಮಿಸುತ್ತಿದ್ದಾರೆ ಎಂದು ಬಣ್ಣಿಸಿದರು.

ದಿನಾಚರಣೆ ಹಿನ್ನೆಲೆ: 1730ರಲ್ಲಿ ಜೋಧಪುರ್‌ನ ಮಹಾರಾಜ ಅಭಯ ಸಿಂಗ್ ಸೈನಿಕರು ಹೊಸ ಅರಮನೆಗೆ ಅವಶ್ಯವಿದ್ದ ಕೆರ್ಜಿ ಮರಗಳನ್ನು ಕಡಿಯಲು ಮುಂದಾದಾಗ ಬಿಷ್ಣೋಯಿ ಸಮುದಾಯ ತೀವ್ರ ಆಕ್ಷೇಪ ವ್ಯಕ್ತಪಡಿಸಿತ್ತು. ಆ ವೇಳೆ ಸೈನಿಕರು 363 ಪುರುಷ, ಮಹಿಳೆ ಮತ್ತು ಮಕ್ಕಳನ್ನು ಹತ್ಯೆ ಮಾಡಿದರು. ಮರಗಳ ರಕ್ಷಣೆಗಾಗಿ ಬಲಿದಾನ ಮಾಡಿದ ಬಿಷ್ಣೋಯಿ ಸಮುದಾಯದವರನ್ನು ಸ್ಮರಿಸಿಕೊಳ್ಳುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನವೆಂದು ಘೋಷಿಸಿತು. ಅಂದಿನಿಂದ ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆಯ ನಿರ್ದೇಶನದಂತೆ ಸೆ.11ರಂದು ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನ ಆಚರಿಸಿ ಹುತಾತ್ಮ ಸಿಬ್ಬಂದಿಯನ್ನು ಸ್ಮರಿಸಲಾಗುತ್ತಿದೆ.

ಅರಣ್ಯ ಇಲಾಖೆಯ 'ವೀರ ಅಭಿಮನ್ಯು' ಎನ್ನಲಾಗುತ್ತಿದ್ದ ಉಪ ಅರಣ್ಯ ಸಂರಕ್ಷಣಾಧಿಕಾರಿ ಪಿ.ಶ್ರೀನಿವಾಸ್ ಅವರು, ವೀರಪ್ಪನ್ ನಯವಂಚನೆಯ ಚಕ್ರವ್ಯೂಹದಲ್ಲಿ ಸಿಲುಕಿ 1991ರ ನವೆಂಬರ್‌ನಲ್ಲಿ ಹುತಾತ್ಮರಾದರು. ಇವರಿಗೆ ಮರಣೋತ್ತರವಾಗಿ 'ಕೀರ್ತಿಚಕ್ರ' ಶೌರ್ಯ ಪ್ರಶಸ್ತಿ ಘೋಷಿಸಿ ಗೌರವಿಸಲಾಗಿದೆ. 2018ರಲ್ಲಿ ರಾಷ್ಟ್ರೀಯ ಉದ್ಯಾನವನ ಅರಣ್ಯದಲ್ಲಿ ಕಾಡ್ಗಿಚ್ಚು ಸಂಭವಿಸಿದಾಗ ಕಾರ್ಯಾಚರಣೆಯಲ್ಲಿ ತೊಡಗಿದ್ದ ಅರಣ್ಯ ಸಂರಕ್ಷಣಾಧಿಕಾರಿ ಎಸ್.ಮಣಿಕಂದನ್ ಕಾಡಾನೆ ದಾಳಿಯಿಂದ ಹುತಾತ್ಮರಾದರು. ಭಾರತ ಸರ್ಕಾರ ವಿಶ್ವ ಆನೆ ದಿನದಂದು ಎಸ್.ಮಣಿಕಂದನ್ ಅವರಿಗೆ 'ಎಲಿಫೆಂಟ್ ವಾರಿಯರ್' ಬಿರುದು ಘೋಷಿಸಿ, ಗೌರವ ಸಮರ್ಪಿಸಿದೆ. ಹೀಗೆ ರಾಜ್ಯದಲ್ಲಿ ಈವರೆಗೆ 54 ಅರಣ್ಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಅರಣ್ಯ ಸಂಪತ್ತು ರಕ್ಷಣೆ ವೇಳೆ ಹುತಾತ್ಮರಾಗಿದ್ದು, ಎಲ್ಲರನ್ನೂ ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನಾಚರಣೆಯಂದು ಸ್ಮರಿಸಿಕೊಂಡು ಗೌರವ ಸಮರ್ಪಿಸಲಾಗುತ್ತಿದೆ.

ಲಂಕಾ ಮುಡಿಗೆ ಏಷ್ಯಾಕಪ್ ಕಿರೀಟ



ದುಬೈ, ಸೆ.11– ಇಲ್ಲಿನ ಅಂತರ ರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಏಷ್ಯಾಕಪ್ ಟಿ20 ಟೂರ್ನಿಯ ಫೈನಲ್ ಪಂದ್ಯದಲ್ಲಿ ಪಾಕಿಸ್ತಾನ ವಿರುದ್ಧ ಶ್ರೀಲಂಕಾ 23ರನ್‌ಗಳ ಭರ್ಜರಿ ಗೆಲುವು ದಾಖಲಿಸುವ ಮೂಲಕ 6ನೇ ಬಾರಿಗೆ ಏಷ್ಯಾಕಪ್ ಚಾಂಪಿಯನ್ ಆಗಿ ಹೊರಹೊಮ್ಮಿತ್ತು.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಶ್ರೀಲಂಕಾ ಉತ್ತಮ ಆರಂಭ ಪಡೆದುಕೊಳ್ಳುವಲ್ಲಿ ವಿಫಲವಾಯಿತು. ಕುಸಾಲ್ ಮೆಂಡಿಸ್ ರನ್ ಖಾತೆ ತೆರೆಯುವ ಮೊದಲೇ ವಿಕೆಟ್ ಒಪ್ಪಿಸಿ ನಿರಾಶೆ ಮೂಡಿಸಿದರು. ಈ ವೇಳೆ ಪಥುಮ್ ನಿಸಾಂಕ 8, ಧನುಷ್ಕಾ ಗುಣತಿಲಕ 1ರನ್ ಒಬ್ಬರ ಹಿಂದೆ ಒಬ್ಬರು ವಿಕೆಟ್ ಒಪ್ಪಿಸಿ ಪೆವಿಲಿಯನ್ ಸೇರಿಕೊಂಡರು. ಮತ್ತೊಂದೆಡೆ ಉತ್ತಮವಾಗಿ ಬ್ಯಾಟ್‌ಬೀಸುತ್ತಿದ್ದ ಧನಂಜಯ ಡಿ.ಸಿಲ್ವ ಕೂಡ 28ರನ್ ಗಳಿಸಿ ವಿಕೆಟ್ ಒಪ್ಪಿಸಿದರು.

ರಾಜಪಕ್ಸ ಅರ್ಧ ಶತಕ: 58ರನ್‌ಗಳಿಗೆ ಪ್ರಮುಖ 5 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದ ತಂಡಕ್ಕೆ ಭಾನುಕ ರಾಜಪಕ್ಸ ಹಾಗೂ ವನಿಂದು ಹಸರಂಗ ತಂಡಕ್ಕೆ ಚೇತರಿಕೆ ನೀಡಿದರು. 6ನೇ ವಿಕೆಟ್‌ಗೆ ಈ ಜೋಡಿ 36 ಎಸೆತಗಳಿಂದ 58ರನ್ ಗಳಿಸಿದರು. ಈ ವೇಳೆ 21 ಎಸೆತಗಳಿಂದ 36 ರನ್ ಗಳಿಸಿದ ಹಸರಂಗ ವಿಕೆಟ್ ಒಪ್ಪಿಸಿದರು.

ತಂಡ ಸಂಕಷ್ಟದಲ್ಲಿದ್ದಾಗ ನೆರವಿಗೆ ನಿಂತ ಭಾನುಕ ರಾಜಪಕ್ಸ ಅರ್ಧ ಶತಕ ಬಾರಿಸಿ ಪಾಕಿಸ್ತಾನದ ಸಂಪೂರ್ಣ ಮೇಲುಗೈಗೆ ತಡೆಯೊಡ್ಡಿದರು. ಈ ಹಂತದಲ್ಲಿ ಪಾಕ್ ಕ್ಷೇತ್ರ ರಕ್ಷಣೆ ಕೂಡ ಕಳಪೆಯಾಗಿ ಕಂಡಿತು. ರಾಜಪಕ್ಸ 45 ಎಸೆತಗಳಲ್ಲಿ 6 ಬೌಂಡರಿ, 3 ಸಿಕ್ಸರ್‌ನಿಂದ ಅಜೇಯ 71 ರನ್ ಗಳಿಸಿದರು. ಅಂತಿಮವಾಗಿ ಶ್ರೀಲಂಕಾ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 170ರನ್‌ಗಳ ಸವಾಲಿನ ಮೊತ್ತ ದಾಖಲಿಸಿತು. ತಂಡದ ಪರ ಚಮಿಕ ಕರುಣ ರತ್ನೆ 14, ದಸುನ್ ಶನಕ 2ರನ್ ಗಳಿಸಿದರು. ಬೌಲಿಂಗ್‌ನಲ್ಲಿ ಪಾಕಿಸ್ತಾನ ಪರವಾಗಿ ಹ್ಯಾರಿಸ್ ರವೂಫ್ 3, ಶಾದಾಬ್ ಖಾನ್, ಇಫ್ತಿಕರ್‌ಅಹ್ಮದ್, ನಸೀಮ್ ಶಾ ತಲಾ ಒಂದೊಂದು ವಿಕೆಟ್ ಪಡೆದರು.

ಪಾಕ್ ಸರ್ವಪತನ: 171ರನ್‌ಗಳ ಸವಾಲಿನ ಮೊತ್ತ ಬೆನ್ನತ್ತಿದ್ದ ಪಾಕಿಸ್ತಾನ ನಿಗದಿತ 20 ಓವರ್‌ಗಳಲ್ಲಿ 147ರನ್‌ಗಳಿಗೆ ತನ್ನೆಲ್ಲಾ ವಿಕೆಟ್ ಕಳೆದುಕೊಂಡು ಶ್ರೀಲಂಕಾಗೆ ಶರಣಾಯಿತು. ತಂಡದ ಪರವಾಗಿ ಇನ್ನಿಂಗ್ಸ್ ಆರಂಭಿಸಿದ ನಾಯಕ ಬಾಬರ್ ಅಜಂ 5ರನ್ ಗಳಿಸಿ ವಿಕೆಟ್ ಒಪ್ಪಿಸಿದರೆ, ಫಖ್ರ್ ಜಮಾನ್ ರನ್ ಖಾತೆ ತೆರೆಯುವ ಮೊದಲೇ ಪೆವಿಲಿಯನ್ ಸೇರಿಕೊಂಡರು. ಈ ವೇಳೆ ತಂಡಕ್ಕೆ ಆಸರೆಯಾದ ವಿಕೆಟ್ ಕೀಪರ್ ಮಹಮ್ಮದ್ ರಿಜ್ವಾನ್ 49 ಎಸೆತಗಳಲ್ಲಿ 4 ಬೌಂಡರಿ, ಒಂದು ಭರ್ಜರಿ ಸಿಕ್ಸರ್‌ನಿಂದ 55ರನ್ ಗಳಿಸಿ ತಂಡದ ಮೊತ್ತ ಹೆಚ್ಚಿಸಿದರಾದರೂ ಗೆಲ್ಲುವು ತಂದು ಕೊಡುವಲ್ಲಿ ವಿಫಲರಾದರು.

ತಂಡದ ಪರವಾಗಿ ಇಫ್ತಿಕರ್‌ಅಹ್ಮದ್ 32, ಮಹಮ್ಮದ್ ನವಾಜ್ 6, ಹ್ಯಾರಿಸ್ ರವೂಫ್ 13ರನ್ ಗಳಿಸಿದರು. ಬೌಲಿಂಗ್‌ನಲ್ಲಿ ಶ್ರೀಲಂಕಾ ಪರವಾಗಿ ಪ್ರಮೋದ್ ಮದುಶಾನ್ 4, ವನಿಂದು ಹಸರಂಗ 3, ಚಮಿಕ ಕರುಣರತ್ನೆ 2, ಮಹೇಶ ತೀಕ್ಷಣ ಒಂದು ವಿಕೆಟ್ ಪಡೆದರು. ಉತ್ತಮ ಬ್ಯಾಟಿಂಗ್ ಮಾಡಿದ ಭಾನುರ ರಾಜಪಕ್ಸ ಪಂದ್ಯಶ್ರೇಷ್ಠ ಹಾಗೂ ಸರಣಿಯಲ್ಲಿ ಉತ್ತಮ ಪ್ರದರ್ಶನ ನೀಡಿದ ವನಿಂದು ಹಸರಂಗ ಸರಣಿ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಕೆ.ಸಿ.ಲೇಔಟ್ ಉದ್ಯಾನವನ ಬೋರ್‌ವೆಲ್‌ನಿಂದ

ಉಕ್ಕಿ ಹರಿಯುತ್ತಿದೆ ನೀರು

- ನೀರು ಪೋಲಾಗುವುದನ್ನು ತಡೆಯುವಲ್ಲಿ ಪಾಲಿಕೆ ನಿರ್ಲಕ್ಷ್ಯ
- ಸ್ಥಳೀಯರು, ವಾಯುವಿಹಾರಿಗಳಿಗೆ ನರಕಯಾತನೆ
- ಮಾಹಿತಿ ನೀಡಿದರೂ ಇತ್ತ ತಿರುಗಿ ನೋಡದ ಅಧಿಕಾರಿಗಳು




ಮೈಸೂರು, ಸೆ.10(ಎಸ್‌ಬಿಡಿ)– ಮೈಸೂರಿನ ಕೆ.ಸಿ.ಲೇಔಟ್ ಉದ್ಯಾನದಲ್ಲಿರುವ ಬೋರ್‌ವೆಲ್‌ನಿಂದ ಅಪಾರ ಪ್ರಮಾಣದ ನೀರು ಉಕ್ಕಿ ಚರಂಡಿ ಪಾಲಾಗುತ್ತಿದ್ದರೂ ಮಹಾನಗರ ಪಾಲಿಕೆ ನಿರ್ಲಕ್ಷ್ಯ ತಾಳಿರುವುದು ಅತ್ಯಂತ ವಿಷಾಧನೀಯ.

ಪ್ರಸ್ತುತ ಅತಿವೃಷ್ಟಿಯಿಂದ ಎಲ್ಲಿ ನೋಡಿದರೂ ನೀರು ಕಾಣಿಸುತ್ತಿರಬಹುದು. ಆದರೆ ಒಂದೊಂದು ಹನಿಗೂ ಪರಿತಪಿಸುವ ಕಾಲವೇನು ದೂರವಿಲ್ಲ. ಹಾಗಾಗಿ ಎಲ್ಲಾ ಸಂದರ್ಭದಲ್ಲೂ ನೀರಿನ ಮಿತವ್ಯಯ ಅತೀಮುಖ್ಯ. ಯಥೇಚ್ಛವಾಗಿ ಬಳಸಿದರೆ ಅದರ ಪರಿಣಾಮ ಗಂಭೀರವಾಗಿರುತ್ತದೆ. ಇನ್ನು ಅಪಾರ ಪ್ರಮಾಣದ ನೀರನ್ನು ಪೋಲು ಮಾಡಿದರೆ ಮತ್ತಾವ ರೀತಿಯ ದುಸ್ಥಿತಿ ಎದುರಾಗುತ್ತದೆ ಎಂದು ಊಹಿಸಿದರೂ ಆತಂಕವಾಗುತ್ತದೆ.

ಆದರೆ ಕೆ.ಸಿ.ಲೇಔಟ್‌ನ ಉದ್ಯಾನವನದಲ್ಲಿನ ಬೋರ್‌ವೆಲ್ ಉಪಕರಣ ಹಾಳಾಗಿದ್ದು, ನಿರಂತರವಾಗಿ ನೀರು ಉಕ್ಕಿ ಹರಿದು ಪಕ್ಕದ ರಾಜಕಾಲುವೆ ಸೇರುತ್ತಿದೆ. ಬೋರ್‌ವೆಲ್ ಸುತ್ತ ನೀರು ನಿಂತು ಪಾಚಿ ಬೆಳೆದಿದೆ. ನೀರು ಹರಿಯುವ ಜಾಗ ರಾಡಿಯಾಗಿದೆ. ಯಾವಾಗಲೂ ನೀರು ನಿಲ್ಲುವುದರಿಂದ ಸೊಳ್ಳೆಗಳ ಸಂತತಿ ಹೆಚ್ಚಲು ಕಾರಣವಾಗಿದೆ. ಉದ್ಯಾನಕ್ಕೆ ಬರುವ ವಾಯುವಿಹಾರಿಗಳಿಗೆ ಮಾತ್ರವಲ್ಲದೆ ಸುತ್ತಮುತ್ತಲ ನಿವಾಸಿಗಳಿಗೂ ತೊಂದರೆಯಾಗಿದೆ. ಅಪಾರ ಪ್ರಮಾಣದ ನೀರು ಪೋಲಾಗುತ್ತಿರುವ ಬಗ್ಗೆ ನಗರ ಪಾಲಿಕೆಗೆ ಮಾಹಿತಿ ನೀಡಿದ್ದರೂ ಯಾರೊಬ್ಬರೂ ತಿರುಗಿ ನೋಡಿಲ್ಲ. ಪಾರ್ಕ್ ನಿರ್ವಹಣೆ ವೇಳೆಯೂ ನೀರು ಪೋಲಾಗದಂತೆ ಸರಿಪಡಿಸುವ ಪ್ರಯತ್ನ ಮಾಡಿಲ್ಲ ಎಂದು ಸಾರ್ವಜನಿಕರು ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ.

ಇದೇ ಮೊದಲಲ್ಲ: ಬೋರ್‌ವೆಲ್ ಸುತ್ತಮುತ್ತ ಗಮನಿಸಿದರೆ ಹಲವು ತಿಂಗಳಿಂದ ನೀರು ಪೋಲಾಗುತ್ತಿರುವುದು ಸ್ಪಷ್ಟವಾಗುತ್ತದೆ. ನೀರು ಹರಿಯುವ ಜಾಗದಲ್ಲಿ ಭಾರೀ ಪಾಚಿ ಕಟ್ಟಿದೆ. ಸುತ್ತಮುತ್ತಲ ಪ್ರದೇಶವೆಲ್ಲಾ ಹಸಿಯಾಗಿದೆ. ವಾಕಿಂಗ್ ಪಾಥ್ ಕೂಡ ಹಾಳಾಗಿದೆ. ಈ ಸಮಸ್ಯೆ ಹೊಸದೇನಲ್ಲ. 2017ರ ಅಕ್ಟೋಬರ್‌ನಲ್ಲೂ ಹೀಗೆ ಸುಮಾರು 15 ದಿನ ಬೋರ್‌ವೆಲ್‌ನಿಂದ ನೀರು ಉಕ್ಕಿ ಹರಿದಿತ್ತು. ಆಗ ನಿವಾಸಿಯೊಬ್ಬರು ಬೋರ್‌ವೆಲ್ ನೀರು ಸೋರಿಕೆ ಬಗ್ಗೆ ನಗರ ಪಾಲಿಕೆಗೆ ಕರೆ ಮಾಡಿ ದೂರು ನೀಡಿದರೆ ಅದನ್ನು ಥೇಂಬರ್ ಸೋರಿಕೆ ಎಂದು ದಾಖಲಿಸಿಕೊಂಡು ನಿರ್ಲಕ್ಷ್ಯ ಮೆರೆಯಲಾಗಿತ್ತು. ಅಲ್ಲದೆ ಯಾವುದೋ ಒಂದು ಥೇಂಬರ್ ದುರಸ್ತಿ ಮಾಡಿದ ಬಳಿಕ ಬೋರ್‌ವೆಲ್ ಸೋರಿಕೆ ದೂರು ನೀಡಿದ್ದವರಿಗೆ ಕರೆ ಮಾಡಿ ನಿಮ್ಮ ಸಮಸ್ಯೆ ಬಗೆಹರಿಸಲಾಗಿದೆ ಎಂದು ಸ್ಪಷ್ಟನೆಯನ್ನೂ ನೀಡಿದ್ದರು. ದುರಂತವೆಂದರೆ ಬೋರ್‌ವೆಲ್ ಸಮಸ್ಯೆಯತ್ತ ಕಣ್ಣು ಹಾಯಿಸಿರಲಿಲ್ಲ. ಪಾಲಿಕೆಯವರ ಆ ಎಡವಟ್ಟಿನ ಬಗ್ಗೆ 2017ರ ಅಕ್ಟೋಬರ್ 10ರ 'ಮೈಸೂರು ಮಿತ್ರ' ಸಂಚಿಕೆಯಲ್ಲಿ 'ಕೆ.ಸಿ.ನಗರ ಪಾರ್ಕ್‌ನಲ್ಲಿ 12 ದಿನದಿಂದ ಬೋರ್‌ವೆಲ್ ಸೋರಿಕೆ' ಶೀರ್ಷಿಕೆಯಡಿ ಸಚಿತ್ರ ವರದಿ ಪ್ರಕಟವಾದ ಬಳಿಕ ಸಮಸ್ಯೆ ಸರಿಪಡಿಸಲಾಗಿತ್ತು. ಆದರೆ ಶಾಶ್ವತ ಪರಿಹಾರ ಕ್ರಮಕ್ಕೆ ಈವರೆಗೂ ಮುಂದಾಗಿಲ್ಲ. ತಾತ್ಕಾಲಿಕವಾಗಿ ರಿಪೇರಿ ಮಾಡಿ ಕೈ ತೊಳೆದುಕೊಳ್ಳುವುದರಿಂದ ಮತ್ತೆ ಮತ್ತೆ ಸಮಸ್ಯೆ ಎದುರಾಗುತ್ತಿದೆ. ಪರಿಣಾಮ ಅಪಾರ ಪ್ರಮಾಣದ 'ಜೀವಜಲ' ಚರಂಡಿ ಪಾಲಾಗುತ್ತಿದೆ. ಈಗಲಾದರೂ ಪಾಲಿಕೆ ಸೂಕ್ತ ಕ್ರಮ ಕೈಗೊಳ್ಳು ವುದೇ? ಎಂಬ ನಿರೀಕ್ಷೆ ಸ್ಥಳೀಯರದ್ದಾಗಿದೆ.

ಎಸ್‌ಪಿವಿಜಿಎಂಸಿ ಟ್ರಸ್ಟ್‌ನ 10 ದಿನಗಳ ಗಣೇಶೋತ್ಸವ ಕಾರ್ಯಕ್ರಮ ಸಮಾರೋಪ

ಮೈಸೂರು, ಸೆ.11(ಎಸ್‌ಪಿಎನ್)– ಮೈಸೂರಿನ ವಿವಿ ಮೊಹಲ್ಲಾದಲ್ಲಿ ಎಸ್‌ಪಿವಿಜಿಎಂಸಿ ಟ್ರಸ್ಟ್‌ನಿಂದ ಆಯೋಜಿಸಿದ್ದ ಗಣೇಶೋತ್ಸವದ 10 ದಿನಗಳ 61ನೇ ಪಾರಂಪರಿಕ ಸಂಗೀತೋತ್ಸವ ಕಾರ್ಯಕ್ರಮ ಭಾನುವಾರ ಮುಕ್ತಾಯಗೊಂಡಿತು.

ಪದ್ಮವಿಭೂಷಣ ಉಮಯಾಳಪುರಂ ಕೆ.ಶಿವರಾಮನ್, ವಿದ್ವಾನ್ ಸಂದೀಪ್ ನಾರಾಯಣ್, ವಿದ್ವಾನ್ ಎಚ್.ಎನ್. ಭಾಸ್ಕರ್, ವಿದ್ವಾನ್ ಗುರು ಪ್ರಸನ್ನ ಅವರ ಗಾಯನದೊಂದಿಗೆ ಪಾರಂಪರಿಕ ಸಂಗೀತೋತ್ಸವ ಕಾರ್ಯಕ್ರಮ ಮುಕ್ತಾಯಗೊಂಡಿತು.

ಈ ವೇಳೆ ಮಾಜಿ ಶಾಸಕ ವಾಸು, ಎಸ್‌ಪಿವಿಜಿಎಂಸಿ ಟ್ರಸ್ಟ್ ಉಪಾಧ್ಯಕ್ಷ ಎಂ.ಲಕ್ಷ್ಮೀನಾರಾಯಣ್, ಕಾರ್ಯದರ್ಶಿ ಸಿ.ಆರ್.ಹಿಮಾಂಶು, ಆರ್.ಗುರುರಾಜ್, ಧರ್ಮದರ್ಶಿಗಳಾದ ಟಿ.ಎಸ್.ವೇಣು ಗೋಪಾಲ್, ಶೈಲಜ, ಅಮರೇಶ್ ದಾಸ್, ಎಂ.ಕೆ.ಶ್ರೀಧರ್, ವಸಂತ್, ಸಿ.ಚೆಲುವರಾಜು ಉಪಸ್ಥಿತರಿದ್ದರು. ಇದಕ್ಕೂ ಮುನ್ನ ಬೆಳಗ್ಗೆ ಚಳ್ಳಕೆರೆ ಸಹೋದರರಿಂದ ಧನ್ವಂತರಿ ಹೋಮ ನಡೆಯಿತು.

ಅಭಿನಂದನೆಗಳು




ವೀಕ್ಷಕರ ನೇಮಕ..... ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಎಸ್‌ಸಿ ಘಟಕದ ರಾಜ್ಯಾಧ್ಯಕ್ಷ ಆರ್.ಧರ್ಮಸೇನರವರು ಎಸ್.ಸೋಮಶೇಖರ್ ಇವರಿಗೆ ಕೊಡಗು ಜಿಲ್ಲಾ ವೀಕ್ಷಕರನ್ನಾಗಿ ನೇಮಕ ಮಾಡಿದ ಆದೇಶ ಪತ್ರ ನೀಡಿದರು. ಈ ಸಂದರ್ಭದಲ್ಲಿ ವರುಣಾ ವಿ.ಸ.ಕ್ಷೇತ್ರದ ಮಹದೇವ ಗಾಣಿಗರವರು ಉಪಸ್ಥಿತರಿದ್ದರು.

ವಿಮಾನದಲ್ಲಿ ಪ್ರಜ್ಞಾಹೀನಳಾಗಿ ಮಹಿಳೆ ಸಾವು

ತಿರುವನಂತಪುರಂ, ಸೆ.11– ದುಬೈನಿಂದ ಬಂದ ವಿಮಾನದಲ್ಲಿ ಮಹಿಳಾ ಪ್ರಯಾಣಿಕರೊಬ್ಬರು ಪ್ರಜ್ಞಾಹೀನಳಾಗಿ, ಮೃತಪಟ್ಟ ಘಟನೆ ಕೊಚ್ಚಿಯಲ್ಲಿ ನಡೆದಿದೆ.

ಮಿನಿ(56) ಅವರು ದುಬೈನಿಂದ ಕೊಚ್ಚಿಗೆ ವಿಮಾನದ ಮೂಲಕ ಹೋಗುತ್ತಿದ್ದರು. ಆ ಸಮಯದಲ್ಲಿ ಮಿನಿ ಪ್ರಜ್ಞಾಹೀನ ರಾಗಿದ್ದಾರೆ. ವಿಮಾನ ಲ್ಯಾಂಡ್ ಆದ ನಂತರ ತಕ್ಷಣ ಆಕೆಯನ್ನು ಹತ್ತಿರದ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ ಅಲ್ಲಿ ವೈದ್ಯರು ಮಿನಿ ಸಾವನ್ನಪ್ಪಿದ್ದಾರೆ ಎಂದು ಘೋಷಿಸಿದರು. ಆಕೆ ಕೆಲವು ಕಾಯಿಲೆಗಳಿಗೆ ಚಿಕಿತ್ಸೆ ಪಡೆಯುತ್ತಿದ್ದಳು. ಇದರಿಂದಾಗಿ ಸಾವನ್ನಪ್ಪಿದ್ದಾಳೆ ಎಂದು ವಿಮಾನ ನಿಲ್ದಾಣದ ಮೂಲಗಳು ತಿಳಿಸಿವೆ. ಈ ಬಗ್ಗೆ ಪೊಲೀಸರು ಯಾವುದೇ ಪ್ರಕರಣ ದಾಖಲಿಸಿಕೊಂಡಿಲ್ಲ. ಬದಲಿಗೆ ಸಹಜ ಸಾವು ಎಂದೇ ಪರಿಗಣಿಸಿದ್ದಾರೆ.

'ಜಗ ನಡೆಯಲಿ ಬುದ್ಧನ ಕಡೆ' ಸಂಗೀತ ಕಾರ್ಯಕ್ರಮ



ಮೈಸೂರು, ಸೆ.11– ಬುದ್ಧನ ಆದರ್ಶವನ್ನು ಪಾಲಿಸಿದರೆ ದೇಶ ಪ್ರಬುದ್ಧವಾಗತ್ತದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ಹೇಳಿದರು.

ನಗರದ ನಗರದ ಕೃಷ್ಣಮೂರ್ತಿಪುರಂನ ವಿಶ್ವಮೈತ್ರಿ ಬುದ್ಧ ವಿಹಾರದಲ್ಲಿ ತನುಮನ ಸಂಸ್ಥೆಯು ಶನಿವಾರ ಹಮ್ಮಿಕೊಂಡಿದ್ದ 'ಜಗ ನಡೆಯಲಿ ಬುದ್ಧನ ಕಡೆ' ಸಂಗೀತ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಪಂಚದಲ್ಲಿ ಮೊದಲು ಮಹಿಳೆಯರಿಗೆ ಸಮಾನತೆ ಸಿಕ್ಕಿದ್ದು ಬುದ್ಧನಿಂದ. ಹೀಗಾಗಿಯೇ ಡಾ.ಬಿ.ಆರ್.ಅಂಬೇಡ್ಕರ್ ಅವರು ಮಹಿಳೆಯರಿಗೆ ಸಮಾನತೆ ನೀಡಲು ಮುಂದಾದರು. ಸಂವಿಧಾನದ ಬಹುಭಾಗವು ಬುದ್ಧನ ತತ್ವಾದರ್ಶಗಳಿಂದ ಕೂಡಿದೆ. ಬುದ್ಧ, ಬಸವ, ಅಂಬೇಡ್ಕರ್ ಅವರನ್ನು ಒಂದು ಜಾತಿಗೆ ಸೀಮಿತಗೊಳಿಸಬಾರದು. ನಾವೆಲ್ಲರೂ ಬುದ್ಧನ ಕಡೆಗೆ ಮುಖ ಮಾಡಬೇಕು ಎಂದು ತಿಳಿಸಿದರು . ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಯೋಜನಾ ಇಲಾಖೆ ಪ್ರದೇಶಾಭಿವೃದ್ಧಿ ಮಂಡಳಿ ನಿರ್ದೇಶಕ ದಿ.ಚಂದ್ರಶೇಖರಯ್ಯ, ಮುಖಂಡ ಚಿಕ್ಕಜವರಪ್ಪ, ಮೈಸೂರು ವಕೀಲರ ಸಂಘದ ಕಾರ್ಯದರ್ಶಿ ಎಸ್.ಉಮೇಶ್, ಪ್ರಥಮ ದರ್ಜೆ ಸಹಾಯಕಿ ಚಂದ್ರಕಲಾ, ಸಮಾಜ ಕಲಾ ಇಲಾಖೆ ಪರಿವೀಕ್ಷಣಾಧಿಕಾರಿ ಕೆ.ಸೋಮಯ್ಯ, ಲಕ್ಷ್ಮಿರಾಮ್, ಮಾದೇಶ್ ಚಿಕ್ಕನಂದಿ, ಗಣೇಶ್ ಮಲಾರ ಸೇರಿದಂತೆ ಮತ್ತಿತರರು ಇದ್ದರು.